ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್


ಆಗಸ್ಟ್ 15, 2012 ಪುಟ 20 ರೂ. 14/-

ವೈದೇಹಿಯ ಮಡಿಲಿನಂತ ಮಂಗಳೂರೇ ನಿನಗೇನಾಗಿದೆ?

ಕೇಸರಿ ಕಿರಾತಕರ ಕಾಮೋನ್ಮಾದ



ಚೆಡ್ಡಿ ರಿಪಬ್ಲಿಕ್



ಬೆಮೆಲ್ ಹತ್ಯೆಯಲ್ಲಿ ಯಾರ್ಯಾರು?



ಲಿಂಗಣ್ಣ ಸತ್ಯಂಪೇಟೆ ನಿಗೂಢ ಸಾವು



ರಿಯಲ್ ಲೈಫ್‌ನಲ್ಲೂ ಹೀರೋಗಳು



ಇಲ್ಲಿ ಬಡತನ ನಿರ್ಮೂಲನೆಯೂ ಬಡಜನರ ಹಕ್ಕಿನ ಭಾಷೆಯಾಗಲೇ ಇಲ್ಲ. ಹಾಗೆಯೇ ಸಮಾನ ಮತ್ತು ಗುಣಮಟ್ಟದ ಶಿಕ್ಷಣ ಬಡಜನರ ಹಕ್ಕಿನ ಭಾಷೆಯಲ್ಲಿ ಚರ್ಚಿತವಾಗದೆ ಅದು ಮೇಲ್ವರ್ಗದ ಔದಾರ್ಯದ ಭಾಗವಾಗಿ ನೀಡುವ ದಾನದ ಭಾಷೆಯಲ್ಲಿ ಚರ್ಚಿತವಾಗುತ್ತಿದೆ. *RTE* ಯೋಜನೆ ಶೇ.25ರಷ್ಟು ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸಿಕೊಳ್ಳುವುದನ್ನು ಕಡ್ಡಾಯ ಮಾಡುವಾಗಲೇ ಒಂದಷ್ಟು ಹಕ್ಕಿನ ಪರಿಭಾಷೆಯನ್ನು ಮತ್ತು ಅದರ ಆಚರಣೆಗೆ ಅವಕಾಶವನ್ನೂ ಕಲ್ಪಿಸುವಂಥಾ ಸಾಧ್ಯತೆಗಳನ್ನು ಸೇರಿಸಿದ್ದರೂ ಅದರ ಮೂಲ ತಳಹದಿಯಲ್ಲೆ ಖಾಸಗಿ ಲಾಭವನ್ನು ಖಾತರಿ ಮಾಡುತ್ತಾ ಅದರೊಳಗೆ ಒಂದಷ್ಟು ಬಡವರಿಗೂ ಅವಕಾಶ ಕಲ್ಪಿಸಿ ಎನ್ನುವ ಅಂಗಲಾಚಿಕೆಯ ದೀನತೆ ಇದೆ.



ಚಾರ್ವಾಕ

• ಶಿವಸುಂದರ್

'ಸತ್ಯಮೇವ ಜಯತೆ'ಗೆ ಸುರಿಸಿದ ಕಣ್ಣೀರು RTE ವಿದ್ಯಾರ್ಥಿಗಳ ಕೂದಲನ್ನು ಕಾಪಾಡಬಲ್ಲದೇ?

ಕೂದಲೂ ಕೊಂಕದಂತೆ ಧಿಮ್ಮನೆ ಲಾಭ ಮಾಡಿಕೊಂಡಿದ್ದ ಖಾಸಗಿ ಶಾಲೆಗಳಿಗೆ RTE ರೂಲ್ಸುಗಳು ಬಿಸಿ ತುಪ್ಪದಂತಾಗಿ ಮೈಕೈ ಪರಚಿಕೊಳ್ಳುವಂತಾಗಿದೆ. ಸಿಟ್ಟಿನಿಂದ ಸರ್ಕಾರಕ್ಕೆ ಪರಚಲು ಹೋದ ಕುಸ್ಮಾ (KUSMA- ಖಾಸಗಿ ಪ್ರಾಥಮಿಕ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ) ದ ದಳಗಳೆ ಉದುರಿಹೋಗಿ ಇನ್ನಷ್ಟು ಗಾಯಗೊಂಡಂತಾಗಿರುವಾಗಲೇ, ಕೈಲಾಗದವರು ಅದೇನೋ ಮಾಡುವಂತೆ ನಂದಿನಿ ಲೇಔಟಿನ ಆಕ್ಸ್‌ಫರ್ಡ್ ಶಾಲೆಯು RTE ಕೋಟಾದ ಮಕ್ಕಳ ಕೂದಲನ್ನು ಕತ್ತರಿಸಿರಬಹುದೇ? ಅಥವಾ ಮೇನೇಜ್‌ಮೆಂಟಿನ ಈ ಅರಚಾಟ ಮತ್ತು ಪರಚಾಟ ನೋಡಿ ಕುಸ್ಮಾದ ಮಕ್ಕಳೇ RTE ಮಕ್ಕಳ ಕೂದಲು ಕತ್ತರಿಸಿರಬಹುದೇ? ಅಥವಾ ಪ್ರತಿ ಭಾನುವಾರ ಅಮೀರ್ ಖಾನ್‌ನ 'ಸತ್ಯಮೇವ ಜಯತೆ' ಕಾರ್ಯಕ್ರಮದಲ್ಲಿ ಟಿವಿಯೊಳಗಿನ ಬಡಮಕ್ಕಳನ್ನು ಕಂಡು ಮನಕರಗಿ ಕಣ್ಣೀರು ಸುರಿಸುವ ಈ ಮೃದೂನಿ "ಕುಸ್ಮಾ"ದಪಿ ವರ್ಗ ಬಡಮಕ್ಕಳು ತಮ್ಮ ಪರಿಧಿಯೊಳಗೇ ಬಂದರೆ ವಜ್ರಾದಪಿ ಕಠೋರಾಣಿ ಆಗುವ ಬಗೆಯನ್ನು ಕಂಡು ಕನಲಿ, ಕನ್ಫ್ಯೂಸ್ ಆಗಿ ಮಕ್ಕಳೇ ತಮ್ಮ ಕೂದಲನ್ನು ಕಿತ್ತುಕೊಂಡರೋ ಇನ್ನೂ ತಿಳಿದುಬರಬೇಕಿದೆ.

ಅದೇನೇ ಇರಲಿ ಈಗಾಗಲೇ ಸರ್ಕಾರ ರಾಡಿಯಲ್ಲಿರುವ ಈ ಮಕ್ಕಳ ಮಾತನ್ನು ಸುಳ್ಳೆಂದು ಪರಿಗಣಿಸಿ ಕುಸ್ಮಾದ ಪರವಾಗಿ ನಿಂತಿದೆ. ವಿಚಾರಣೆಗೆ ಮುನ್ನವೇ ತೀರ್ಮಾನ ನೀಡಿ ಕುಸ್ಮಾದ ಕೂದಲೂ ಕೊಂಕದಂತೆ ಕಾಪಾಡಿದೆ. ಆಕ್ಸ್‌ಫರ್ಡ್ ಮಕ್ಕಳ ಕೂದಲು ಕತ್ತರಿಸಿದ್ದು ಯಾರು ಎಂಬ ಕೂದಲು ಸೀಳುವ ತರ್ಕವೇನೂ ಅಲ್ಲವಾದರೂ ಅದಕ್ಕಿಂತ ಇನ್ನು ಮೂಲಭೂತವಾದ ಕೆಲವು ಪ್ರಶ್ನೆಗಳನ್ನು ಈ ಪ್ರಕರಣ ಮುಂದಿರಿಸುತ್ತಿದೆ. ಆಕ್ಸ್‌ಫರ್ಡ್ ಶಾಲೆಯ ಮಕ್ಕಳ ಕೂದಲನ್ನು ಯಾರೇ ಕತ್ತರಿಸಿರಬಹುದು ಆದರೆ ಡೊನೇಷನ್ ಕೊಡದ, ಒಳ್ಳೆ ಬಟ್ಟೆ, ಪೌಡರ್ ಸ್ನೋ ಹಾಕದ, ಸುಶಿಕ್ಷಿತ ಪೋಷಕರಿಲ್ಲದ ಈ ಬಡಮಕ್ಕಳ ಭವಿಷ್ಯ ಕತ್ತರಿಸುವಂತ ಮತ್ತು ಈ RTE ಕೋಟಾದ ಮಕ್ಕಳನ್ನು ಶಾಲೆಯಿಂದ ಹೊರಗೆ ತಳ್ಳುವಷ್ಟು ಅಸಹನೆ ಖಾಸಗಿ ಆಡಳಿತ ಮಂಡಳಿಯಲ್ಲಿ ಇದೆಯೋ ಇಲ್ಲವೋ? ಇದ್ದರೆ ಇಂಥಾ ಅಸಹನೆ ತುಂಬಿದ ವಾತಾವರಣ ಬಡಮಕ್ಕಳ ಮೇಲೆ ಮಾಡುವ ಶೈಕ್ಷಣಿಕ, ಮಾನಸಿಕ ಹಾಗೂ ಸಾಂಸ್ಕೃತಿಕ ಪರಿಣಾಮಗಳೇನು? ಅಂಥಾ ಪರಿಣಾಮಗಳನ್ನು ತಡೆಗಟ್ಟಲು ನಾಗರಿಕ ಸಮಾಜ ಮತ್ತು ಪ್ರಭುತ್ವ ತೆಗೆದುಕೊಳ್ಳಬೇಕಾದ ಕ್ರಮಗಳೇನು ಎಂಬ ಗಂಭೀರವಾದ ಮತ್ತು ಮೂಲಭೂತವಾದ ವಿಷಯಗಳತ್ತ ಈ ಪ್ರಕರಣ ನಮ್ಮನ್ನು ದೂಡುತ್ತಿದೆ.

ಹಾಗೆ ನೋಡಿದರೆ 2009ರಲ್ಲಿ ಕೇಂದ್ರ ಸರ್ಕಾರ RTE ಬಗ್ಗೆ ಕಾಯಿದೆ ಮಾಡಿದಾಗಲೇ ಖಾಸಗಿ ಶಾಲೆಗಳು ಅದರಲ್ಲೂ "ಸಂಸ್ಕಾರ"ವಂತರು ಮತ್ತು "ನಾಗರಿಕ ಸಮಾಜದ" ಅತ್ಯುನ್ನತ ಶ್ರೇಣಿಯ ಜನರ ಮಕ್ಕಳು ಓದುವ ಬೆಂಗಳೂರಿನ ಬಾಲ್ಡ್‌ವಿನ್ ಮತ್ತಿತರ ಖಾಸಗಿ ಶಾಲೆಗಳ ಮೇನೇಜ್‌ಮೆಂಟುಗಳು ತಮ್ಮ ವಿದ್ಯಾರ್ಥಿಗಳ ಪೋಷಕರಿಗೆ ಸುತ್ತೋಲೆಯೊಂದನ್ನು ಕಳಿಸಿ "ಈ RTE ಕೋಟಾದ ಮಕ್ಕಳನ್ನು ನಮ್ಮಂಥ ಪ್ರತಿಷ್ಠಿತ ಶಾಲೆಗೆ ಸೇರಿಸಿಕೊಂಡರೆ ನಿಮ್ಮ ಮಕ್ಕಳ ಸಂಸ್ಕೃತಿ-ಸಂಸ್ಕಾರಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಆದ್ದರಿಂದ ಈ ಕಾಯಿದೆಯನ್ನು ವಿರೋಧಿಸಿ" ಎಂದು ಮನವಿ ಮಾಡಿದ್ದರು. 'ಸತ್ಯಮೇವ ಜಯತೆ' ಕಾರ್ಯಕ್ರಮದಲ್ಲಿ ಬಡತನ ಮತ್ತು ದಲಿತರ ಪರಿಸ್ಥಿತಿ ನೋಡಿ ಎಲ್ಲೋ ಒಂದು ಕಡೆ ನೈಜವಾಗಿ ಮರುಗುವ ಈ ಮಧ್ಯಮ ಮತ್ತು ಮೇಲ್ ಮಧ್ಯಮವರ್ಗವೇ ಇಂಥಾ ಪ್ರತಿಷ್ಠಿತ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಓದಿಸುತ್ತಾರೆ. ಆದರೆ ಟಿವಿಯಲ್ಲಿ ಕಂಡ ದಲಿತ ಮತ್ತು ಬಡಮಕ್ಕಳು ತಮ್ಮ ಮಕ್ಕಳೊಂದಿಗೇ ಶಾಲೆಯಲ್ಲಿ ಒಟ್ಟಿಗೆ ಕಲಿಯುತ್ತಾರೆ ಎಂದಾಗ ಅವರಿಗೆ ದಲಿತರ ಬಗ್ಗೆ ಮತ್ತು ಬಡವರ ಬಗ್ಗೆ ರೂಢಿಸಿಕೊಂಡುಬಂದ ಎಲ್ಲಾ ಪೂರ್ವಗ್ರಹಗಳು ಆಮರಿಕೊಂಡು ಬಿಡುತ್ತವೆ. ಮೊನ್ನೆ ಆಕ್ಸ್‌ಫರ್ಡ್ ಶಾಲೆಯ ಎದುರು ಮೇನೇಜ್‌ಮೆಂಟಿನ ಕ್ರಮವನ್ನು ವಿರೋಧಿಸುತ್ತಿದ್ದ ಹೋರಾಟಗಾರರ ಮೇಲೆ ಪೋಷಕರೇ ತಿರುಗಿಬಿದ್ದದ್ದು ಸಹ ಇದನ್ನೇ ಸೂಚಿಸುತ್ತದೆ.

ಮಧ್ಯಮವರ್ಗದ ಔದಾರ್ಯದ ಮಿತಿಗಳ ಬಗ್ಗೆ ನಂತರ ಚರ್ಚಿಸೋಣ. ಈಗ ಸದ್ಯಕ್ಕೆ ಬಡವರ ಬಗ್ಗೆ ಮತ್ತು RTE ಕೋಟಾದ ಮಕ್ಕಳ ಬಗ್ಗೆ ಈ ರೀತಿಯ ಪೂರ್ವಾಗ್ರಹವಂತೂ ಖಾಸಗಿ ಶಾಲೆಗಳ ಮೇನೇಜ್ಮೆಂಟುಗಳಲ್ಲಿ ಮತ್ತು ಅಲ್ಲಿಗೆ ತಮ್ಮ ಮಕ್ಕಳನ್ನು ಕಳಿಸುವ ಮಧ್ಯಮ ಮತ್ತು ಮೇಲ್ ಮಧ್ಯಮ ಹಾಗೂ ಶ್ರೀಮಂತ ವರ್ಗಗಳಲ್ಲಿ ಮನೆ ಮಾಡಿರುವುದಂತೂ ನಿಜ. 2010ರಲ್ಲಿ ದೇಶದ ಪ್ರತಿಷ್ಠಿತ ಶಾಲೆಗಳ ಪ್ರಿನ್ಸಿಪಾಲರುಗಳನ್ನು ಸಂದರ್ಶಿಸಿದಾಗ ಬಹುಪಾಲು ಪ್ರಾಂಶುಪಾಲರು RTE ಯ ಘನವಾದ



ಉದ್ದೇಶವನ್ನು ಮೆಚ್ಚಿಕೊಂಡಂತೆ ಮಾತಾಡಿದರೂ ಇತರೆ ಸಂಸ್ಕೃತಿಯ ವಿದ್ಯಾರ್ಥಿಗಳು ತಮ್ಮ ಶಾಲೆಗೆ ಬರುವುದರ ಬಗ್ಗೆ ಮತ್ತು ಡೊನೇಷನ್‌ಗೆ ಮಿತಿ ವಿಧಿಸುವುದರ ಬಗ್ಗೆ ಅಪಾರವಾದ ಆತಂಕವನ್ನು ವ್ಯಕ್ತಪಡಿಸಿದ್ದರು. ಕೆಲವು ಪ್ರಾಂಶುಪಾಲರಂತೂ ತಮ್ಮ ಶಾಲೆಗಳಿಗೆ ಎಂಥಾ ಮಕ್ಕಳನ್ನು ಸೇರಿಸಿಕೊಳ್ಳಬೇಕು ಅಥವಾ ಬೇಡ ಎನ್ನುವ ಅಧಿಕಾರ ಕಿತ್ತುಕೊಂಡರೆ ತಮ್ಮ ಶಾಲೆಯ ಅಕೆಡೆಮಿಕ್ ಮಟ್ಟ ಇಳಿದು ಬಿಡುತ್ತದೆ ಎಂದು ಬಹಿರಂಗವಾಗಿಯೇ ಹೇಳಿದ್ದರು. ಇನ್ನು ಕೆಲವರು "ಇತರೆ ಸಂಸ್ಕೃತಿ"ಯ ವಿದ್ಯಾರ್ಥಿಗಳು ತಮ್ಮ ಶಾಲೆಗೆ ಬಂದು ತಮ್ಮ ಶಾಲೆಯ "ಶಿಸ್ತನ್ನು" ಉಲ್ಲಂಘಿಸಿದರೆ ಅದನ್ನು ಶಿಕ್ಷಿಸುವುದನ್ನು ತಡೆಗಟ್ಟುವ RTE ನೀತಿ ಶಾಲಾ ನೀತಿಸಂಹಿತೆಗೇ ಮಾರಕ ಎಂದು ಅಭಿಪ್ರಾಯ ಪಟ್ಟಿದ್ದರು. ಹೀಗಾಗಿಯೇ ಆಕ್ಸ್‌ಫರ್ಡ್ ಶಾಲೆಯಲ್ಲಿ ನಡೆದ ಘಟನೆ ಕೂದಲು ಕತ್ತರಿಸಿದ ಕ್ರಿಯೆಯ ಬಗ್ಗೆ ಮಾತ್ರ ಸೀಮಿತಗೊಂಡರೆ ಏನೂ ಪ್ರಯೋಜನವಿಲ್ಲ. ಬಡಮಕ್ಕಳ ಬಗ್ಗೆ ಸಮಾಜದಲ್ಲಿ ಮತ್ತು ಅದರ ಭಾಗವಾಗಿರುವ ಖಾಸಗಿ ಶಾಲೆಗಳಲ್ಲಿ ಸಾರ್ವತ್ರಿಕವಾಗಿರುವ ಮನೋಭಾವದ ಬಗ್ಗೆ ಮತ್ತು ಅದರಿಂದ ಉಂಟಾಗುವ ಪರಿಣಾಮಗಳ ಬಗ್ಗೆ ಈ ಪ್ರಕರಣ ನಮ್ಮನ್ನು ಆಲೋಚನೆ ಮಾಡಲು ಹಚ್ಚಬೇಕಿದೆ. ಈಗಾಗಲೆ ಹಲವು ಶಾಲೆಗಳಲ್ಲಿ RTE ಕೋಟಾದ ಮಕ್ಕಳಿಗೆ ಹಲವು ಬಗೆಯ ತಾರತಮ್ಯಗಳನ್ನು ಮಾಡುತ್ತಿರುವುದೂ ವರದಿಯಾಗಿದೆ. ಕೆಲವು ಕಡೆ ಬಡಮಕ್ಕಳನ್ನು ಗ್ರಂಥಾಲಯದಲ್ಲಿ ಕೂಡಿ ಹಾಕಿ ಪ್ರತ್ಯೇಕವಾಗಿ ಕಲಿಸಲಾಗುತ್ತಿದೆ. ಕೆಲವು ಶಾಲೆಗಳಲ್ಲಿ ಈ ಮಕ್ಕಳಿಗೆ ಯಾವುದೇ ಬಗೆಯ ಶೈಕ್ಷಣಿಕ ಚಟುವಟಿಕೆಗಳನ್ನು ನೀಡುತ್ತಿಲ್ಲ... ಇವೆಲ್ಲವೂ ಕೂದಲು ಕತ್ತರಿಸಿದ ಪ್ರಕರಣದಷ್ಟೇ ಗಂಭೀರವಾದದ್ದು.

ವಾಸ್ತವವಾಗಿ ಈ RTE ಒಂದು ರೀತಿಯಲ್ಲಿ ಬಲವಂತದ ಮತ್ತು ಆಂಶಿಕವಾದ, ಆದ್ದರಿಂದಲೇ ಊನಗೊಂಡ, ಸಮಾನ ಶಿಕ್ಷಣವನ್ನು ಸಮಾಜದಲ್ಲಿ ಪರಿಚಯಿಸುತ್ತಿದೆ. ಮೂವತ್ತು ವರ್ಷಗಳ ಹಿಂದೆ ಪ್ರಾಥಮಿಕ ಶಾಲೆಗಳ ವಾಣಿಜ್ಯೀಕರಣ ಆಗದೇ ಇರುವ ಸಂದರ್ಭದಲ್ಲಿ ಇರುತ್ತಿದ್ದದ್ದು ಸರ್ಕಾರಿ ಶಾಲೆಯೊಂದೇ. ಹೀಗೆ ಶಾಲೆಗೆ ಹೋಗ ಬಯಸುವವರೆಲ್ಲಾ ಕಡ್ಡಾಯವಾಗಿ ಸರ್ಕಾರಿ ಶಾಲೆಗೆ ಹೋಗಬೇಕಿತ್ತು. ಹೀಗಾಗಿ ಒಂದು ರೀತಿಯ ಬಲವಂತದ ಸಮಾನ ಶಿಕ್ಷಣ ಅಸ್ತಿತ್ವದಲ್ಲಿತ್ತು. ಆಗ ಶಾಲೆಗೆ ಸೇರಿಕೊಳ್ಳುತ್ತಿದ್ದ ವರ್ಗ ಮತ್ತು ಸಾಮಾಜಿಕ ಸಮುದಾಯಗಳೂ ಸೀಮಿತವಾಗಿಯೇ ಇತ್ತೆಂಬುದು ಮತ್ತೊಂದು ವಿಚಾರ. ಆದರೆ ಹಲವಾರು ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದ ಈವರೆಗೆ ವಂಚಿತವಾಗಿದ್ದ ನೂರಾರು ಸಮುದಾಯಗಳ ಶೈಕ್ಷಣಿಕ ಬೇಡಿಕೆಯನ್ನು ಸರ್ಕಾರೀ ಶಾಲೆ ತೀರಿಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗುವ ಹೊತ್ತಿಗೆ ಪ್ರಾಥಮಿಕ ಶಾಲೆಗಳು ವಾಣಿಜ್ಯೀಕರಣಗೊಂಡು ಉಳ್ಳವರ ಮಕ್ಕಳು ಖಾಸಗಿ ಪ್ರಾಥಮಿಕ ಶಾಲೆಗಳಿಗೂ, ಇಲ್ಲದವ ಮಕ್ಕಳು ಸರ್ಕಾರಿ ಶಾಲೆಗಳಿಗೂ ಎಂಬ ಸ್ಥಿತಿ ಏರ್ಪಟ್ಟಿತು. ಇದು ಉದಾರೀಕರಣ ಮತ್ತು ಖಾಸಗೀಕರಣದ ಕಾಲಘಟ್ಟದಲ್ಲಿ ಇನ್ನಷ್ಟು ರಭಸವನ್ನು ಪಡೆದುಕೊಂಡು ಪ್ರತಿಯೊಂದು ವರ್ಗ ಮತ್ತು ಸಮುದಾಯ ತನ್ನವರಿಗೇ ಪ್ರತ್ಯೇಕವಾಗಿ ಶಾಲೆಗಳನ್ನು ಮಾಡಿಕೊಂಡು ಬಡಮಕ್ಕಳನ್ನು ಹೊರದಬ್ಬಿತು. ಹೀಗಾಗಿ ಶಾಲೆ ಮತ್ತು ಬೀದಿಯಲ್ಲಾದರೂ ಪರಸ್ಪರ ಎದುರಾಗುತ್ತಿದ್ದ ವಿವಿಧ ಹಿನ್ನೆಲೆಯ ಮಕ್ಕಳು ಶಾಶ್ವತವಾಗಿ ಅಪರಿಚಿತರೇ ಆಗಿ ಉಳಿದುಕೊಂಡರು ಮತ್ತು ಶಾಲಾ ವ್ಯವಸ್ಥೆ ಸಮಾನತೆಗೆ ದಾರಿಯಾಗುವ ಬದಲು ಸಮಾಜದಲ್ಲಿನ ಅಸಮಾನತೆಗೆ ಪೂರಕವಾದ ಶೈಕ್ಷಣಿಕ ವಾತಾವರಣವನ್ನು ರೂಪಿಸಿತು. ಈ ಅಪರಿಚಿತ ವಾತಾವರಣದಲ್ಲಿ ಬಡವರ ಬಗೆ, ದಲಿತರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ ಇರುವ ಪೂರ್ವಗ್ರಹಗಳು ಇನ್ನಷ್ಟು ಗಟ್ಟಿಗೊಳ್ಳುತ್ತಾ ಹೋಗಿವೆ.

ಅದೇ ಸಂದರ್ಭದಲ್ಲಿ ಉದಾರೀಕರಣ ಬಡತನ ಮತ್ತು ಬಡವರ ಬಗ್ಗೆಯೂ ಹುಟ್ಟುಹಾಕುತ್ತಿರುವ ಸಂಕಥನಗಳು ಈ ಪೂರ್ವಗ್ರಹವನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ಬಡತನಕ್ಕೆ ಸಮಾಜದ ಆರ್ಥಿಕ-ಸಾಮಾಜಿಕ-ರಾಜಕೀಯ ವ್ಯವಸ್ಥೆ ಕಾರಣ ಎಂಬುದಕ್ಕಿಂತ ಬಡತನಕ್ಕೆ ಬಡವರೇ ಕಾರಣ ಎಂಬ ಮೌಲ್ಯ ಬಡತನ ಮತ್ತು ದಲಿತ ಹಿನ್ನೆಲೆಯಿಂದ ಬಂದವರನ್ನು ಇನ್ನಷ್ಟು ನಿಕೃಷ್ಟವಾಗಿ ನೋಡುವಂತೆ ಮಾಡಿದೆ. ಬಡವರ ಪರವಾಗಿ ತೆಗೆದುಕೊಳ್ಳುವ ಎಲ್ಲಾ ಕಾರ್ಯಕ್ರಮಗಳು "ಅವರನ್ನು ಅವರೇ ಮಾಡಿಕೊಂಡಿರುವ ಪಾಪಕೂಪದಿಂದ ಮೇಲೆತ್ತುವ" ಡಿಸ್ಕೋರ್ಸ್‌ನಲ್ಲಿ ರೂಪುಗೊಳ್ಳುತ್ತಿದೆ. ಹೀಗಾಗಿ ಅದು ಬಡವರ ಬಗ್ಗೆ ಹೆಚ್ಚೆಂದರೆ ತಮಗೆ ಮಿಕ್ಕುಳಿದ ಅನ್ನವನ್ನು ಕೊಡುವಂಥಾ, ತಾವು ಬಳಸಿಬಿಟ್ಟ ಬಟ್ಟೆ, ಪುಸ್ತಕಗಳನ್ನು ಕೊಡುವ 'ಔದಾರ್ಯ'ವನ್ನು, ಬಡತನದ ಅತ್ಯಂತ ದಾರುಣ ಪರಿಣಾಮಗಳಿಗೆ ಒಂದೆರಡು ತೊಟ್ಟು ಕಣ್ಣೀರನ್ನು ಹಾಕುವಂಥಾ ಮನಸ್ಥಿತಿಯನ್ನು ಮಾತ್ರ ಸೃಷ್ಟಿಸುತ್ತಿದೆಯೇ ವಿನಃ ಇನ್ನುಳಿದವರ ಶ್ರೀಮಂತಿಕೆ ಬಡವರನ್ನು ಬಡವರಾಗಿಯೇ ಉಳಿಸಿಟ್ಟಿರುವ ಆರ್ಥಿಕತೆ ಮತ್ತು ರಾಜಕೀಯದ ಪರಿಣಾಮ ಎಂಬ ಅಸಲೀ ಕಾರಣವನ್ನು ಮುಚ್ಚಿಹಾಕುತ್ತಿದೆ.

ಈ ಮನೋಭಾವ ಮೇಲ್ವರ್ಗದಲ್ಲಿ ಮಾತ್ರವಲ್ಲದೆ ನವ ಉದಾರವಾದಿ ಆರ್ಥಿಕತೆಯ ಭಾಗವಾಗಿ ಪ್ರಭುತ್ವದ ಯೋಜನೆಯಲ್ಲೂ ತೂರಿಕೊಂಡಿದೆ. ಕಂಡರಿಯದ ಸ್ವಾರ್ಥ ಮತ್ತು ಕತ್ತುಕೊಯ್ಯುವ ಸ್ಪರ್ಧೆಯೇ ಮೌಲ್ಯವಾಗಿಬಿಟ್ಟಿರುವ ಸಮಾಜದ ಆ ಮೂಲ ಚೌಕಟ್ಟನ್ನೂ ಮೀರದೆ ಆ ವರ್ಗಸ್ವಾರ್ಥದ ಚೌಕಟ್ಟಿನೊಳಗೇ ಕಾಣಿಸಿಕೊಳ್ಳುವ ಅಲ್ಪಸ್ವಲ್ಪ ಕರುಣೆ ಮತ್ತು ಔದಾರ್ಯವೂ ಅದ್ಭುತವೆನಿಸುವಂತೆ ಮಾಡಿಬಿಡುತ್ತದೆ. ಅಮೀರ್ ಖಾನನ 'ಸತ್ಯಮೇವ ಜಯತೆ' ಸಂವೇದನಾಶೀಲ ಮಧ್ಯಮವರ್ಗದ ಕಣ್ಮಣಿಯಾಗಿರುವುದು ಇದೇ ಕಾರಣಕ್ಕೆ. ಆದರೆ ಈ ಮಧ್ಯಮವರ್ಗದ ಔದಾರ್ಯ ಮತ್ತು ಕರುಣೆಗೆ ಅಂತರ್ಗತ ಮಿತಿಯಿದೆ. ಆ ಔದಾರ್ಯ ಮೂಲಭೂತವಾಗಿ ಮೇಲ್‌ವರ್ಗದ ಅಸ್ತಿತ್ವದ ನೈತಿಕತೆಯನ್ನು ಪ್ರಶ್ನೆ ಮಾಡಬಾರದು. ಆ ಔದಾರ್ಯ ಮತ್ತು ಅನುಕ[ಂಪಕ್ಕೆ] ಪಾತ್ರರಾಗುವವರು ಕೃತಜ್ಞರಾಗಿರಬೇಕು ಹಾಗೂ ... ಭಾಷೆಯಲ್ಲಿ ಎದುರು ನಿಲ್ಲಬಾರದು. ಆಗ ಈ ವ[ರ್ಗ] ಔದಾರ್ಯ ಕರಗಿ ಮನುಷ್ಯ ಮರೆಯಾಗುತ್ತಾನೆ. ಗ... ಹುಟ್ಟಿಕೊಳ್ಳುತ್ತಾನೆ. ಆದ್ದರಿಂದಲೇ ಔದಾರ್ಯದ ... ಅನುಕಂಪದ ನೆಲೆಯಿಂದ ರೂಪಿತವಾಗುವ ಮನೋಭ[ಾವ] ಮತ್ತು ಸರ್ಕಾರಿ ಯೋಜನೆಗಳು ಮೇಲ್ನೋಟಕ್ಕೆ ... ಆಪ್ಯಾಯವಾಗಿ ಕಂಡರೂ ಆಂತರಿಕವಾಗಿ ಈ ಕ್ರೂರ ವ್ಯವ[ಸ್ಥೆಯ] ಯಥಾಸ್ಥಿತಿಯನ್ನು ಮುಂದುವರೆಸುತ್ತವೆ. ಆರ್[ಟಿಇ] ಯೋಜನೆಯ ಆಂತರಿಕ ಮಿತಿಯೇ ಇದು.

ಇಲ್ಲಿ ಬಡತನ ನಿರ್ಮೂಲನೆಯೂ ಬಡಜನರ ಹ[ಕ್ಕಿನ] ಭಾಷೆಯಾಗಲೇ ಇಲ್ಲ. ಹಾಗೆಯೇ ಸಮಾನ ಮತ್ತು ಗ[ುಣ]ಮಟ್ಟದ ಶಿಕ್ಷಣ ಬಡಜನರ ಹಕ್ಕಿನ ಭಾಷೆಯಲ್ಲಿ ಚರ್ಚಿತವಾ[ಗದೆ] ಅದು ಮೇಲ್ವರ್ಗದ ಔದಾರ್ಯದ ಭಾಗವಾಗಿ ನೀ[ಡುವ] ದಾನದ ಭಾಷೆಯಲ್ಲಿ ಚರ್ಚಿತವಾಗುತ್ತಿದೆ. RTE ಯೋ[ಜನೆ] ಶೇ.25ರಷ್ಟು ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸಿಕೊಳ್ಳುವು[ದನ್ನು] ಕಡ್ಡಾಯ ಮಾಡುವಾಗಲೇ ಒಂದಷ್ಟು ಹಕ್ಕಿನ ಪರಿಭಾಷೆಯ[ನ್ನು] ಮತ್ತು ಅದರ ಆಚರಣೆಗೆ ಅವಕಾಶವನ್ನೂ ಕಲ್ಪಿಸುವ[ಂಥಾ] ಸಾಧ್ಯತೆಗಳನ್ನು ಸೇರಿಸಿದ್ದರೂ ಅದರ ಮೂಲ ತಳಹದಿ[ಯಲ್ಲೆ] ಖಾಸಗಿ ಲಾಭವನ್ನು ಖಾತರಿ ಮಾಡುತ್ತಾ ಅದರೊ[ಳಗೆ] ಒಂದಷ್ಟು ಬಡವರಿಗೂ ಅವಕಾಶ ಕಲ್ಪಿಸಿ ಎನ್[ನುವ] ಅಂಗಲಾಚಿಕೆಯ ದೀನತೆ ಇದೆ. ಹಾಗೆಯೇ ... ಜಾರಿಯಾಗುತ್ತಿರುವ ಸಮಾಜದ ರಾಜಕೀಯ ಆರ್ಥಿಕತೆ... ಬಡತನ ಮತ್ತು ತಾರತಮ್ಯ ನಿವಾರಣೆಗಳನ್ನು ಹ[ಕ್ಕಿನ] ಪರಿಧಿಯಿಂದ ತೆಗೆದು ಉಳ್ಳವರ ಮತ್ತು ಪ್ರಭುತ್ವದ ಹಂಗಿ[ನಿಂದ] ದೇಕುವ ಪರಿಧಿಗೆ ದೂಡಿದೆ. ಇದು ಸಂವಿಧಾನ ವಿರೋ[ಧಿ].

ಈ ಸಂದರ್ಭದಲ್ಲಿ RTE ಯಲ್ಲಿ ಅಡಕವಾಗಿರ[ುವ] ಆಶಯಗಳನ್ನು ಖಾಸಗಿ ಶಾಲೆಗಳು ಜಾರಿಗೆ ತರುವ[ಂತೆ] ಮಾಡಬೇಕಾದರೆ ಖಾಸಗಿ ಶಾಲೆಗಳು ಮತ್ತು ಅದರ ಹಿಂದಿ[ರುವ] ಬಡತನ ವಿರೋಧಿ ಮನೋಭಾವಗಳನ್ನು ಮತ್ತು ಅದರ[ಿಂದ] ಉಂಟಾಗಬಹುದಾದ ಹಲವು ಪರಿಣಾಮಗಳನ್ನು ತಡೆಯ[ುವ] ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತ[ದೆ]. ಉದಾಹರಣೆಗೆ ಖಾಸಗಿ ಶಾಲೆಗಳಲ್ಲಿ ಒಂದನೇ ತರಗ[ತಿಗೆ] ಬರುವ ವೇಳೆಗೆ ಮಕ್ಕಳಿಗೆ ಒಂದಷ್ಟು ಪ್ರಿ ಕೆಜಿ, ಎಲ್[ಕೆಜಿ] ಯುಕೆಜಿ ಸ್ಕೂಲಿಂಗ್ ಆಗಿರುತ್ತದೆ. ಆದರೆ ಗುಡಿಸ[ಲು] ಸ್ಲಂಗಳಿಂದ ನೇರವಾಗಿ ಒಂದನೇ ತರಗತಿಗೆ ಸೇರಿಕೊ[ಳ್ಳುವ] ಮಗುವಿಗೆ ಆ ಸಾಮಾಜಿಕ ಮತ್ತು ಶೈಕ್ಷಣಿಕ ಲಾಭವಿಲ್[ಲದೆ] ಇರುವುದರಿಂದ ಪ್ರಾರಂಭದಲ್ಲಿ ಅದು ಶೈಕ್ಷಣಿಕವ[ಾಗಿ] ಹಿಂದುಳಿಯುವ ಎಲ್ಲಾ ಸಾಧ್ಯತೆಗಳಿವೆ. ಆ ಸಂದರ್ಭ[ದಲ್ಲಿ] ಆ ಮಗುವಿಗೆ ಕಾಳಜಿಯಿಂದ ಶಾಲೆ ಪೋಷಣೆ ಕೊ[ಡದೆ] ದೂಷಿಸಿದರೆ, ದೂಡಿದರೆ ಮತ್ತೆ ಅದು ಉತ್ಸಾಹದಿ[ಂದ] ಶಾಲೆಗೆ ಹೋಗುವುದೇ ಇಲ್ಲ. ಈಗಾಗಲೇ ದಡ್ಡತನ, ಕಳ್[ಳತನ], ಕೊಳಕುತನ ಇತ್ಯಾದಿ ಸಾಂಸ್ಕೃತಿಕ ಮತ್ತು ಸಾಮಾಜಿಕ ದೂಷ[ಣೆಗೆ] ಒಳಗಾಗಿರುವ ಬಡತನದ ಹಿನ್ನೆಲೆಯ ಮಕ್ಕಳು ಶಾಲೆಯ[ಲ್ಲಿ] ಸರೀಕ ವಿದ್ಯಾರ್ಥಿಗಳ ಎದುರು ಅದೇ ಬಗೆಯ ಅವಹೇಳ[ನಕ್ಕೆ] ಗುರಿಯಾದರೆ ಡ್ರಾಪ್ ಔಟ್ ರೇಟ್ ಇನ್ನಷ್ಟು ಹೆಚ್ಚು[ತ್ತದೆ]. ಹೀಗಾಗಿ ಸರ್ಕಾರ ಈ ಕೂಡಲೇ ಎಚ್ಚರಗೊಳ್ಳದಿದ್ದರೆ R[TE] ಬಡಮಕ್ಕಳಿಗೆ ವರದಾನವಾಗುವ ಬದಲು ಶಾಪ[ವಾಗಿ] ಆಗಿಬಿಡಬಹುದು. ಏಕೆಂದರೆ 5-10 ಮಕ್ಕಳಿರುವ ಶಾಲೆಗ[ಳನ್ನು] ಸರ್ಕಾರ ಮುಚ್ಚುವ ಉಮೇದಿನಲ್ಲಿರುವುದರಿಂದ ಖಾ[ಸಗಿ] ಶಾಲೆಯಿಂದ ಡ್ರಾಪ್ ಔಟ್ ಆದ ಮಕ್ಕಳಿಗೆ ಸರ್ಕಾ[ರಿ] ಶಾಲೆಯೂ ಇರುವುದಿಲ್ಲ!


ಹೀಗಾಗಿ ಈ ಕೂದಲು ಕತ್ತರಿಸಿದ ಪ್ರಕರಣದಲ್ಲಿ ಕೂದ[ಲು] ಕತ್ತರಿಸಿದವರು ಯಾರು ಎಂಬ ಕೂದಲು ಸೀಳುವ ತರ್ಕ[ದಲ್ಲಿ] ಮುಳುಗಿ ಅದು ಎತ್ತಿ ತೋರಿಸುತ್ತಿರುವ ಮೂಲಭ[ೂತ] ಸಮಸ್ಯೆಗಳನ್ನು ಮರೆಯುವುದು ಸಲ್ಲ. ಸರ್ಕಾರ ಈಗಾಗ[ಲೇ] ಶಾಲಾಮಂಡಳಿಗೆ ಕ್ಲೀನ್‌ಚಿಟ್ ಕೊಟ್ಟಿರುವುದೂ ಸಹ ಸರ್ಕಾ[ರ] ಮತ್ತು ಖಾಸಗಿ ಆಡಳಿತ ಮಂಡಳಿ ಜೊತೆಜೊತೆಯ[ಾಗಿ] ಇರುವುದನ್ನು ದೃಢೀಕರಿಸುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾ[ರ] ಮತ್ತು "ಪ್ರಜ್ಞಾವಂತ ನಾಗರಿಕ ಸಮಾಜ" (ಈ ಆಡ[ಳಿತ] ಮಂಡಳಿ, ಪೋಷಕರು, ಆರ್‌ಟಿಇ ಬೇಡ ಎನ್ನುವ ಮೇ[ಲ್] ಮಧ್ಯಮ ವರ್ಗದ ಎಲ್ಲರೂ ನಾಗರಿಕ ಸಮಾಜವೇ. ಆ[ದರೆ] ಸಮಾನತೆಯ ಮೌಲ್ಯ ಇಲ್ಲದಿರುವ ನಾಗರಿಕ ಪೋಷಾಕಿನ[ಲ್ಲಿ] ಮಾತ್ರ ನಾಗರಿಕ ಅಷ್ಟೆ) ಖಾಸಗಿ ಶಾಲೆಗಳು ಈ ಬಗೆ[ಯ] ತಾರತಮ್ಯವನ್ನು ಮಾಡದಂತೆ ತಡೆಯುವ ಪರಿಣಾಮ[ಕಾರಿ] ಆಡಳಿತಾತ್ಮಕ, ಶಾಸನಾತ್ಮಕ ಮತ್ತು ನ್ಯಾಯಿಕ ಕ್ರಮಗ[ಳನ್ನು] ಕೂಡಲೇ ಯೋಚಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ R[TE] ಯನ್ನು ಔದಾರ್ಯದ, ಹಂಗಿನ, ದೈನ್ಯದ ಪರಿಭಾಷೆಯಿಂದ ಹಕ್ಕಿನ, ಸಮಾನತೆಯ, ಸಂವಿಧಾನಾತ್ಮಕ ಪರಿಭಾಷೆಗೆ ವ[ರ್ಗಾಯಿಸಿ] ಪರಿಕಲ್ಪನೆಗೆ ತಂದು ನಾಗರಿಕ ಸಮಾಜವನ್ನು ನಿಜ[ವಾಗಿ] ನಾಗರಿಕಗೊಳಿಸಬೇಕಾದ ಅಗತ್ಯ ಹೆಚ್ಚಾಗಿದೆ.

ಅಮಾಯಕರ ಮೇಲೆ ದಾಳಿ ಮತ್ತು ಮಾಧ್ಯಮ

ಮಂಗಳೂರಿನ ಮಾರ್ನಿಂಗ್ ಮಿಸ್ಟ್ ಹೋಮ್ ಸ್ಟೇನಲ್ಲಿ ಅಮಾಯಕ ಯುವಕ-ಯುವತಿಯರ ಮೇಲಾದ ದಾಳಿಯಲ್ಲಿ 'ಹಿಂದೂ ಜಾಗರಣ ವೇದಿಕೆಯ' ವಿಕೃತಕಾಮಿಗಳ ಪಾತ್ರವಲ್ಲದೆ ಮಾಧ್ಯಮದ ಪಾತ್ರ ಕೂಡ ಚರ್ಚೆಯಾಗುತ್ತಿದೆ. ಸದ್ಯಕ್ಕೆ ಆ ಚರ್ಚೆಯ ಕೇಂದ್ರಬಿಂದು ಆ ದಾಳಿಯನ್ನು ತನ್ನ ಕ್ಯಾಮೆರಾದಲ್ಲಿ ಸೆರೆಹಿಡಿದು ವರದಿ ಮಾಡಿದ ನವೀನ್ ಸೂರಿಂಜೆ ಎಂಬ ಯುವ ಪತ್ರಕರ್ತನಾಗಿದ್ದರೂ ಇದಕ್ಕೆ ಹಲವಾರು ಆಯಾಮಗಳಿವೆ ಎಂಬುದಂತೂ ಸ್ಪಷ್ಟ.

ಮೊದಲಿಗೆ ನವೀನ್ ಸೂರಿಂಜೆ ಕುರಿತು ಎರಡು ಮಾತು. ಇವತ್ತು ನಮ್ಮ ಹಲವಾರು ಪ್ರಮುಖ ದಿನಪತ್ರಿಕೆಗಳು ಮತ್ತು 24x7 ಸುದ್ದಿ ಟಿವಿ ಚಾನೆಲ್‌ಗಳು





ಮಾತೆ ಅಂದ್ರು ಆ ದಿನ...
ಬಟ್ಟೆ ಬಿಚ್ಚಿದ್ರು ಈ ದಿನ....
ಅಯೋಧ್ಯೆಯಲ್ಲಿ ರಾಮ ರಾಮ.....
ಬಿಜೆಪಿಯಲ್ಲಿ ಕಾಮ ಕಾಮ
ಇಂಟರ್‌ನೆಟ್‌ನಲ್ಲಿ ಸಂಘಪರಿವಾರವನ್ನು ಲೇವಡಿ ಮಾಡುತ್ತಿರುವ ಕೆಲ ಸ್ಲೋಗನ್‌ಗಳು

ಕೇಸರಿಮಯಗೊಂಡಿವೆ. ಅದರಲ್ಲೂ ಸಂಘಪರಿವಾರದ ಪ್ರಯೋಗಾಲಯವಾಗಿರುವ ಕರಾವಳಿ ಪ್ರದೇಶದಲ್ಲಂತೂ ಹೆಚ್ಚಿನ ಪತ್ರಕರ್ತರು ಕೇಸರಿ ಪಡೆಯಿಂದ ಬಂದವರೇ ಆಗಿದ್ದಾರೆ. ಇಂತಹ ಸನ್ನಿವೇಶದಲ್ಲಿ ಮಂಗಳೂರಿನಲ್ಲಿ ಅಪರೂಪಕ್ಕೆ ನವೀನ್ ಸೂರಿಂಜೆ ತರಹದ ಜಾತ್ಯತೀತ, ಪ್ರಗತಿಪರ ಮತ್ತು ಉತ್ಸಾಹಿ ಪತ್ರಕರ್ತರು ಸಿಗುತ್ತಾರೆ.

ಈ ನವೀನ್‌ನನ್ನು ನಾನು ಕಳೆದ ಕೆಲವು ವರ್ಷಗಳಿಂದ ಬಲ್ಲೆ. ಈತ ಬಿ.ವಿ. ಸೀತಾರಾಂ ಅವರ 'ಕರಾವಳಿ ಅಲೆ' ಪತ್ರಿಕೆಯಲ್ಲಿ ವರದಿಗಾರನಾಗಿ ಕೆಲಸ ಮಾಡುತ್ತಿದ್ದಾಗಲೇ ಆತನೊಂದಿಗೆ ಸಂಪರ್ಕ ಏರ್ಪಟ್ಟಿತ್ತು. ಯಾವುದೋ ವರದಿಗೆ ಸಂಬಂಧಪಟ್ಟಂತೆ ಮಾಹಿತಿ ಅಥವಾ ಫೋಟೊ ಅಗತ್ಯವಿದ್ದಾಗಲೆಲ್ಲ ನವೀನ್ ನನಗೆ ನೆರವಾಗುತ್ತಿದ್ದ. ಆ ನಂತರ ಈ ಹುಡುಗ ಕಸ್ತೂರಿ ನ್ಯೂಸ್ 24x7 ಸೇರಿಕೊಂಡರೂ ಆಗೀಗ ಫೋನ್‌ನಲ್ಲಿ ಮಾತನಾಡುತ್ತಿದ್ದೆವು. ಕಳೆದ ಮಾರ್ಚ್ ತಿಂಗಳಲ್ಲಿ ಮಂಗಳೂರಿನಲ್ಲಿ 'ಲಂಕೇಶ್ ...' ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದಾಗ ನವೀನ್ ನಮಗೆ ಸಹಾಯ ಮಾಡಿದ್ದ.

ಅದೆಲ್ಲಕ್ಕಿಂತ ಮುಖ್ಯವಾಗಿ ನವೀನ್ ಮತ್ತು ಆತನ ಕೆಲವು ಪ್ರಗತಿಪರ ಸ್ನೇಹಿತರು ಮಂಗಳೂರಿನಲ್ಲಿ 'ಜರ್ನಲಿಸ್ಟ್ ... ಸೆಂಟರ್' ಎಂಬ ಪುಟ್ಟ ಗುಂಪನ್ನು ಮಾಡಿಕೊಂಡು ಚರ್ಚೆಗಳನ್ನು ಏರ್ಪಡಿಸುತ್ತಾರೆ. ನಾವೆಲ್ಲ ನಮ್ಮ ಕಾರ್ಯಕ್ರಮದ ಭಾಗವಾಗಿ ಮಂಗಳೂರಿಗೆ ಹೋಗಿದ್ದಾಗ ಲಂಕೇಶ್ ಪ್ರಕಾಶನ ಪ್ರಕಟಿಸಿರುವ ಪಾಕಿಸ್ತಾನದ ಖ್ಯಾತ ಉರ್ದು ಕವಿ ಫೈಜ್ ಅಹಮದ್ ಫೈಜ್ ಅವರ ಕಾವ್ಯಗಳನ್ನು ಕುರಿತು ಕದ್ರಿ ಪಾರ್ಕಿನಲ್ಲಿ ಒಂದು ಕವಿಗೋಷ್ಠಿಯನ್ನು ಏರ್ಪಡಿಸಿದ್ದ. ಆ ಗೋಷ್ಠಿಯಲ್ಲಿ ಹಿರಿಯ ಚಿಂತಕ ಕೆ. ಫಣಿರಾಜ್, ಫೈಜ್ ಅವರ ಕವನಗಳನ್ನು ಕನ್ನಡಕ್ಕೆ ಸುಂದರವಾಗಿ ಅನುವಾದಿಸಿರುವ ಬಾಗೇಶ್ರೀ, ಯುವಕವಿ ಸಂವರ್ತ 'ಸಾಹಿಲ್', ಸಿನಿಮಾ ನಿರ್ದೇಶಕ ಬಿ. ಸುರೇಶ್ ಮತ್ತು ನಾನು ಭಾಗವಹಿಸಿದ್ದೆವು. ಸಂವರ್ತ ಉರ್ದುವಿನಲ್ಲಿ ಫೈಜ್ ಅವರ ಕವನಗಳನ್ನು ಓದಿದನಂತರ, ಅದರ ಕನ್ನಡ ಅನುವಾದವನ್ನು ಬಾಗೇಶ್ರೀ ಓದಿ, ಅದಕ್ಕೆ ಫಣಿರಾಜ್ ತಾತ್ವಿಕ ಅರ್ಥವನ್ನು ನೀಡಿದ್ದ ಆ ಸಂಜೆ ನಿಜಕ್ಕೂ ಮೆಮೊರಬಲ್ ಆಗಿತ್ತು. ಅದು ಈ ನವೀನ್ ಸೂರಿಂಜೆಯಿಂದ ಸಾಧ್ಯವಾಗಿತ್ತು. ಒಟ್ಟಾರೆಯಾಗಿ ನವೀನ್ ಓರ್ವ ಸಂವೇದನಾಶೀಲ, ಪ್ರಗತಿಪರ ಪತ್ರಕರ್ತ ಎಂಬುದನ್ನು ಹೇಳಲು ಇಚ್ಛಿಸುತ್ತೇನೆ.

ಇಂತಹ ನವೀನ್‌ಗೆ ಒಂದು ಹೋಮ್ ಸ್ಟೇ ಮೇಲೆ ದಾಳಿ ನಡೆಯಲಿದೆ ಎಂದು ಗೊತ್ತಿದ್ದರೂ ಆ ವಿಷಯವನ್ನು ಪೊಲೀಸರಿಗೆ ತಿಳಿಸದೆ, ಅದನ್ನು ಕ್ಯಾಮೆರಾದಲ್ಲಿ ಸೆರೆಹಿಡಿದು ಪ್ರಸಾರ ಮಾಡಿದ್ದಾನೆ ಎಂದು ಮಂಗಳೂರಿನ ಪೊಲೀಸರು ಸಾಮಾನ್ಯವಾಗಿ ಭಯೋತ್ಪಾದಕರ ಮೇಲೆ ಹೂಡುವ ಕಾನೂನುಬಾಹಿರ ಚಟುವಟಿಕೆ ತಡೆ ಕಾಯಿದೆ (ಯುಎಪಿಎ) ಅಡಿ ನವೀನ್ ವಿರುದ್ಧ ಕೇಸನ್ನು ಜಡಿದಿದ್ದಾರೆ.

ಮಂಗಳೂರಿನ ಖಾಕಿ ಪಡೆ ಕೋಮುವಾದಿ ಹಿಂದೂತ್ವ ಸಂಘಟನೆಗಳ ಬೆನ್ನಿಗೆ ನಿಂತಿರುವುದು ಹಲವಾರು ಬಾರಿ ಸಾಬೀತಾಗಿದೆ. ಈ ಪ್ರಕರಣದ ಹಿಂದೆಯೂ ಪೊಲೀಸರ ಸಹಾಯಹಸ್ತ ಇರುವುದು ಗೋಚರಿಸುತ್ತದೆ. ಈ ದಾಳಿಯನ್ನು ಕುರಿತು ನವೀನ್ ಬರೆದಿರುವ ಲೇಖನದಲ್ಲಿ (ಪುಟ7 ನೋಡಿ) ತಾನು ದಾಳಿ ಪ್ರಾರಂಭವಾದ ಕೂಡಲೇ ಪೊಲೀಸರಿಗೆ ವಿಷಯ ತಿಳಿಸೋಣವೆಂದು ಸ್ಥಳೀಯ ಇನ್ಸ್‌ಪೆಕ್ಟರ್ ಅವರಿಗೆ ಫೋನ್ ಮಾಡಿದೆ ಎಂದು ಹೇಳಿದ್ದಾನೆ. ಆದರೆ ಆತನ ಕರೆಯನ್ನು ಸ್ವೀಕರಿಸದ ಪೊಲೀಸ್ ಅಧಿಕಾರಿ ದಾಳಿ ಮುಗಿದನಂತರ ಸ್ಥಳಕ್ಕೆ ಆಗಮಿಸಿ ಹಲ್ಲೆಗೊಳಗಾದವರನ್ನು ಒಂದು ಕೊಠಡಿಯಲ್ಲಿ ಕೂಡಿ ಹಾಕಿ, ಹೊರಗೆ ದಾಳಿಕೋರರ ಜೊತೆ ಸಲುಗೆಯಿಂದ ಮಾತನಾಡುತ್ತಾ ನಿಂತಿದ್ದಾರೆ. ಈ ಎಲ್ಲವನ್ನು ಕುರಿತು ನವೀನ್ ವರದಿ ಮಾಡುವ ಮೂಲಕ ಮಂಗಳೂರಿನ ಪೊಲೀಸರ ನಿಷ್ಕ್ರಿಯತೆಯನ್ನು ಬಯಲಿಗೆಳೆದಿದ್ದಾನೆ. ನವೀನ್ ಹೇಳುತ್ತಿರುವುದರ ಸತ್ಯಾಸತ್ಯತೆಯನ್ನು ಆತನ ಮೊಬೈಲ್ ಕಾಲ್ ರೆಕಾರ್ಡ್‌ಗಳ ಮೂಲಕ ದೃಢಪಡಿಸಿಕೊಳ್ಳಬಹುದಿತ್ತು. ಆದರೆ ಅದನ್ನು ಮಾಡದ ಪೊಲೀಸರು ಆತನ ವಿರುದ್ಧವೇ ಕೇಸು ಜಡಿಯುವ ಧಾರ್ಷ್ಟ್ಯವನ್ನು ತೋರಿದ್ದಾರೆ. ನವೀನ್ ಓರ್ವ ಸಂವೇದನಾ ಶೀಲ ಯುವಕನಾಗಿದ್ದು ತನ್ನ ಸಾಮಾಜಿಕ ಜವಾಬ್ದಾರಿಯನ್ನು ಪಾಲಿಸಿದ್ದರೂ ಆತ ಇವತ್ತು ಕಪಟ ಪೊಲೀಸರ ಕಿರುಕುಳಕ್ಕೆ ಗುರಿಯಾಗಬೇಕಿದೆ.

ಇದಿಷ್ಟು ನವೀನ್ ಸೂರಿಂಜೆಗೆ ಸಂಬಂಧಿಸಿತ್ತು, ಆದರೆ ಇದಕ್ಕಿಂತ ಮುಖ್ಯವಾಗಿ ಒಂದು ವಿಷಯವಿದೆ. ಅದು ಪತ್ರಕರ್ತರು ತಮಗೆ ದೊರೆತ ಮಾಹಿತಿಯನ್ನು ಪೊಲೀಸರಿಗೆ ಕೊಡಬೇಕೆ ಎಂಬುದನ್ನು ಕುರಿತದ್ದು. ಈ ಪ್ರಶ್ನೆಗೆ ಸಲೀಸಾದ ಉತ್ತರವಿಲ್ಲ. ಆದರೂ ಒಂದು ಅಂಶವನ್ನು ಪೊಲೀಸರು ಮತ್ತು ಮಾಧ್ಯಮದವರು ಇಬ್ಬರೂ ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ಪತ್ರಕರ್ತರು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೆ ಸ್ತಂಭವಾಗಿದ್ದಾರೆಯೇ ಹೊರತು ಅವರು ಪೊಲೀಸ್ ವ್ಯವಸ್ಥೆಯ ಭಾಗವೂ ಅಲ್ಲ, ಭಾತ್ಮೀದಾರರೂ ಅಲ್ಲ. ಆದ್ದರಿಂದ ಪತ್ರಕರ್ತರು ತಮಗೆ ದೊರೆತ ಮಾಹಿತಿಯನ್ನು ಪೊಲೀಸರಿಗೆ ಕೊಡಬೇಕು ಮತ್ತು ಆನಂತರವೇ ತಮ್ಮ ವೃತ್ತಿ ಧರ್ಮವನ್ನು ಪಾಲಿಸಬೇಕು ಎಂದು ಪೊಲೀಸರು ದಬ್ಬಾಳಿಕೆ ಮಾಡುವುದು ಖಂಡನಾರ್ಹ.

ಕಂಡಹಾಗೆ



editorlankesh@gmail.com ● ಗೌರಿ ಲಂಕೇಶ್

ಅದನ್ನು ಹೇಳಿದ ಮೇಲೆಯೂ ವಾಸ್ತವ ಸ್ಥಿತಿಯನ್ನು ಗಮನಿಸಿದರೆ ಚಿಂತೆ ಶುರುವಾಗುತ್ತದೆ. ಇವತ್ತಿನ 24x7 ಟಿವಿ ಚಾನೆಲ್‌ಗಳ ಭರಾಟೆ ಯಾವ ಹಂತ ಮುಟ್ಟಿದೆ ಬಹಳಷ್ಟು ಚಾನೆಲ್‌ಗಳಿಗೆ ಎಲ್ಲಕ್ಕಿಂತ ಟಿಆರ್‌ಪಿ ರೇಟಿಂಗ್‌ಗಳೇ ಮುಖ್ಯವಾಗಿದೆ. ಸಾರ್ವಜನಿಕ ಹಿತಾಸಕ್ತಿ ಮತ್ತು ಖಾಸಗಿ ವಲಯಗಳ ನಡುವಿನ ವ್ಯತ್ಯಾಸವೆ ಅಳಿಸಿಹೋಗಿ ಸುದ್ದಿ ರೋಚಕವಾಗಿದ್ದರೆ ಸಾಕು ಹಿಂದೂ ಮುಂದೂ ನೋಡದೆ ಚಾನೆಲ್‌ಗಳು ಅದನ್ನು ಪ್ರಸಾರ ಮಾಡಿಬಿಡುತ್ತವೆ. ಅದೂ ಎಂತಹ ಸುದ್ದಿಗಳು ಎನ್ನುತ್ತೀರಿ? ಎರಡು ಹಾವುಗಳು ಸಂಭೋಗಿಸುತ್ತಿರುವ ದೃಶ್ಯವೂ 'ಬ್ರೇಕಿಂಗ್ ನ್ಯೂಸ್' ಆಗುತ್ತದೆ; ಯಾರೋ ಮಹಿಳೆ ತನ್ನ ಗಂಡನನ್ನು ತೊರೆದು ಇನ್ನೊಬ್ಬನೊಂದಿಗೆ ವಾಸಿಸುತ್ತಿದ್ದರೆ ಅವರಿಬ್ಬರನ್ನು ಬೆಡ್‌ರೂಮಿನಲ್ಲಿ ಕೂಡಿ ಹಾಕಿ ಅವರಿಬ್ಬರನ್ನು ಒಳ ಉಡುಪುಗಳಲ್ಲಿ ತೋರಿಸುವುದು ಕೂಡ ಒಂದು 'ಕ್ರೈಮ್ ಸ್ಟೋರಿ' ಆಗುತ್ತದೆ.

ಇತ್ತೀಚೆಗೆ ಈ ಟಿಆರ್‌ಪಿ ರೇಸಿನಲ್ಲಿ ಗೆಲ್ಲುವುದಕ್ಕೆ ಹಲವು ಟಿವಿ ಚಾನೆಲ್ ವರದಿಗಾರರು ಅನಾಹುತಕಾರಿ ಕೃತ್ಯಗಳಿಗೆ ಕೈಹಾಕಿದ್ದೂ ಇದೆ. ಉದಾಹರಣೆಗೆ ಮೊನ್ನೆ ಗುವಾಹಟಿಯಲ್ಲಿ ನಡೆದದ್ದು. ಆ ಪ್ರಕರಣದಲ್ಲಿ 20 ವರ್ಷದ ಯುವತಿಯ ಮೇಲೆ ರಸ್ತೆಬದಿಯಲ್ಲಿ ಕಿರಾತಕರು ಲೈಂಗಿಕ ಹಲ್ಲೆ ನಡೆಸುತ್ತಿದ್ದಾಗ ಗೌರವ್ ಜ್ಯೋತಿ ನಿಯೋಗ್ ಎಂಬ ವರದಿಗಾರ ಹಲ್ಲೆಕೋರರಿಗೆ ಮಾರ್ಗದರ್ಶನ ಮತ್ತು ನಿರ್ದೇಶನವನ್ನು ನೀಡುತ್ತಿದ್ದ. ಅದಕ್ಕೆ ಮುಖ್ಯ ಕಾರಣ ಆತ ಅಲ್ಲಿದ್ದ ಏಕೈಕ ವರದಿಗಾರನಾಗಿದ್ದು ತನಗೆ 'ಸ್ಪೆಷಲ್ ದೃಶ್ಯ'ಗಳು ಸಿಗುತ್ತಿವೆ ಎಂಬ ಧೋರಣೆ. ಇದರ ಅರ್ಥ ಆ ವರದಿಗಾರನೂ ಹಲ್ಲೆಕೋರರಷ್ಟೇ ಅಮಾನವೀಯ ವ್ಯಕ್ತಿ ಆಗಿದ್ದ ಎಂಬುದು.



ಇದಕ್ಕೆ ಸರಿಯಾಗಿ ನಮ್ಮ ಸಮಾಜದ ಧೋರಣೆಯೂ ಬದಲಾಗುತ್ತಿದೆ. ಇವತ್ತು ಯಾವುದೋ ಚಿಕ್ಕ ಹಳ್ಳಿಯಲ್ಲಿ ಒಂದು ಕ್ರೈಮ್ ನಡೆದರೆ ಅಲ್ಲಿನ ಜನ ಪೊಲೀಸರಿಗೆ ವಿಷಯ ತಿಳಿಸುವ ಮುನ್ನ ಟಿವಿ ಚಾನೆಲ್‌ನವರಿಗೆ ಫೋನ್ ಮಾಡುವಷ್ಟು ಅಸೂಕ್ಷ್ಮರಾಗುತ್ತಿದ್ದಾರೆ. ಒಮ್ಮೆ ನನಗೆ ಗೊತ್ತಿರುವ ಒಂದು ಹಳ್ಳಿಯ ಯುವಕ ಹೇಳಿದ ಕತೆ ಇದು: "ನಮ್ಮ ಪಕ್ಕದ ಹಳ್ಳಿಯಲ್ಲಿ ಒಂದು ಆಳವಾದ ಹಳ್ಳದಲ್ಲಿ ಚಿಕ್ಕ ಹುಡುಗಿಯೊಬ್ಬಳು ಬಿದ್ದುಹೋದಳು. ಅವಳನ್ನು ರಕ್ಷಿಸಲು ಹತ್ತಿರದ ಊರಿನಿಂದ ಫೈರ್ ಫೋರ್ಸ್ ಅನ್ನು ಕರೆಸಿದ್ದರು. ಅಷ್ಟರಲ್ಲಿ ಒಬ್ಬ ಒಂದು ಟೀವಿ ಚಾನೆಲ್‌ನವರಿಗೆ ಫೋನ್ ಮಾಡಿದ. ಸುದ್ದಿಯನ್ನು ಕೇಳಿದ ಟೀವಿ ಚಾನೆಲ್‌ನವರು 'ನಾವು ಅಲ್ಲಿಗೆ ಬರುವತನಕ ಆ ಹುಡುಗಿಯನ್ನು ಹಳ್ಳದಿಂದ ಎತ್ತಬೇಡಿ. ನಮಗೆ ಆಕೆ ಹಳ್ಳದಲ್ಲಿ ಇರುವ ದೃಶ್ಯಗಳು ಬೇಕು. ಇದಕ್ಕೆ ಒಪ್ಪಿದರೆ ಮಾತ್ರ ನಾವು ನಮ್ಮ ವರದಿಗಾರರನ್ನು ಮತ್ತು ಕ್ಯಾಮೆರಾಮನ್ ಅನ್ನು ನಿಮ್ಮ ಹಳ್ಳಿಗೆ ಕಳುಹಿಸುತ್ತೇವೆ' ಅಂದರು. ಸದ್ಯ ಟಿವಿಯವರು ಬರುವ ಮುನ್ನವೇ ಹಳ್ಳಿಯ ಜನ ಆ ಹುಡುಗಿಯನ್ನು ರಕ್ಷಿಸಿದರು."

ಹಾಗೆಯೇ ಇತ್ತೀಚೆಗೆ ಕೆಲವು ಸಂಘಟನೆಗಳು, ಪ್ರಮುಖ ವ್ಯಕ್ತಿಗಳು ಮತ್ತು ಕ್ರಿಮಿನಲ್‌ಗಳು ಕೂಡ ಟೀವಿ ಕ್ಯಾಮೆರಾಗಳಿಗಾಗಿಯೇ 'ಹೋರಾಟ' ಎಂಬ 'ಹಾರಾಟ' ಮಾಡುವುದೂ ಮಾಮೂಲಿಯಾಗಿದೆ. ಅದರಲ್ಲೂ ಭಾಷೆ, ಭೂಮಿ ಮತ್ತು ಧರ್ಮದ ರಕ್ಷಣೆಯ ಹೆಸರಲ್ಲಿ ಹಲವರು ಮಾಡುವ 'ದಾಳಿ', 'ಹೋರಾಟ'ಗಳು ಟಿವಿ ಚಾನೆಲ್‌ಗಳಲ್ಲಿ ಪ್ರಚಾರ ಪಡೆಯಲೆಂದೇ ಮಾಡುವ ಕೃತ್ಯಗಳಾಗಿರುತ್ತವೆ. ಇಂತಹ ಪ್ರವೃತ್ತಿಗೆ ಪಬ್ ಮೇಲೆ, ಚರ್ಚ್ ಮೇಲೆ, ಯಾವುದೋ ಖಾಸಗಿ ಪಾರ್ಟಿ ಮೇಲೆ ಕೆಲವು ಸಂಘಟನೆಗಳ ಪುಂಡರು ದಾಳಿ ಮಾಡುವಾಗ ತಮ್ಮೊಂದಿಗೆ ಟಿವಿ ಕ್ಯಾಮೆರಾದವರನ್ನು ಕರೆದುಕೊಂಡು ಹೋಗಿದ್ದೇ ಸಾಕ್ಷಿ.


ಅದು ಮಂಗಳೂರಿನ ಪ್ರಕರಣದಲ್ಲೂ ವ್ಯಕ್ತವಾಗಿದೆ. ನವೀನ್ ಸೂರಿಂಜೆಯನ್ನು ಹಿಂದೂ ಜಾಗರಣಾ ವೇದಿಕೆಯ ಪುಂಡರು ತಮ್ಮೊಂದಿಗೆ ಕರೆದುಕೊಂಡು ಹೋಗಿರದಿದ್ದರೂ ಅವರು ತಮ್ಮ ಕೃತ್ಯಗಳು ಕ್ಯಾಮೆರಾದಲ್ಲಿ ರೆಕಾರ್ಡ್ ಆಗದಂತೆ ತಡೆದಿಲ್ಲ. ಯಾಕೆ ಅಂದರೆ ಇಂತಹ ದಾಳಿಯಿಂದ ಅವರಿಗೆ ಮತ್ತು ಅವರ ಸಂಘಟನೆಗೆ ಪುಕ್ಕಟೆ ಪ್ರಚಾರ ಸಿಗುತ್ತೆ. ಆ ಮೂಲಕ ಅವರಿಗೆ ಮತ್ತಷ್ಟು ಕುಖ್ಯಾತಿ ಲಭಿಸುತ್ತೆ. ಅದರಿಂದ ಅವರ ಹಫ್ತಾ ವಸೂಲಿ ಕಾಯಕಕ್ಕೆ ಶಕ್ತಿ ಸಿಗುತ್ತೆ. ಕೊನೆಗೆ ಜಗದೀಶ್ ಕಾರಂತ ಮತ್ತು ಕಲ್ಲಡ್ಕ ಪ್ರಭಾಕರ ಭಟ್ಟನಂತಹ ಕುತಂತ್ರಿಗಳಿಂದ ಶಹಭಾಷ್‌ಗಿರಿ ಕೂಡ ಲಭಿಸುತ್ತೆ. ಹೇಗಿದ್ದರೂ ಚೆಡ್ಡಿಗಳದ್ದೇ ಸರ್ಕಾರ ಇರುವುದರಿಂದ ಒಂದಷ್ಟು ದಿನ ಪೊಲೀಸ್ 'ರಕ್ಷಣೆ'ಯಲ್ಲಿದ್ದು ಜಾಮೀನಿನ ಮೇಲೆ ಬಂದರಾಯಿತು ಎಂಬ ಲೆಕ್ಕಾ ಈ ವಿಕೃತ ಕಾಮಿಗಳದ್ದು. ಆದರೆ ಹೋಮ್ ಸ್ಟೇ ಮೇಲಿನ ದಾಳಿ ಈಗ ಸಂಘಪರಿವಾರದ ಕುತಂತ್ರಿಗಳ ವಿರುದ್ಧ ಬೂಮರ್ಯಾಂಗ್ ಆಗಿದೆ ಎಂಬುದು ಬೇರೆ ಮಾತು.


ದಾಳಿಯ ಮುನ್ನ ಮತ್ತು ಆನಂತರ ಪೊಲೀಸರು ನಡೆದುಕೊಂಡಿರುವ ರೀತಿಯನ್ನು ನೋಡಿದರೆ ಈ ಅಮಾನುಷ ದಾಳಿಯನ್ನೂ ಅಲ್ಲಿನ ಪೊಲೀಸರು ಯಥಾಪ್ರಕಾರ ಮುಚ್ಚಿಹಾಕುತ್ತಿದ್ದರು. ಯಾಕೆಂದರೆ ಅವರಿಗೆ ದಾಳಿಗೊಳಗಾದವರನ್ನು ತರಾಟೆಗೆ ತೆಗೆದುಕೊಳ್ಳುವುದು ಮತ್ತು ದಾಳಿ ಮಾಡಿದವರನ್ನು ರಕ್ಷಿಸುವುದು ಕರಗತವಾಗಿಹೋಗಿದೆ. ಮಾರ್ನಿಂಗ್ ಮಿಸ್ಟ್ ಪ್ರಕರಣದ ಚಿತ್ರಗಳನ್ನು ಸೂಕ್ಷ್ಮವಾಗಿ ನೋಡಿದರೆ, ಇಲ್ಲೂ ದಾಳಿಗೆ ತುತ್ತಾದ ಅಮಾಯಕರ ಮುಖ ಮುಚ್ಚಿ ಅವರನ್ನು ಪೊಲೀಸ್ ವ್ಯಾನ್‌ನಲ್ಲಿ ಕರೆದುಕೊಂಡು ಹೋಗುತ್ತಿರುವುದು ಮತ್ತು ದಾಳಿ ಮಾಡಿದ ಕುತಂತ್ರಿಗಳು ಪೊಲೀಸರ ಸುತ್ತ ವೀರಯೋಧರಂತೆ ನಿಂತು ಹರಟೆ ಕೊಚ್ಚುತ್ತಿರುವುದು ಕಾಣಿಸುತ್ತದೆ.

ಆದರೆ ನವೀನ್ ಸೂರಿಂಜೆ ಎಂಬ ಯುವ ವರದಿಗಾರ ಹಿಂದೂ ಕುತಂತ್ರಿಗಳ ನೀಚತನವನ್ನೂ, ಪೊಲೀಸರ ಉಡಾಫೆ ತನವನ್ನೂ ಒಂದೇ ಏಟಿಗೆ ಬಯಲುಗೊಳಿಸಿದ್ದಾನೆ. ಗಣಿ ಕಳ್ಳ ಜನಾರ್ದನ ರೆಡ್ಡಿಯ ಮಾಜಿ ದೋಸ್ತ್ ಆದ ಸೀಮಂತ್ ಕುಮಾರ್ ಸಿಂಗ್ ಎಂಬ ಪೊಲೀಸ್ ಅಧಿಕಾರಿಗೆ ದಾಳಿಯ ಬಗ್ಗೆ ಮಾಹಿತಿ ಕೊಡಲಿಲ್ಲ (ಅದು ಅವರಿಗೆ ಮೊದಲೇ ಗೊತ್ತಿದ್ದರೂ ಅಚ್ಚರಿ ಇಲ್ಲ) ಎಂಬುದಕ್ಕೆ ಕೋಪ ಬಂದಿಲ್ಲ. ಬದಲಾಗಿ ತಾನು ಖಾಕಿ ತೊಟ್ಟಿದ್ದರೂ ಹಿಂದೂತ್ವವಾದಿ ಕ್ರಿಮಿನಲ್‌ಗಳಿಗೆ ಪ್ರಿಯವಾದ ಕಾವಿಗೆ ಸೇವೆ ಮಾಡುತ್ತಿದ್ದೇನೆ ಎಂಬುದು ಜಗಜ್ಜಾಹೀರಾಗಿದ್ದರಿಂದ.

ಇವತ್ತು 'ಚೆಡ್ಡಿ ರಿಪಬ್ಲಿಕ್' ಆಗಿ ಪರಿವರ್ತನೆಗೊಂಡಿರುವ ಕರಾವಳಿಯಲ್ಲಿ ನವೀನ್ ಸೂರಿಂಜೆ ಓರ್ವ ಸಂವೇದನಾಶೀಲ ವ್ಯಕ್ತಿ ಆಗಿಯೂ, ಜವಾಬ್ದಾರಿಯುತ ವರದಿಗಾರನಾಗಿಯೂ ತನ್ನ ಕೆಲಸ ನಿರ್ವಹಿಸಿದ್ದಾನೆ.

ಜಗದೀಶ್ ಶೆಟ್ಟರ್ ಅವರ ಸರ್ಕಾರಕ್ಕೆ ಕಿಂಚಿತ್ತಾದರೂ ಮಾನ ಮರ್ಯಾದೆ ಎಂಬುದಿದ್ದರೆ ಈ ಕೂಡಲೇ ನವೀನ್ ಸೂರಿಂಜೆ ವಿರುದ್ಧ ಹೂಡಿರುವ ಕೇಸನ್ನು ವಾಪಸ್ ತೆಗೆದುಕೊಳ್ಳಬೇಕು ಮತ್ತು ದಾಳಿ ಮಾಡಿದ ಹಿಂದೂ ವಿಕೃತಕಾಮಿಗಳಿಗೆ ತಕ್ಕ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು.





ಊರಿಗೆ ಊರೇ ಕ್ರಿಮಿನಲೀಕರಣಕ್ಕೆ ಈಡಾದಾಗ ಪೊಲೀಸು, ರಾಜಕಾರಣ, ಆರ್ಥಿಕತೆ ಎಲ್ಲವೂ ಅದರ ಮೂಗಿನ ನೇರಕ್ಕೇ ನಡೆಯುತ್ತದೆ. ಇಂಥ ವಿಷವರ್ತುಲದಲ್ಲೇ ಹುಟ್ಟಿ ಬೆಳೆದ ಭಿನ್ನಮಂಗಲ ಕೃಷ್ಣಪ್ಪನಿಗೆ ಅದರಿಂದ ಪಾರಾಗುವ ದಾರಿಯಾದರೂ ಎಲ್ಲಿತ್ತು?

ಬೆಮೆಲ್ ಹತ್ಯೆಯಲ್ಲಿ ಯಾರ್ಯಾರು?

ಪಿತೂರಿಯ ಪೂರ್ತಿ ಚಿತ್ರಣ

ಪಾಳುಬಿದ್ದ ಸ್ಮಶಾನದಲ್ಲಿ ಪಿಶಾಚಿಗಳ ದರ್ಬಾರು ಜೋರಾಗೇ ಇರುತ್ತದೆ. ನೆಲಮಂಗಲ ಎಂಬ ಊರಿನದ್ದು ಅದೇ ಪಾಡು. ಕೊಲೆ, ರಕ್ತ, ಸೇಡು, ಸ್ಕೆಚ್ಚು, ಮಚ್ಚು ಕೊಚ್ಚು ಬಿಟ್ಟರೆ ಇಲ್ಲಿ ಬೇರೆ ಭಾಷೆಯೇ ಇಲ್ಲ. ಊರಿಗೆ ಹಿರೀಕನಂತಿದ್ದ ಭಿನ್ನಮಂಗಲ ಕೃಷ್ಣಪ್ಪನವರ ಹತ್ಯೆಯನ್ನಂತೂ ಆ ಊರು ಮರೆಯುವಂತಿಲ್ಲ. ಮಾನವಂತರು, ಸುಸಂಸ್ಕೃತರು, ಸಜ್ಜನರಿಗೆ ಆ ಊರಿನಲ್ಲಿ ಉಳಿಗಾಲವಿಲ್ಲ.

ಊರಿಗೆ ಊರೇ ಕ್ರಿಮಿನಲೀಕರಣಕ್ಕೆ ಈಡಾದಾಗ ಪೊಲೀಸು, ರಾಜಕಾರಣ, ಆರ್ಥಿಕತೆ ಎಲ್ಲವೂ ಆದರ ಮೂಗಿನ ನೇರಕ್ಕೇ ನಡೆಯುತ್ತದೆ. ಇಂಥ ವಿಷವರ್ತುಲದಲ್ಲೇ ಹುಟ್ಟಿ ಬೆಳೆದ ಭಿನ್ನಮಂಗಲ ಕೃಷ್ಣಪ್ಪನಿಗೆ ಆದರಿಂದ ಪಾರಾಗುವ ದಾರಿಯಾದರೂ ಎಲ್ಲಿತ್ತು?

ರಕ್ತಪಿಪಾಸು ಚಿತ್ತನಗೆರೆ ಸೀನ ಕಳೆದ ಎಂಟು ತಿಂಗಳಿಂದ ಭೂಗತನಾಗಿದ್ದು, ಆತನ ಗುರು ಬಂಡೆ ಮಂಜನೂ ಏಕಾಏಕಿ ತಲೆಮರೆಸಿಕೊಂಡದ್ದು ಮತ್ತು ಹ್ಯಾಡಾಳು ದೇವಿಯ ಮಗ ಹರ್ಷ ಲಕ್ಷಗಟ್ಟಲೆ ದುಡ್ಡು ಸಾಗಿಸುತ್ತಿದ್ದಾನೆಂಬ ಮಾಹಿತಿಯೇ ಬೆಮೆಲ್ ಕೃಷ್ಣಪ್ಪ ಪಾಲಿಗೆ ಎಚ್ಚರಿಕೆಯ ಶಕುನದಂತಿತ್ತು. ಇಲ್ಲಿಗೆ ವರ್ಷದ ಹಿಂದಷ್ಟೇ ಜೈಲಿಂದ ಬಿಡುಗಡೆಯಾಗಿ ಬಂದ ಸೀನ ಒಂದು ಹಂತದಲ್ಲಿ ಬೆಮೆಲ್ ಜೊತೆ ರಾಜಿಯಾಗಿ ತನ್ನ ಪಾಡಿಗಿದ್ದು ರಾಜಕೀಯವಾಗಿ ಬೆಳೆಯುವ ಲೆಕ್ಕ ಹಾಕಿಯೇ ಸೊಂಡೆಕೊಪ್ಪ ರಸ್ತೆಯಲ್ಲಿ ಮನೆ ಮಾಡಿದ್ದ. ಓಡಾಡಿಕೊಂಡಿದ್ದರೆ ಪೊಲೀಸರ ಭಯಕ್ಕಾದರೂ ದುಸ್ಸಾಹಸಕ್ಕೆ ಕೈಹಾಕದೆ ತೆಪ್ಪಗಿರುತ್ತಾನೆಂಬ ನಿರೀಕ್ಷೆ ಆಗ ನೆಲಮಂಗಲಕ್ಕೆ ಡಿವೈಎಸ್‌ಪಿಯಾಗಿದ್ದ ಧರಣೇಂದ್ರರಿಗಿತ್ತು.

ಆದರೆ ಆತುರಕ್ಕೆ ಬಿದ್ದ ಬೆಂಗಳೂರಿನ ಸಿಸಿಬಿ ಏಕಾಏಕಿ ಸೀನನ ಅಡ್ಡೆ ಮೇಲೆ ದಾಳಿಯಿಟ್ಟು ಆತ ಭೂಗತನಾಗಿದ್ದು ಇನ್ನಷ್ಟು ಅಪಾಯಕಾರಿಯಾಗುವಂತೆ ಮಾಡಿತು. ಜೈಲಲ್ಲಿದ್ದರೆ ಕಡುವೈರಿ ಶಂಕರನ ಅಪಾಯ. ಹೊರಗಿದ್ದರೆ ಬೆಮೆಲ್ ಛೂಬಿಡುವ ಪೊಲೀಸರ ಕಾಟ. ತಾನು ಉಳಿಯಬೇಕೆಂದರೆ ಬೆಮೆಲ್‌ರನ್ನು ಮುಗಿಸಲೇಬೇಕೆಂಬ ನಿರ್ಧಾರಕ್ಕೆ ಬಂಡೆ ಮಂಜನೂ ಬಂದುಬಿಟ್ಟಿದ್ದ. 2011ರ ಜುಲೈ ತಿಂಗಳಲ್ಲಿ ಹಾಗೇ ಪರಾರಿಯಾಗಿದ್ದ ಸೀನ ಕೆಲಕಾಲ ಚಿಕ್ಕಮಗಳೂರಿನಲ್ಲಿ ದ್ದಾನೆಂದೂ ಆನಂತರ ತೀರ್ಥಹಳ್ಳಿ ಭಾಗದಲ್ಲಿ ಓಡಾಡಿಕೊಂಡಿದ್ದಾನೆಂದೂ, ಅಲ್ಲಿ ಕಮ್ಮರಡಿ ಹನೀಫನ ಗ್ಯಾಂಗ್ ಸೀನನಿಗೆ ನೆರವಾಗುತ್ತಿದೆಯೆಂದೂ, ಹನೀಫನ ತಮ್ಮ ಹಮ್ಜಾನ ಕಾಂಟ್ಯಾಕ್ಟಿನಲ್ಲಿ ಕೇರಳ ಸೇರಿಕೊಂಡು ಅಲ್ಲಿಂದಲೇ ಜೈಲಲ್ಲಿದ್ದ



ಶಂಕರನನ್ನು ಮುಗಿಸಲು ಸ್ಕೆಚ್ಚು ಹೆಣೆಯುತ್ತಿದ್ದಾನೆಂಬ ಸುದ್ದಿಯಿತ್ತು.

ಇದನ್ನು ಪಕ್ಕಾ ಮಾಡಿಕೊಳ್ಳುವಲ್ಲಿ ಬೆಮೆಲ್ ವಿಫಲರಾದರು. ಮೊದಲು ಶಂಕ್ರನನ್ನು ಮುಗಿಸಿದ ಮೇಲೆ ತಾನೇ ಸೀನ ತನ್ನತ್ತ ನೋಡುವುದು ಎಂಬ ಉಡಾಫೆಗೆ ಬೆಮೆಲ್ ಬಿದ್ದರು. ಪೊಲೀಸರಿಂದ ಬರುವ ಮಾಹಿತಿಗಳೂ ಅದೇ ಆಗಿತ್ತು. ಸೀನ ಮತ್ತು ಬಂಡೆ ಮಂಜ ಸೇರಿಕೊಂಡು ಮೊದಲು ಚಿತ್ತನಗೆರೆ ಶಂಕ್ರನನ್ನು ವಿಚಾರಿಸಿಕೊಳ್ಳುತ್ತಾರೆಂದೇ ಕಾರಣಸಮೇತ ಸಾಧಿಸುತ್ತಿದ್ದರು. ಆದರೆ ಸೀನನ ಲೆಕ್ಕಾಚಾರವೇ ಬೇರೆಯಿತ್ತು. ಶಂಕ್ರ ಎಷ್ಟೆಂದರೂ ಜೈಲುಹಕ್ಕಿ. ಹೆಚ್ಚೆಂದರೆ ಆತನನ್ನು ಕೋರ್ಟಿಗೆ ತರುವ ಮಧ್ಯದಲ್ಲಿ ಅಟ್ಯಾಕ್ ಮಾಡಬೇಕು. ಜೊತೆಗೆ ಬಂದೂಕುಧಾರಿ ಪೊಲೀಸರು ಬೇರೆ. ಎಷ್ಟೇ ಚಾಕಚಕ್ಯತೆಯಿಂದ ನುಗ್ಗಿದರೂ ರಿಸ್ಕು ತಪ್ಪಿದ್ದಲ್ಲ. ಹಾಗೊಮ್ಮೆ ಬಂದೂಕುಧಾರಿ ಪೊಲೀಸರನ್ನು ಮೀರಿಯೂ ಶಂಕ್ರನ್ನು ಮುಗಿಸಿದರೆ, ಆತನ ಜಾಗಕ್ಕೆ ಮತ್ತೊಬ್ಬ ಶಂಕ್ರನನ್ನು ಹುಟ್ಟಿಹಾಕಲು ಹೇಗೂ ಬೆಮೆಲ್ ಇದ್ದೇ ಇರುತ್ತಾನೆ.

ಶಂಕ್ರ ಅಸಲಿ ತಾಕತ್ತು ಕೃಷ್ಣಪ್ಪ. ಆತನಿಗೆ ಅ
ಮೂಲದಂತಿರುವ ಕೃಷ್ಣಪ್ಪರನ್ನು ಮೊದಲು ತೆಗೆದರೆ ಸದ್ದಿ
ಶಂಕ್ರ ತೆಪ್ಪಗಾಗುತ್ತಾನೆ. ಆನಂತರ ಆತನನ್ನು ಮುಗಿಸು
ಎಷ್ಟು ಹೊತ್ತು?

ಹೀಗೆ ಅಂತಿಮ ಚುಕ್ತಾ ಪೈಶಾಚಿಕತೆಯೊಂದಕ್ಕೆ
ಯಾಗಿಯೇ ಸೀನ ಮೊದಲು ಬೆಮೆಲ್‌ಗೆ ಆತ್ಮೀಯರಾ
ಯಲಹಂಕ ಶಾಸಕ ವಿಶ್ವನಾಥ್‌ರನ್ನು ಕಂಡು ಕಾಲಿಗೆ
ತಾನು, ಬಂಡೆ ಮಂಜ, ಇದೀ ಹ್ಯಾಡಾಳು ದೇವಿ
ಸಂಬಂಧಿಕರು ಮತ್ತು ನೆಲಮಂಗಲದ ಹಿರೀಕ ಕರಿವರ
ಮುಂತಾದವರೆಲ್ಲರೂ ಈಗ ಬಿಜೆಪಿಗೆ ಸೇರಿದ್ದೇವೆ. ನಿಮ
ಬಿಟ್ಟರೆ ನಮಗೆ ನಾಯಕರು ಅಂತ ಬೇರೆ ಯಾರಿದ
ಎಂದೇ ಶಾಸಕ ವಿಶ್ವನಾಥ್ ಮುಂದೆ ಮಂಡಿಯೂರಿ

ಆದರೆ ವಿಶ್ವನಾಥ್‌ಗಿದು ಅಚಾನಕ್ ಆಘಾತವಾಗಿ
ಹೀಗೆ ಸೀನ ಮುನ್ಸೂಚನೆ ಕೂಡ ನೀಡದೆ ಏಕಾಏಕಿ
ಮನೆಬಾಗಿಲಿಗೆ ಬರುತ್ತಾನೆಂಬ ನಿರೀಕ್ಷೆ ಕೂಡ ವಿಶ್ವನ
ಗಿರಲಿಲ್ಲ. ಆವತ್ತು ಸೀನನ ಜೊತೆಗಿದ್ದದ್ದು ಗೋಪಾಲಪು
ಜಿಲ್ಲಾ ಪಂಚಾಯ್ತಿ ಸದಸ್ಯ ವಡೇರಹಳ್ಳಿ ಜಯರಾಮ ವ
ಹೆಸರುಘಟ್ಟದ ಬಿಜೆಪಿ ಜಿಲ್ಲಾ ಪಂಚಾಯ್ತಿ ಮೆಂ
ಕಾಕೋಳು ಮಾರೇಗೌಡರ ತಮ್ಮ ಮುನೇಶ. ಈತ ಸಿ
ಆ ಕಾಲದ ಸ್ನೇಹಿತ. ಹೇಳದೆ ಕೇಳದೆ ಏಕಾಏಕಿ ಹ
ಸೀನನನ್ನು ಮನೆಗೆ ಕರೆತಂದ ಮುನೇಶನನ್ನು ಆ ಕ್ಷ
ವಾಚಾಮಗೋಚರ ಬಯ್ದಿದ್ದಾರೆ ವಿಶ್ವನಾಥ್. ಈಗ ಇ
ಕೆಟ್ಟ ಹೆಸರು ಸಾಲದು ಅಂತ ಈತನನ್ನು ಬೇರೆ ಮ
ಕರೆತಂದಿದ್ದೀಯಾ ಎಂದೇ ಝಾಡಿಸಿಬಿಟ್ಟರು.

ಅಲ್ಲಿಗೆ ಶಾಸಕ ವಿಶ್ವನಾಥ್ ಎಷ್ಟೆಂದರೂ ಬೆಮ
ಪರವೇ ಎಂಬುದು ಸೀನನಿಗೆ ಗ್ಯಾರಂಟಿಯಾಗಿತ್ತು.
ಬೆಮೆಲ್ ಮುಗಿಸದೆಹೋದರೆ ಅನಾಹುತ ಕಟ್ಟಿಟ್ಟ
ಎಂದೇ ಲೆಕ್ಕಹಾಕಿ ಬೆಮೆಲ್ ಓಡಾಟ, ಕಾಂಟಾ
ಚಲನವಲನಗಳ ಮಾಹಿತಿ ನೀಡುವುದಕ್ಕೆಂದೇ ಸಮ
ಆಳ್ಕಾಟಿಯೊಬ್ಬನನ್ನು ನೇಮಿಸಿದ. ಆತ ನೆಲಮಂಗ
ಸಚ್ಚಿ ಅಲಿಯಾಸ್ ಸಚ್ಚಿದಾನಂದ. ಈತ ನೆಲಮಂಗ
ವಿಶ್ವವೀರಶೈವ ವೇದಿಕೆಯ ಅಧ್ಯಕ್ಷ!

ಹೆಸರಿಗಷ್ಟೇ ಅಂಥದೊಂದು ಸಂಘವನ್ನು ಕಟ್ಟಿಕೊ
ರುವ ಸಚ್ಚಿ ಇಲ್ಲಿಗೆ ಎರಡು ವರ್ಷದ ಹಿಂದೆ ತುಮಕ
ರಸ್ತೆಯ ಟಿ.ಬೇಗೂರಿನಲ್ಲೊಂದು ಲಾಡ್ಜು ನಡೆಸು
ಹೆಸರಿಗದು ಲಾಡ್ಜಾದರೂ ಅಲ್ಲಿ ನಡೆಯುತ್ತಿದ್ದದ್ದು
ಮೈಕಸುಬು. ಅದೇನು ಯಡವಟ್ಟಾಯಿತೋ, ನೆಲಮ
ಪೊಲೀಸ್ ಠಾಣೆಯ ಎಸ್.ಐ. ವಿರೂಪಾಕ್ಷಸ್ವಾಮಿ ಒ
ಎರಡು ಬಾರಿ ರೇಡು ಹಾಕಿ ಹಿಂಡುಗಟ್ಟಲೆ ಲಲನೆಯ
ಅವರ ಗಿರಾಕಿಗಳನ್ನು ಒಟ್ಟೊಟ್ಟಿಗೆ ಎಳೆದೊಯ್ದರು.
ಬರಕತ್ತಿಲ್ಲ ಎಂದು ಲೆಕ್ಕ ಹಾಕಿದ ಸಚ್ಚಿ ಆನಂತರ ಅದ್ದ
ಚಿತ್ತನಗೆರೆ ಸೀನನ ಸಂಪರ್ಕಕ್ಕೆ ಬಂದಿದ್ದಾನೆ.

ಈ ಮಧ್ಯೆ ಸೀನನಿಗೂ ಶಂಕ್ರನಿಗೂ
ಮಾಡಿಸುತ್ತೇನೆಂದು ತಲೆಎತ್ತಿದವನು ರೋಹಿತ್
ಅಲಿಯಾಸ್ ಡಬಲ್ ಟು ಎಂಬ ಪುಡಿ ರೌಡಿ. ಒ
ಹಂತದಲ್ಲಿ ಶಂಕರ ರಾಜಿಯಾಗಲು ಒಪ್ಪಿದ್ದ. ಬ
ಸೀನನೂ ರಾಜಿಯಾಗುತ್ತೇನೆಂದೇ ಹೇಳಿದ್ದ ಅಥವಾ
ನಟಿಸಿದ್ದ. ಯಾವತ್ತು ಡಬಲ್ ಟು ಅಲಿಯ
ರೋಹಿತ್‌ಗೌಡ ತನಗಿಂತಲೂ ಶಂಕರನಿಗೆ
ನಿಯತ್ತಾಗಿದ್ದಾನೆಂಬುದು ಗೊತ್ತಾಯಿತೋ ಉಪಾಯ


ಶಂಕ್ರನ ಟಾರ್ಗೆಟ್ ವಡೇರಹಳ್ಳಿಯೋ, ಇ.ಕೆ.ಯೋ?

ತನ್ನ ದುಷ್ಮನ್ ಶಂಕ್ರನ ಶಕ್ತಿ ಉಡುಗಿಸಲು ಹೋಗಿ ಸೀನ ಭಿನ್ನಮಂಗಲ ಕೃಷ್ಣಪ್ಪರನ್ನು ಬರ್ಬರವಾಗಿ ಕೊಂದನಲ್ಲ; ಅದಕ್ಕೆ ಪ್ರತಿಯಾಗಿ ಈಗ ಜೈಲಲ್ಲಿ ಕೂತಿರುವ ಶಂಕ್ರ ಸೀನನ ಬೆನ್ನಿಗಿರುವ ಯಾವ ಹಿರಿ ತಲೆಯನ್ನು ತೆಗೆಯುತ್ತಾನೆ?

ಅದು ಭೂದಾಳು ಗ್ರಾಮದ ಹಿರೀಕ ಕರಿವರದಯ್ಯನೋ ಅಥವಾ ಜೆಡಿಎಸ್ ಎಮ್ಮೆಲ್ಸಿ ಮುಂಗಾರು ಮಳೆ ಕೃಷ್ಣಪ್ಪನೋ?

ಶಾಂತಂ ಪಾಪಂ; ಇಂಥದೊಂದು ಪ್ರಶ್ನೆ ಸದ್ಯ ನೆಲಮಂಗಲದುದ್ದಕ್ಕೂ ಹೊಗೆಯಾಡುತ್ತಿರುವುದಂತೂ ಸತ್ಯ. ಇಲ್ಲಿನ ರಕ್ತಪಿಪಾಸುಗಳ ಕ್ರೌರ್ಯ, ಬರ್ಬರವನ್ನು ಬಲ್ಲವರ ಪ್ರಕಾರ ಭಿನ್ನಮಂಗಲರ ಕಗ್ಗೊಲೆಗೆ ಪ್ರತಿಯಾಗಿ ಶಂಕ್ರ ಸೀನನ ಆರ್ಥಿಕಮೂಲವನ್ನು ಕತ್ತರಿಸುವ ರಕ್ತಪಾತಕ್ಕೆ ಕೈಯಿಟ್ಟೇ ತೀರುತ್ತಾನೆ. ಹಾಗೆ ನೋಡಿದರೆ ಶಂಕ್ರ ಕರಿವರದಯ್ಯನ ಮೇಲೆ ಕೈ ಹಾಕುವ ಸಂಭವ ತೀರಾ ಕಮ್ಮಿ. ಏಕೆಂದರೆ ಆತ ವಯೋವೃದ್ಧ, ಸೀನನ ಅಕ್ಕನ ಗಂಡ ಹತ ಹ್ಯಾಡಾಳು ದೇವಿಯ ತಂಗಿಯನ್ನು ಕರಿವರದಯ್ಯನ ಮಗ ಮದುವೆಯಾಗಿರುವುದನ್ನು ಬಿಟ್ಟರೆ ಕರಿವರದಯ್ಯ ಸಂಭಾವಿತ ಮತ್ತು ತರಲೆ ತಾಪತ್ರಯಗಳಿಂದ ಸದಾ ದೂರ.

ತಾನಾಯಿತು ತನ್ನ ಪಾಡಾಯಿತು ಎಂಬಂತೆಯೇ ಬದುಕಿದವನು ಕರಿವರದಯ್ಯ, ಕಂಡೋರ ಸೊತ್ತು, ಕ್ರಿಮಿನಲ್‌ಗಳಿಗೆ ನೆರವು ಇತ್ಯಾದಿಗಳಿಗೆ ಯಾವತ್ತೂ ಕೈಹಾಕದ ಮುದುಕನ ಮೇಲೆ ಕೈಯಿಟ್ಟು ಮೂರ್ಖನಾಗುವಷ್ಟು



ಕುಸಿದು ಬಿದ್ದರಂತೆ ಮುಂಗಾರು ಮಳೆ ಕೃಷ್ಣಪ್ಪ!

ಆತುರಗೇಡಿ ಶಂಕ್ರನಲ್ಲ. ಆತನ ಗುರಿಯಿರುವುದು ಗೋಪಾಲಪುರದ ಜಿಲ್ಲಾ ಪಂಚಾಯ್ತಿ ಸದಸ್ಯ ವಡೇರಹಳ್ಳಿ ಜಯರಾಮನ ಮೇಲೆ. ಇಲ್ಲಿಗೆ ವರ್ಷದ ಹಿಂದೆ ವಡೇರಹಳ್ಳಿ ಮತ್ತು ಚಿತ್ತನಗೆರೆ ಮಾರ್ಗದ ಮಧ್ಯೆ ಜಯರಾಮನ ಗಾಡಿಗೆ ಅಡ್ಡ ಹಾಕಿದ ಶಂಕ್ರನ ಬಂಟ ಹಟ್ಟಿ ಮುನಿಯ ಗ್ಯಾಂಗ್ ಗುರಿಯಿಟ್ಟೇ ಗುಂಡು ಹಾರಿಸಿತ್ತು. ಫೈರ್ ಆದ ಬುಲೆಟ್ ಕಾರಿನ ಗಾಜು ಸೀಳಿಕೊಂಡು ಜಯರಾಮ್ ಕೊರಳನ್ನು ಸವರಿಕೊಂಡು ಹೋಗಿತ್ತು. ಕೂದಲೆಳೆಯಿಂದ ವಡೇರಳ್ಳಿ ಬಚಾವಾದ.

ಅವತ್ತಿನಿಂದ ಇನ್ನಷ್ಟು ಹುಷಾರಾದ ಜಯರಾಮ ಶಂಕ್ರನ ವಿರುದ್ಧ ಇನ್ನಷ್ಟು ವ್ಯಗ್ರಗೊಂಡು ಸೀನನಿಗೆ ಕುಮ್ಮಕ್ಕು ಕೊಡುತ್ತಲೇ ಇದ್ದ. ಈಗ ಬೆಮೆಲ್ ಕೃಷ್ಣಪ್ಪನೇ ಕೊಲೆಯಾದ ಮೇಲೆ ಶಂಕ್ರ ವಡೇರಹಳ್ಳಿಯ ಮೇಲೆ ಮತ್ತಷ್ಟು ಕುದಿಯದೇ ಇರುತ್ತಾನಾ?

ಅದು ನಿಜವಾದರೂ ಶಂಕ್ರ ಮತ್ತು ಚಿತ್ತನಗೆರೆ ಮಂಜ ವಡೇರಹಳ್ಳಿ ಜಯರಾಮನಿಗಿಂತಲೂ ದೊಡ್ಡ ಬೇಟೆಗೆ ಕೈಹಾಕುವ ಸಾಧ್ಯತೆಯೇ ಹೆಚ್ಚು. ನಿಜಕ್ಕೂ ಇ. ಕೃಷ್ಣಪ್ಪ ಅರ್ಥಾತ್ ಮುಂಗಾರು ಮಳೆ ಕೃಷ್ಣಪ್ಪ ಚಿತ್ತನಗೆರೆ ಸೀನನಿಗೆ ಕುಮ್ಮಕ್ಕು ಕೊಟ್ಟಿರಲಾರರು. ಹಾಗೇ ಸೀನನನ್ನು ಮುಂದಿಟ್ಟುಕೊಂಡು ವ್ಯವಹರಿಸುವ ದಾರಿದ್ರ್ಯ ಕೂಡ ಇ.ಕೆ. ಗೆ ಇರಲಿಕ್ಕಿಲ್ಲ. ಆದರೆ, ನೆಲಮಂಗಲದ ದೌರ್ಭಾಗ್ಯವಿದೆಯಲ್ಲ; ಅದು ಅಲ್ಲಿಗೆ ಸಂಬಂಧಿಸಿದ ಯಾರನ್ನೂ ಬಿಡುವುದಿಲ್ಲ.



ಬೆಮೆಲ್ ಹಂತಕ ಒಂದಲ್ ರವಿ ಸುಭಾಷ್ ಭರಣಿಯ ಜೊತೆ.

ಹ್ಯಾಡಾಳು ದೇವಿಯನ್ನು ತನ್ನ ಜಮೀನು ಲಫಡೆಯ ಕಾರಣಕ್ಕೆ ಕೊ
ಹಾಕಿದ್ದ ಶಂಕ್ರ ಅನ್ಯಾಯವಾಗಿ ಅದನ್ನು ಬೆಮೆಲ್ ಕೃಷ್ಣಪ್ಪರ ಮೇಲೆ ಹೊ
ಹಾಕಿದ್ದ. ವಿಧಿಯಿಲ್ಲದೆ ಬೆಮೆಲ್ ಶಂಕ್ರನ ಪರವಹಿಸುವುದು ಅನಿವಾರ್ಯವಾ
ಬಂತು. ಅದಕ್ಕೆ ಪ್ರತಿಯಾಗಿ ಬಂಡೆ ಮಂಜ ಇ.ಕೆ. ನೆರಳಿಗೆ ಬಂದ. ತ
ಇ.ಕೆ. ಬೆಂಬಲಿಗನೆಂದು ಹೇಳಿಕೊಂಡ.


ಈಗ ಇದೇ ಕಾರಣಕ್ಕೆ ಶಂಕ್ರ ಇ.ಕೆ.ಯನ್ನು ಟಾರ್ಗೆಟ್ ಮಾಡುತ್ತಾನೆ
ವದಂತಿ ನೆಲಮಂಗಲದಲ್ಲಿ ಹಬ್ಬಿದೆ. ಯಾರೋ ಇ.ಕೆ.ಯ ಬಳಿ ಹೀಗಂದ
ತಡ, ಇ.ಕೆ. ಆಘಾತಕ್ಕೀಡಾಗಿ ಕುಸಿದುಬಿದ್ದರಂತೆ. ನೆಲಮಂಗಲವ
ಊರೊಂದರ ಪಾಪವು ಹೇಗೆ ಆ ಊರಿನ ರಾಜಕಾರಣಿಗಳ ಪಾ
ಶಾಪವಾಗುತ್ತದೆ ಎಂಬುದಕ್ಕೆ ಇದಕ್ಕಿಂತ ಬೇಕೆ?

ಯಾವುದಕ್ಕೂ ಇ.ಕೆ. ಹುಷಾರಾಗುವುದು ಒಳಿತು!

...ನ್‌ಕೌಂಟರ್ ತಡೆದದ್ದು ಡಿಸಿಎಂ ಅಶೋಕ್?

...ಇಂಥ ಪುಕಾರುಗಳನ್ನು ಅದ್ಯಾರು ಹುಟ್ಟುಹಾಕುತ್ತಾರೋ ಗೊತ್ತಿಲ್ಲ ಅಥವಾ ಕಿಡಿಯೊಂದರ ಕಾರಣಕ್ಕೆ ಇಂಥ ...ಗೆಯಾಡುತ್ತಾ?

...ನೆಲಮಂಗಲದ ಪಾಪಕೂಪದಲ್ಲಿ ಸದ್ಯ ಗುಲ್ಲೆದ್ದ ಪುಕಾರೊಂದರ ಪ್ರಕಾರ ಬೆತ್ತನಗೆರೆ ಸೀನ ಅಥವಾ ಬಂಡೆ ...ಜರನ್ನು ಎನ್‌ಕೌಂಟರ್ ಮಾಡದ ಹಾಗೆ ಸ್ವತಃ ಪೊಲೀಸು ಖಾತೆ ಹೊತ್ತ ಡಿಸಿಎಂ ಅಶೋಕ ಸಾಹೇಬರು ...ಲೀಸರನ್ನು ಎಚ್ಚರಿಸಿದ್ದಾರಂತೆ. ಹಾಗೇ ಬೆತ್ತನಗೆರೆ ಸೀನನ ಪರವಹಿಸಿ ಗೃಹಮಂತ್ರಿ ಅಶೋಕ್‌ರನ್ನು ಪಳಗಿಸಿದ್ದು ...ಲ್ಲಿ ಮುಂಗಾರು ಮಳೆ ಕೃಷ್ಣಪ್ಪರಂತೆ!



ಬೆತ್ತನಗೆರೆ ಸೀನನ ತಂಡದ ಜೊತೆಗೆ ಎಮ್ಮೆಲ್ಸಿ ಕೃಷ್ಣಪ್ಪರಿಗೆ ಸಲುಗೆಯಿರಬಹುದು. ಭಿನ್ನಮಂಗಲದ ಕೃಷ್ಣಪ್ಪ ಮತ್ತು ಇ.ಕೆ. ರಾಜಕೀಯವಾಗಿ ಎದುರಾಳಿಗಳಾಗಿರಬಹುದು. ಅದೇ ಕಾರಣಕ್ಕೆ ದಾಸರಹಳ್ಳಿ ಶಾಸಕ ಮುನಿರಾಜು ಮತ್ತು ಇ.ಕೆ.ಮಧ್ಯೆ ಆತ್ಮೀಯತೆ ಇರಬಹುದು. ಮುಂಬರುವ ಚುನಾವಣೆಯಲ್ಲಿ ತನ್ನ ಪರಮಾಪ್ತ ದಾಸರಹಳ್ಳಿ ಮುನಿರಾಜು ವಿರುದ್ಧ ಬೆಮೆಲ್ ಕೃಷ್ಣಪ್ಪ ಕಣಕ್ಕಿಳಿಯಬಹುದೆಂದು ಗೃಹಮಂತ್ರಿ ಅಶೋಕ್‌ಗೂ ಆತಂಕವಿರಬಹುದು. ಆದರೆ ಸೀನನ ಎನ್‌ಕೌಂಟರ್ ...ದಲು ಸಿಸಿಬಿ ಅಧಿಕಾರಿಯೊಬ್ಬರು ತುದಿಗಾಲ ಮೇಲೆ ನಿಂತಿದ್ದಾರೆಂಬುದಕ್ಕೆ ಯಾವುದೇ ಆಧಾರವಿಲ್ಲ. ಅಷ್ಟಕ್ಕೂ ... ಅಥವಾ ಬಂಡೆ ಮಂಜರನ್ನು ಪೊಲೀಸರು ಎನ್‌ಕೌಂಟರ್ ಮಾಡುತ್ತಾರೆಂದು ಸ್ವತಃ ಅಂಡರ್‌ವರ್ಲ್ಡ್ ಮೂಲಗಳು ...ಕೊಡುತ್ತಿಲ್ಲ, ತನ್ನ ಚೇಲಾ ಇಟ್ಟಮಡು ಬಾಬು ಹತ್ಯೆ ವಿರುದ್ಧ ಪರಂಧಾಮನನ್ನು ಎನ್‌ಕೌಂಟರ್ ಮಾಡಿಸಿದ ಡಿಸಿಎಂ ...ಶೋಕ್‌ಗೆ ಸೀನ ಅಥವಾ ಮಂಜರನ್ನು ಎನ್‌ಕೌಂಟರ್ ಮಾಡಿಸಿ ಯಾವ ಪ್ರಯೋಜನವೂ ಇಲ್ಲವಲ್ಲ!




...ಯನ್ನು ಬಿಟ್ಟು ರೋಹಿತ್‌ಗೌಡನನ್ನು ಸುಂಕದಕಟ್ಟೆಯ ...ತ್ರಿ ಹೋಟೇಲೊಂದಕ್ಕೆ ಕರೆಸಿಕೊಂಡ. ಮೊದಲೇ ಹೊಂಚಿ ...ತಿದ್ದ ಸೀನನ ಹಂತಕ ಪಡೆ ಕುಡಿದು ಚಿತ್ತಾಗಿದ್ದ ...ಹಿತ್‌ಗೌಡನನ್ನು ಸಚ್ಚಿಯ ಎದುರೇ ಕೊಚ್ಚಿ ಹಾಕಿತ್ತು. ...ತ್ರವೆಂದರೆ ಜೊತೆಗಿದ್ದ ಸಚ್ಚಿಗೆ ಹೊಡೆತದ ಗಾಯಗಳಿರಲಿ, ...ದ ಬಟ್ಟೆಯ ಇಸ್ತ್ರಿ ಕೂಡ ಕೊಂಕಿರಲಿಲ್ಲ. ರೋಹಿತ್ ...ನ ಹೆಣದ ಮುಂದೆ ನಿಂತು ಬಾಯಿ ಬಡಿಕೊಂಡ ...ಯನ್ನು ಪೊಲೀಸರು ಏನೆಲ್ಲಾ ವಿದ್ಯೆ ಪ್ರಯೋಗಿಸಿದರೂ ...ಯೋಜನವಾಗಲಿಲ್ಲ. ಇನ್ನೂ ವಿಕಟವೆಂದರೆ ...ಹಿತ್‌ಗೌಡನ ಹತ್ಯೆಗೆ ಸಚ್ಚಿಯೇ ಸಾಕ್ಷಿದಾರನಾಗಿದ್ದ!

...ಇದು ಸೀನನ ತಂತ್ರ. ಹೀಗೆ ರೋಹಿತ್‌ಗೌಡನ ...ತೆಗಿದ್ದು ಆತನ ಹತ್ಯೆಗೆ ಪ್ರತ್ಯಕ್ಷ ಸಾಕ್ಷಿಯಾದ ಸಚ್ಚಿ ...ತರ ಬಿದ್ದದು ಬೆಮೆಲ್ ಕೃಷ್ಣಪ್ಪನವರ ಜೊತೆಗೆ. ಅದೇನು ...ರ್ಸೆಯೋ ಬೆಮೆಲ್ ಹೋಗಿ ಬಂದಲೆಲ್ಲ ಸಚ್ಚಿಯನ್ನು ...ತೆಗೊಯ್ಯುತ್ತಿದ್ದರು. "ನೋಡಿ... ಸೀನ ಎಂಥಾ ಕೆಲಸ ...ಡಿಬಿಟ್ಟ. ನನ್ನ ಪ್ರಾಣ ಸ್ನೇಹಿತ ರೋಹಿತ್‌ಗೌಡನನ್ನು ...ಯವಾಗಿ ಕೊಲ್ಲಿಸಿಬಿಟ್ಟ. ಈಗ ಸಾಕ್ಷಿ ಹೇಳಬೇಡ ...ಬೆದರಿಕೆ ಹಾಕುತ್ತಿದ್ದಾನೆ..." ಎಂದು ಸಚ್ಚಿ ಕಟ್ಟಿದ ...ಯನ್ನು ಬೆಮೆಲ್ ನಂಬಿಬಿಟ್ಟರು. ಹೇಗೂ ಸೀನನ ...ದ್ಧ ಕೋರ್ಟಿನಲ್ಲಿ ಸಾಕ್ಷಿ ಹೇಳುವುದಕ್ಕೆ ...ಗುತ್ತಾನೆಂದು ಜೊತೆಗಿಟ್ಟುಕೊಂಡರು.

ಆದರೆ ಸಚ್ಚಿ ಮಾತ್ರ ತನ್ನ ನರಿಬುದ್ಧಿಯನ್ನು ...ರಿಸಿಬಿಟ್ಟ. ಪ್ರತಿನಿತ್ಯ ಬೆಮೆಲ್ ಅಡ್ಡೆ ಹಾಕುವ ..., ಯಾರ್‍ಯಾರನ್ನು ಭೇಟಿಯಾಗುತ್ತಾರೆ, ಎಲ್ಲೆಲ್ಲಿಗೆ ...ಗುತ್ತಾರೆ, ರಿವಾಲ್ವರ್ ಎಲ್ಲಿಟ್ಟಿರುತ್ತಾರೆ; ಎಲ್ಲವನ್ನೂ ...ತ್ತಿದ್ದ. "ಅಲ್ಲಿಗೆ ಸೀನನ ಅರ್ಧ ಕೆಲಸ ಮುಗಿದಿತ್ತು. ... ಹುಷಾರಾಗಿ ಕೇರಳ ಸೇರಿಕೊಂಡು ಬಂಡೆ ಮಂಜನನ್ನು ...ಗಿಳಿಸಿದ. ಮಂಜ ಹಳೇ ಪಾತಕಿ. ಆ ಕಾಲಕ್ಕೇ ಜೆ.ಕೆ ... ಪಳಗಿದವನು. ಹಿಂದೆ ಬೇರೆ ಬೇರೆ ಕೊಲೆ ಕೇಸುಗಳಲ್ಲಿ ... ಬಿಟ್ಟವರು, ಜೈಲಿಂದ ಬಂದವರು, ತನ್ನ ಅಳಿದುಳಿದ ...ಕರರನ್ನೆಲ್ಲ ಒಬ್ಬೊಬ್ಬರನ್ನಾಗಿ ಕರೆಸಿಕೊಂಡು ಮಚ್ಚು ...ಯನ ಸುಪರ್ದಿಗೆ ಬಿಟ್ಟ.

ಈ ಮಚ್ಚು ಮುನಿಯ ಮೂಲತಃ ಬೆತ್ತನಗೆರೆಯವನು. ...ಹಿಂದೆ ಬಾಳೇ ಮಂಡಿ ಬಸವನ ಕೊಲೆ ಕೇಸಿನಲ್ಲಿ ... ಅನಂತರ ಜೊತೆಗೇ ಜೈಲಿಗೆ ಹೋಗಿದ್ದ. ಆನಂತರ ...ದಕಟ್ಟೆಯಲ್ಲಿ ನಡೆದ ರೋಹಿತ್‌ಗೌಡನ ಕೊಲೆ ...ಯಲ್ಲೂ ಇದ್ದ (?). ಬೆತ್ತನಗೆರೆಯಲ್ಲೇ ಇದ್ದರೆ ಎಲ್ಲಿ ... ಮುಗಿಸುತ್ತಾನೋ ಎಂದು ಓಣ್ಯಾ ಎರಡನೇ ಹಂತದ ...ನಹಳ್ಳಿಗೆ ಬಂದು ನೆಲೆಸಿದ. ಅದೇ ಅಂದ್ರಹಳ್ಳಿಯ ... ಶಿವ, ಆನಂದ, ರವಿ ಮುಂತಾದ ಪೋರ್ಕಿಗಳ ... ಅಡ್ಡೆ ಹಾಕಿಕೊಂಡಿದ್ದ. ಇಲ್ಲಿಗೆ ತಿಂಗಳ ಹಿಂದೆಯೇ ...ಡು ಸರಿಸುಮಾರು ಒಂದು ಡಜನ್ ಹುಡುಗರನ್ನು ...ಕೊಂಡು ಜೊತೆಗೊಂದು ಕ್ವಾಂಟರ್‌ಗಾಡಿಯನ್ನು ಹಾಕಿಕೊಂಡು ರೌಂಡಿಂಗ್ ಆರಂಭಿಸಿದ್ದಾನೆಂಬ ಮಾಹಿತಿ ಬೆಂಗಳೂರಿನ ಸಿಸಿಬಿ ಪೊಲೀಸರಿಗಿತ್ತು. ಆದರೆ ಮುನಿಯನ ಗ್ಯಾಂಗ್ ರೌಂಡಿಗಿಳಿದಿದ್ದು ನೆಲಮಂಗಲ ಪಾಸಲೆಯಲ್ಲೇ ಆದ್ದರಿಂದ ಆ ಬಗ್ಗೆ ಸಿಸಿಬಿ ಪೊಲೀಸರು ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ.


ಒಂದೆಡೆ ಮುನಿಯನ ಪಡೆ ಬೇಟೆಗಿಳಿದಿರುವಾಗಲೇ ಇತ್ತ ನೆಲಮಂಗಲದಲ್ಲಿ ಮತ್ತೊಬ್ಬ ಪಾತಕಿ ಎದ್ದು ನಿಂತ. ಆತ ಒಂದಲ್ ರವಿ. ನೆಲಮಂಗಲದ ರಾಯನ್‌ನಗರದ ಹಳೇ ಕ್ರಿಮಿನಲ್. ಶುರುವಿನಲ್ಲಿ ಮಹಾಲಕ್ಷ್ಮೀ ಲೇಔಟ್ ಶಾಸಕ ನೆ.ಲ. ನರೇಂದ್ರಬಾಬು ಸಹೋದರ ಮತ್ತು ನೆಲಮಂಗಲದ ಜೆಡಿಎಸ್ ನಾಯಕ ನೆ.ಲ.ಗಿರಿಧರ್ ಮನೆಯಲ್ಲಿ ಛೇಲಾಗಿರಿ ಮಾಡಿಕೊಂಡಿದ್ದ ಈತನಿಗೆ ತಾನೊಬ್ಬ ಪುಢಾರಿಯಾಗಬೇಕೆಂಬ ಹುಚ್ಚು. ಇಲ್ಲದ ಅಧಿಕ ಪ್ರಸಂಗಿತನಕ್ಕೆ ಕೈಹಾಕುತ್ತಿದ್ದ. ಈತನ ಹಾವಳಿಗೆ ರೋಸತ್ತು




ಒಂದಲ್ ರವಿ



ಹ್ಯಾಡಾಳು ಹರ್ಷ



ಬಂಡೆ ಮಂಜ



ಬೆತ್ತನಗೆರೆ ಶಂಕ್ರ



ಬೆತ್ತನಗೆರೆ ಸೀನ

ಗಿರಿಧರ್ ಹೊರಗಟ್ಟಿದ ಮೇಲೆ ಬೆಮೆಲ್ ಬಳಿ ನಿಂತು "ನಾನೇ ನಿಮಗೆ ರೈಟ್‌ಹ್ಯಾಂಡ್ ಆಗ್ತೀನಿ" ಎಂದ. ಇಂಥ ಬೇಕಾಬಿಟ್ಟಿ ಪಡ್ಡೆಗಳನ್ನು ನೋಡಿದ್ದ ಬೆಮೆಲ್ "ನಿನ್ನ ಹತ್ರ ಇರೋ ಹುಡುಗರಿಗೇ ಕೆಲ್ಸ ಇಲ್ಲ, ನೀನೇನಯ್ಯಾ ಕಡೆದು ಗುಡ್ಡೆ ಹಾಕ್ತೀಯ" ಎಂದು ಉಗಿದಟ್ಟಿದರು.


ಆನಂತರ ಒಂದಲ್ ರವಿ ಇ.ಕೃಷ್ಣಪ್ಪ ಅಲಿಯಾಸ್ ಮುಂಗಾರು ಮಳೆ ಕೃಷ್ಣಪ್ಪನ ಆಸರೆಗೆ ಬಂದ. ಇ.ಕೆ. ಹುಟ್ಟುಹಬ್ಬಕ್ಕೆ ಇಡೀ ನೆಲಮಂಗಲದ ತುಂಬ ಕಟೌಟು, ಫ್ಲೆಕ್ಸ್‌ಗಳನ್ನು ಹಾಕಿಸಿ ಅದರಲ್ಲಿ ತನ್ನ ಫೋಟೋ ಮಿಂಚಿಸಿಕೊಂಡ. 2011ರ ಜುಲೈ ಹೊತ್ತಿಗೆ ಜೈಲಿನಿಂದ ಸೀನ ಹೊರಬಿದ್ದ ಮೇಲೆ ಆತನ ಚಾಕರಿಗೆ ನಿಂತವನೇ, ಎಲ್ಲೆಲ್ಲಿ ಸೀನನಿಗೆ ರೋಲ್‌ಕಾಲ್ ಸಂಗ್ರಹಿಸಿಕೊಡಬೇಕು, ಸೀನನ ಅತಿಥಿಗಳಿಗೆ ಹೇಗೆ ಎಣ್ಣೆ ಊಟ ಒದಗಿಸಬೇಕು. ಸೀನನ ವಿರೋಧಿಗಳ ಮೇಲೆ ಹೇಗೆ ಕಣ್ಣಿಡಬೇಕು. ಸೀನನ ಎದುರಾಳಿಗಳ ಚಲನವಲನದ ಯಾವ್ಯಾವ ಮಾಹಿತಿ ಕಲೆಹಾಕಬೇಕು. ಎಲ್ಲವನ್ನೂ ಈತನೇ ನಿಭಾಯಿಸುತ್ತಿದ್ದ.

ಈ ಮಧ್ಯೆ ಇದೇ ರಾಯಲ್‌ನಗರದ ಗೋವಿಂದಸ್ವಾಮಿ ಅಲಿಯಾಸ್ ಕಿಚ್ಚನ ಜೊತೆ ಸೇರಿ ಮೀಟರ್ ಬಡ್ಡಿ ದಂಧೆ ಆರಂಭಿಸಿದ. ನೆಲಮಂಗಲ ಸುತ್ತಮುತ್ತಲ ಏರಿಯಾಗಳಲ್ಲಿ ಬೇಕಾಬಿಟ್ಟಿ ಇಸ್ಪೀಟು ಅಡ್ಡೆಗಳಿವೆ. ಅಲ್ಲಿ ಇಸ್ಪೀಟಿಗೆ ಬರುವ ಜುಗಾರಿಗಳಿಗೆ ದಿನದ ಲೆಕ್ಕದಲ್ಲಿ ಬಡ್ಡಿಗೆ ಬಿಡುವುದು ಒಂದಲ್ ರವಿ ಮತ್ತು ಕಿಚ್ಚರ ನಿತ್ಯ ಕಸುಬು. ಬೆಳಗ್ಗೆ 10 ಸಾವಿರ ಕೊಟ್ಟರೆ ರಾತ್ರಿ ಹೊತ್ತಿಗೆ ಅದಕ್ಕೆ ಸಾವಿರ ಸೇರಿಸಿ ಕೊಡಬೇಕು. ಇಂಥ ಇಸ್ಪೀಟು ಫೈನಾನ್ಸಿಂಗ್ ದಂಧೆಗೆ ಒಂದಲ್ ರವಿ ತಮ್ಮಂದಿರಾದ ಒಂದಲ್ ನಾಗೇಶ ಮತ್ತು ಒಂದಲ್ ಹರೀಶ ಕೂಡ ಜೊತೆಯಾದರು.

ಹೀಗೆ ಕಿಚ್ಚ ಮತ್ತು ರವಿ ಶುರು ಹಚ್ಚಿಕೊಂಡ ಇಸ್ಪೀಟು ಫೈನಾನ್ಸಿಂಗ್‌ಗೆ ಬಂಡವಾಳವಾಗಿ ಹರಿದುಬರುತ್ತಿದ್ದುದು ಬೆತ್ತನಗೆರೆ ಸೀನನ ವಸೂಲಿಯ ದುಡ್ಡು. ನೆಲಮಂಗಲ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಏನೇ ಸೈಟು ಅಥವಾ ಭೂಮಿಯ ರಿಜಿಸ್ಟ್ರೇಷನ್ ನಡೆಯಿತೆಂದರೆ ಭೂಮಿ ಖರೀದಿಸಿದವರಿಗೆ ರೌಡಿಗಳ ಫೋನ್ ಬರುತ್ತದೆ. ಆತ ಕೇಳಿದಷ್ಟು ಕೊಡಲೇ ಬೇಕು. ಜೊತೆಗೆ ಬಾರ್‌ಗಳು, ಕ್ಲಬ್ಬುಗಳು, ಲಾರಿ ಬುಕಿಂಗ್ ಆಫೀಸುಗಳು, ಕಾರ್ಗೋ ಅಡ್ಡೆಗಳು, ಡಾಬಾಗಳು, ಗಾರ್ಮೆಂಟ್‌ಗಳು ಎಲ್ಲರೂ ಹಫ್ತಾ ಸಲ್ಲಿಸಲೇಬೇಕು. ಈ ರೀತಿ ಸೀನನ ಹೆಸರಿನಲ್ಲಿ ಎತ್ತುವಳಿಯಾದ ದುಡ್ಡನ್ನೇ ಮೀಟರ್ ಬಡ್ಡಿಗೆ ಬಿಟ್ಟು ಒಂದಕ್ಕೆರಡು ಮಾಡಿಕೊಡುತ್ತಿದ್ದುದು ಒಂದಲ್ ರವಿ ಮತ್ತು ಕಿಚ್ಚರ ಜೋಡಿ.

ಜುಲೈ 25ರ ರಾತ್ರಿ ಅರಿಶಿನಕುಂಟೆ ಬಳಿ ಬೆಮೆಲ್ ಹತ್ಯೆ ನಡೆಯುವುದಕ್ಕೂ ತಿಂಗಳ ಮೊದಲೇ ಒಂದಲ್ ರವಿ ಕಾರ್ಯಾಚರಣೆಗಿಳಿದಿದ್ದ. ಮಾಕಳಿಯಿಂದಾಚೆಯ ಹಿಮಾಲಯ ಡ್ರಗ್ಸ್ ಎದುರಿಗಿರುವ ಸಂಜಯ್ ಖಾನ್ ರೆಸಾರ್ಟಿನ ಹಿಂದೆಯೇ ಸೀನನ ತೋಟವಿದೆ. ಅಲ್ಲಿ ಎಲ್ಲೆಲ್ಲಿಂದಲೋ ಕರೆತಂದಿದ್ದ ಹುಡುಗರನ್ನು ರವಿ ಜಮಾಯಿಸಿಕೊಂಡ. ಅದೇ ಹೊತ್ತಿಗೆ ಹ್ಯಾಡಾಳು ದೇವಿಯ ಮಗ ಹರ್ಷನಿಗೆ ಸೀನನಿಂದ ಮೆಸೇಜು ಬಂದಿತ್ತು, ವೆಪನ್ಸ್‌ಗೆ ದುಡ್ಡು ಬೇಕು. ಬರೋಬ್ಬರಿ 25 ಲಕ್ಷ ಎತ್ತಿಕೊಂಡು ಶಿವಮೊಗ್ಗದ ಸಾಗರ ಸಮೀಪದ ಸಿಗಂದೂರು ಬಳಿಯ ತೋಟವೊಂದಕ್ಕೆ ತಲುಪಿಸುವಂತೆ ಸೀನ ಆದೇಶ ಕೊಟ್ಟಿದ್ದ. ಬಹುಶಃ ಕಮ್ಮರಡಿ ಹನೀಫನ ತಮ್ಮ ಹಮ್ಜಾನ ಹಂತಕ ಪಡೆ ಅಲ್ಲಿ ಅಣಿಯಾಗಿತ್ತೇನೊ, ಹ್ಯಾಡಾಳು ಹರ್ಷ ಲಕ್ಷಗಟ್ಟಲೇ ದುಡ್ಡೆತ್ತಿಕೊಂಡು ಶಿವಮೊಗ್ಗದತ್ತ ಪ್ರಯಾಣ ಬೆಳೆಸಿದ್ದಾನೆಂಬ ಮಾಹಿತಿ ಪೊಲೀಸರಿಗಿತ್ತು. ಅದು ಬೆಮೆಲ್ ಕಿವಿಗೂ ಬಿದ್ದಿರಬೇಕು.

ಇದು ಬೆಮೆಲ್ ಹತ್ಯೆಗೂ 15 ದಿನದ ಮೊದಲಿನ ಮಾಹಿತಿ. ಜುಲೈ 20ರ ಹೊತ್ತಿಗೆ ಸೀನನ ತೋಟದಲ್ಲಿ ಜಮೆಯಾದ ಹಂತಕರ ಸಂಖ್ಯೆ ನೂರನ್ನು ದಾಟಿತ್ತು. ಪ್ರತಿ ರಾತ್ರಿಯಾದರೆ ಗುಂಡು, ತುಂಡಿನ ಕೇಕೆ ಸೀನನ ತೋಟದಲ್ಲಿ ಕೇಳಿಬರುತ್ತಿತ್ತು. ಅದೇ ಹೊತ್ತಿಗೆ ಬೆಮೆಲ್ ಜೊತೆಗಿದ್ದ ಸಚ್ಚಿಯಿಂದ ಮಾಹಿತಿ ರವಾನೆಯಾಗುತ್ತಲೇ ಇತ್ತು. ಜುಲೈ 24ಕ್ಕೆ ಯಲಹಂಕ ಶಾಸಕ ವಿಶ್ವನಾಥ್‌ರ ಬರ್ತ್‌ಡೇ ಪಾರ್ಟಿಯಿದೆ. ಸಿಂಗನಾಯಕನಹಳ್ಳಿಯ ನಿತ್ಯೋತ್ಸವ ಕಲ್ಯಾಣಮಂಟಪದಲ್ಲಿ ನಡೆಯುವ ವಿಶ್ವನಾಥ್





ಬರ್ತ್‌ಡೆ ಪಾರ್ಟಿಗೆ ಬೆಮೆಲ್ ಬಂದೇ ಬರುತ್ತಾನೆ. ಅಲ್ಲೇ ಅಟ್ಯಾಕ್ ಮಾಡಿ ಮುಗಿಸಿಬಿಡುವುದು ಬಂಡೆ ಮಂಜನ ಉದ್ದೇಶವಾಗಿತ್ತು.

ಜುಲೈ 24ರಂದೇ ಬೆಮೆಲ್ ಹತ್ಯೆಯಾಗಬೇಕಿತ್ತು. ಒಂದಲ್ ರವಿ, ಸೋಲೂರು ಉಮೇಶ, ನೆಲಮಂಗಲದ ಅಭಿಷೇಕ್ ಸೇರಿದಂತೆ ನೂರೈವತ್ತಕ್ಕೂ ಅಧಿಕ ಮಂದಿ ಸೀನನ ತೋಟದಲ್ಲಿ ಜಮೆಯಾಗಿದ್ದರು. ಬಂಡೆ ಮಂಜನ ಹಾರ್ಡ್‌ಕೋರ್ ಗುಂಪು ಬಹುಶಃ ಸಂಜಯ್‌ಖಾನ್ ರೆಸಾರ್ಟಿನಲ್ಲಿ ತಂಗಿರಬೇಕು. ಆದರೆ ಯಡವಟ್ಟಾಗಿದ್ದು ಶಾಸಕ ವಿಶ್ವನಾಥ್ ಬರ್ತ್‌ಡೆ ಪಾರ್ಟಿಯಲ್ಲಿ. ಅಲ್ಲಿಗೆ ಬೆಮೆಲ್ ಬಂದು ಶಾಸಕ ವಿಶ್ವನಾಥ್‌ಗೆ ಭರ್ಜರಿ ಹಾರ ಹಾಕಿ ಶುಭ ಕೋರಿದ್ದರು. ಅವರ ಜೊತೆ ಸರಿಸುಮಾರು 50 ಮಂದಿಯ ಹಿಂಡೇ ಇತ್ತು. ಆದರೆ ಅಲ್ಲಿ ಸೈಲೆಂಟ್ ಸುನೀಲನ ಬಂಟ ಒಂಟೆ, ಪೀಸಿ ವಿಜಿ, ಉಮೇಶ, ನಾಗಶೆಟ್ಟಿಹಳ್ಳಿಯ ಬುಲೆಟ್ ಸತೀಶ ಇತ್ಯಾದಿ ಬೆಂಗಳೂರಿನ ಒಂದು ಡಜನ್ ರೌಡಿಗಳ ಪಟಾಲಮ್ಮೇ ಇತ್ತು.

ಯಲಹಂಕ ಶಾಸಕ ವಿಶ್ವನಾಥ್ ಹುಟ್ಟುಹಬ್ಬದ ಪಾರ್ಟಿಯಲ್ಲೇ ಅಟ್ಯಾಕ್ ಮಾಡಿದರೆ ಅವರ ಸರ್ಕಾರ ತಮ್ಮನ್ನು ಎನ್‌ಕೌಂಟರ್ ಮಾಡುವುದು ಗ್ಯಾರಂಟಿ. ಯಾವುದಕ್ಕೂ ಕಾಯೋಣ ಎಂದೇ ಬಂಡೆ ಮಂಜ ತಡೆದ. ಮಾಡಿದ ತಯಾರಿ, ಹಂತಕರ ಪಡೆ, ಹತ್ಯೆಗೆ ಬೇಕಾದ ಸರಂಜಾಮು ಎಲ್ಲ ಹಾಗೇ ಇತ್ತಲ್ಲ ಮಾರನೇ ದಿನಕ್ಕೆ ಮಾಡಿದರಾಯ್ತು ಎಂದು ಸೀನ ಆದೇಶಕೊಟ್ಟ. ಮರುದಿನವೇ ಜುಲೈ 25ರ ಕರಾಳ ಬುಧವಾರ ಸಂಜೆ ಆರರ ಹೊತ್ತಿಗೆ ಬೆಮೆಲ್ ಶೇಷಾದ್ರಿಪುರದ ಸಾಮ್ರಾಟ್‌ನಲ್ಲಿದ್ದಾನೆಂದು ಸಚ್ಚಿ ಮಾಹಿತಿ ಕೊಟ್ಟ. ಹೇಗೂ ಭಿನ್ನಮಂಗಲಕ್ಕೆ ತಾನೇ ಬರುವುದು?

ಬೆಮೆಲ್ ಬೆಂಗಳೂರನ್ನು ದಾಟಿ ಒಂದೊಂದೇ ಚೆಕ್‌ಪೋಸ್ಟ್ ಹಾದು ಬರುತ್ತಿದ್ದಂತೆ ಚೆಕ್‌ಪೋಸ್ಟುಗಳಲ್ಲಿದ್ದ ಸೀನನ ಹುಡುಗರಿಂದ ಮಾಹಿತಿ ಬರುತ್ತಿತ್ತು. ಅಂದ್ರಳ್ಳಿಯ ಮುನಿರಾಜು ಉರ್ಫ್ ಮಚ್ಚು ಮುನಿಯ, ಸುಂಕದಕಟ್ಟೆಯ ಗೋವಿಂದ, ಅಂದ್ರಳ್ಳಿಯ ವಿಜಿ, ಶಿವ, ಆನಂದ, ಮತ್ತೊಬ್ಬ ಮಾಗಡಿ ಶಿವಕುಮಾರ, ಬೆಳವಂಗಲದ ರವಿ ಮುಂತಾದ ಒಂದು ಡಜನ್ ಹುಡುಗರು ಕ್ಯಾಂಟರ್ ಗಾಡಿಯಲ್ಲಿ ಹಾಲೋಬ್ಲಾಕ್ಸ್ ಸಾಗಿಸುತ್ತಿದ್ದವರಂತೆ ಅರಿಶಿನಕುಂಟೆಯ ಸರ್ವೀಸ್ ರಸ್ತೆಯಲ್ಲಿ ಹೊಂಚಿ ಕುಳಿತಿದ್ದರು. ಮತ್ತೊಂದು ಟೀಟಿ ಗಾಡಿಯಲ್ಲಿ ಒಂದಲ್ ರವಿ, ಸೋಲೂರು ಉಮೇಶ, ನೆಲಮಂಗಲ ಅಭಿಷೇಕ್ ಮುಂತಾದ ಹತ್ತು ಮಂದಿಯ ಹಿಂಡಿತ್ತು, ಒಂದು ಕ್ವಾಲೀಸ್‌ನಲ್ಲಿ ಮಂಜನ ಹಾರ್ಡ್‌ಕೋರ್ ಗ್ಯಾಂಗ್ ಜೊತೆಗೆ ಮೂರು ರಿವಾಲ್ವರ್‌ಗಳು, ಇನ್ನೆರಡು ಕಾರುಗಳ ತುಂಬ ಹಮ್ಜಾನ ಕಿರಾತಕರು ಹೊಂಚಿ ಕುಳಿತಿರುವಂತೆಯೇ ಬೆಮೆಲ್ ಇದ್ದ ಕಾರು ಸಮೀಪಿಸಿತ್ತು.

ಅಷ್ಟೇ. ಐದೇ ನಿಮಿಷದಲ್ಲಿ ರಕ್ತದ ಕೋಡಿ ಹರಿದಿತ್ತು!


ದುರಂತವೆಂದರೆ ಯಾವತ್ತಿಗೂ ತನ್ನ ರಿವಾಲ್ವರನ್ನು ಜೊತೆಗೇ ಇಟ್ಟುಕೊಳ್ಳುತ್ತಿದ್ದ ಬೆಮೆಲ್ ಅವತ್ತು ಮಾತ್ರ ತನ್ನ ಇನ್ನೋವಾ ಗಾಡಿಯನ್ನು ಬಿಟ್ಟು ಪಜೆರೋ ಗಾಡಿಯಲ್ಲಿ ಕುಳಿತಿದ್ದ. ದಾಳಿ ನಡೆಯುತ್ತಿದ್ದಂತೆ ಜೊತೆಗಿದ್ದ ಗನ್‌ಮನ್ ಗುಂಡು ಹಾರಿಸಿ ಸೀನನ ಬಂಟ ಕೆಂಪಲಿಂಗನಹಳ್ಳಿ ದೇವನನ್ನು ನೆಲಕ್ಕೆ ಕೆಡವಿ ಬಿಟ್ಟ. ಆತನ ರೈಫಲ್‌ನ ಗುಂಡುಗಳೆಲ್ಲ ಖಾಲಿಯಾದವು. ಬಹುಶಃ ಅದೇ ಗಾಡಿಯಲ್ಲಿ ಅವಿತು ಕುಳಿತಿದ್ದರೆ ಬೆಮೆಲ್ ಬದುಕುತ್ತಿದ್ದರೇನೋ. ಯಾವತ್ತು ಮುಂದಿದ್ದ ಗಾಡಿಯಿಂದ ತಮ್ಮ ರಿವಾಲ್ವರ್ ಎತ್ತಿಕೊಳ್ಳುವುದಕ್ಕೆಂದು ಕೆಳಕ್ಕಿಳಿದು ಓಡತೊಡಗಿದರೋ ಮಂಜ, ಸೀನ, ಹರ್ಷ, ಕಮ್ಮರಡಿ ಗ್ಯಾಂಗ್ ಅಟಕಾಯಿಸಿದ್ದೇ ಯರ್‍ರಾಬಿರ್‍ರಿ ಕೊಚ್ಚಿ ಹಾಕಿತು. ಮುಗುಮ್ಮಾಗಿ ಹಿಂದೆ ಕೂತಿದ್ದ ಸಚ್ಚಿ ಅಲಿಯಾಸ್ ಸಚ್ಚಿದಾನಂದ ಮಾತ್ರ ನಾಟಕೀಯವಾಗಿ "ಅಯ್ಯೋ ಧಣಿ ಹೋಗಿಬಿಟ್ರು, ನಮ್ಮ ದೇವ್ರನ್ನ ಸಾಯಿಸಿಬಿಟ್ರು...!" ಎಂದು ಮಾರ್ಮಿಕವಾಗಿ ಎದೆಬಡಿದುಕೊಳ್ಳುತ್ತಿದ್ದ. ಸೀನನ ಬೇಟೆ ಮುಗಿದಿತ್ತು.

• ರಾ.ಸೋಮನಾಥ್



ಪೊಲೀಸ್ ಠಾಣೆಯೆದುರು ಭಗ್ನ ಅವಶೇಷಗಳು(ಕಾರುಗಳು)

ರಿಯಲ್ ಲೈಫ್‌ನಲ್ಲಿ ಕೂಡ ಹೀರೋಗಳು



ಡಾ.ರಾಜ್‌ಕುಮಾರ್ ಅವರ ಮಕ್ಕಳಾದ ಶಿವರಾಜ್ ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ರಿಯಲ್ ಲೈಫ್‌ನಲ್ಲಿ ಕೂಡ ಬೆಳ್ಳಿ ತೆರೆಯ ಹೀರೋಗಳಂತೆ ಕೆಲಸ ಮಾಡುತ್ತ ಜನರ ಪ್ರೀತಿಯನ್ನು ಸಂಪಾದಿಸುತ್ತ ಒಂದು ಹೊಸ ಭಾಷ್ಯ ಬರೆಯಲು ಹೊರಟಿದ್ದಾರೆ. ಶಿವಣ್ಣ ಮತ್ತು ಪುನೀತ್ ತಾವು ಜನರಿಂದ ದೂರ ಇರುವ ಮನುಷ್ಯರಲ್ಲ, ಬದಲಾಗಿ ತಮ್ಮಲ್ಲೂ ಮಾನವೀಯತೆ ಮತ್ತು ಜನರ ಸಂಕಷ್ಟಗಳಿಗೆ ಸ್ಪಂದಿಸುವ ಸೂಕ್ಷ್ಮತೆ ಇದೆ ಎಂಬುದನ್ನು ತಮ್ಮ ವರ್ತನೆಯಿಂದ ಸ್ಪಷ್ಟಪಡಿಸಿದ್ದಾರೆ.


ಇತ್ತೀಚೆಗೆ ಓರ್ವ ಹುಡುಗಿ ಒಂದು ಎಸ್ಸೆಮ್ಮೆಸ್ ಕಳುಹಿಸಿದ್ದಳು. ಅದರಲ್ಲಿ ಆಕೆ "ನನ್ನ ಹೆಸರು ಜ್ಯೋತಿ. ನನ್ನೂರು ಕನಕಪುರ. ನಾನು ನನ್ನ ಕಾಲೇಜಿನ ಶುಲ್ಕವನ್ನು ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಕಟ್ಟಬೇಕಾಗಿದೆ. ದಯವಿಟ್ಟು 1 ಲಕ್ಷದ 8 ಸಾವಿರ ರೂ. ಡಿ.ಡಿ.ಯನ್ನು 'ದಿ ಪ್ರಿನ್ಸಿಪಲ್, ಎ.ಪಿ.ಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು' ಇದರ ಹೆಸರಿನಲ್ಲಿ ತೆಗೆದು ನನಗೆ ಕಳುಹಿಸಿಕೊಡುತ್ತೀರಾ?" ಎಂದು ಮನವಿ ಮಾಡಿಕೊಂಡಿದ್ದಳು.

ಅಂದಹಾಗೆ ಈ ಜ್ಯೋತಿ ಸುವರ್ಣ ಚಾನಲ್‌ನಲ್ಲಿ ಮೊನ್ನೆ ತನಕ ಪ್ರಸಾರವಾಗುತ್ತಿದ್ದ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಳು. ಆ ಕಾರ್ಯಕ್ರಮದಲ್ಲಿ ತಾನು ಕಾಲೇಜಿಗೆ ಕಟ್ಟಬೇಕಿದ್ದಷ್ಟು ಶುಲ್ಕವನ್ನು ಗೆಲ್ಲುವ ಕನಸನ್ನು ಕಂಡಿದ್ದಳು. ಆದರೆ ದುರದೃಷ್ಟವಶಾತ್ ಆಕೆ ಆ ಸ್ಪರ್ಧೆಯಲ್ಲಿ ಸೋತು ಮನೆಗೆ ಹಿಂದಿರುಗಿದ್ದಳು. ಹಾಗೆ ಹೋದವಳು ಪುನೀತ್ ಅವರ ಆಪ್ತ ಸಹಾಯಕರಿಗೆ ಮೇಲಿನ ಎಸ್‌ಎಂಎಸ್ ಮೆಸೇಜ್ ಅನ್ನು ರವಾನಿಸಿದ್ದಳು. ಈ ಬಗ್ಗೆ ಗೊತ್ತಾಗುತ್ತಿದ್ದಂತೆ ಪುನೀತ್ ಆ ಸಂಪೂರ್ಣ ಹಣವನ್ನು ಡಿ.ಡಿ. ಮೂಲಕ ಜ್ಯೋತಿಯ ಕಾಲೇಜ್‌ಗೆ ಕಳುಹಿಸಿದರು!

ಹೀಗೆ ಪುನೀತ್ ನಡೆಸಿಕೊಟ್ಟ 'ಕೋಟ್ಯಾಧಿಪತಿ' ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದ ಸ್ಪರ್ಧಾರ್ಥಿಗಳ ನೋವು ಮತ್ತು ದುಃಖಕ್ಕೆ ತೆರೆಮರೆಯಲ್ಲಿ ಸ್ಪಂದಿಸಿದ ಅನೇಕ ಉದಾಹರಣೆಗಳಿವೆ. ಪುನೀತ್ ಈ ರೀತಿ 25ಕ್ಕೂ ಹೆಚ್ಚು ಮಂದಿಗೆ ಸಹಾಯ ಮಾಡಿದ್ದಾರೆ. ಆದರೆ ತಾವು ಸಹಾಯ ಮಾಡಿದವರ ಹೆಸರನ್ನಾಗಲಿ, ಸಂಖ್ಯೆಯನ್ನಾಗಲಿ ಅವರು ಬಹಿರಂಗಪಡಿಸಲು ಇಚ್ಛಿಸದೇ ತಮ್ಮ ಅಳಿಲುಸೇವೆಯನ್ನು ಮುಂದುವರೆಸುತ್ತಿದ್ದಾರೆ.

ಈ ವಿಷಯ ಎಷ್ಟು ಗೌಪ್ಯವಾಗಿತ್ತೆಂದರೆ ಈ ಕಾರ್ಯಕ್ರಮವನ್ನು ನಡೆಸುತ್ತಿದ್ದ ಸುವರ್ಣ ಚಾನಲ್‌ನ ಮುಖ್ಯಸ್ಥರಾದ ಅನುಪ್ ಅವರಿಗೂ ಪುನೀತ್ ಅವರಿಗೂ ಸ್ಪರ್ಧಾರ್ಥಿಗಳು ಪತ್ರ ಬರೆದು ಥ್ಯಾಂಕ್ಸ್ ಹೇಳಿದ ನಂತರವೇ ಗೊತ್ತಾಗಿದ್ದು. ಅಷ್ಟೇ ಯಾಕೆ, 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದ ಸ್ಕ್ರಿಪ್ಟನ್ನು ಬರೆಯುತ್ತಿದ್ದ 'ಮಠ' ಖ್ಯಾತಿಯ ನಿರ್ದೇಶಕ ಗುರುಪ್ರಸಾದ್ ಅವರಿಗೂ ಇದರ ಬಗ್ಗೆ ಗೊತ್ತೇ ಇರಲಿಲ್ಲ, ಪುನೀತ್ ಅವರ ಕುಟುಂಬ ಮತ್ತು ಒಂದಿಬ್ಬರು ಆಪ್ತ ಸಹಾಯಕರಿಗೆ ಮಾತ್ರ ಪುನೀತ್ ಈ ರೀತಿ ಸ್ಪರ್ಧಾರ್ಥಿಗಳ ನೋವಿಗೆ ಸ್ಪಂದಿಸುತ್ತಿರುವುದು ಗೊತ್ತಿತ್ತು, ಇಂತಹ ವಿಷಯಕ್ಕೆ ಪ್ರಚಾರ ಪಡೆಯಲು ಇಷ್ಟಪಡದ ಪುನೀತ್ 'ಯಾವುದೇ ಕಾರಣಕ್ಕೂ ಇದನ್ನು ಬಹಿರಂಗಪಡಿಸಬಾರದು' ಎಂದು ಅಭ್ಯರ್ಥಿಗಳಿಗೂ ಹೇಳುತ್ತಿದ್ದರಂತೆ.

ವಿಶೇಷವೆಂದರೆ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವಾಗ ಪುನೀತ್ ಎಲ್ಲೂ ನೇರವಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ, ಬದಲಾಗಿ ಎಲ್ಲ ಕೆಲಸವನ್ನು ಅವರ ಸಹಾಯಕರೇ ನಿಂತು ಮಾಡುತ್ತಿದ್ದರು. ಹೀಗೆ ಸಹಾಯ ಪಡೆದ ಒಬ್ಬ



ಅಭ್ಯರ್ಥಿ ಪುನೀತ್ ಅವರನ್ನು ಮಾತನಾಡಿಸಬೇಕೆಂದು ಪರಿಪರಿಯಾಗಿ ಬೇಡಿಕೊಂಡು ಕಳುಹಿಸಿರುವ ಒಂದು ಎಸ್‌ಎಂಎಸ್ ಸಂದೇಶ ಹೀಗಿದೆ:

"ಒಂದು ರೂಪಾಯಿಯನ್ನೂ ಯಾರೂ ಯಾರಿಗೂ ಸಹಾಯ ಮಾಡದ ಈ ಕಾಲದಲ್ಲಿ ಯಾವ ಪ್ರಚಾರವಿಲ್ಲದೇ ನಮ್ಮಂಥ ಬಡವರಿಗೆ 25,000 ರೂ. ಸಹಾಯ ಮಾಡಿದ ಆ ನನ್ನ ದೇವರು, ಬಡವರ ದೇವರು ಆದ ಪುನೀತ್‌ರ ಜೊತೆ ಮಾತಾಡುವ ಆಸೆಯಿದೆ. ಐದು ನಿಮಿಷವಾದರೂ ಮಾತನಾಡಿಸಿ. ದಯವಿಟ್ಟು .. ದಯವಿಟ್ಟು .. ದಯವಿಟ್ಟು."

ಪುನೀತ್‌ರಿಂದ ಸಹಾಯ ಪಡೆದ ಈ ಅಭ್ಯರ್ಥಿಗೆ ಇನ್ನೂ ಪುನೀತ್‌ರೊಂದಿಗೆ ಮಾತನಾಡಲು ಅವಕಾಶ ಸಿಕ್ಕಿಲ್ಲ, ಆತನಿಗೇನೋ ಫೋನ್‌ನಲ್ಲಿ ನೇರವಾಗಿ ಪುನೀತ್‌ಗೆ ಥ್ಯಾಂಕ್ಸ್ ಹೇಳುವ ತವಕ. ಆದರೆ ಪುನೀತ್‌ಗೆ ಇಂತಹದ್ದರ ಬಗ್ಗೆ ಇಷ್ಟ ಇಲ್ಲವೇ ಇಲ್ಲ.

ಪುನೀತ್ ಮತ್ತು ಶಿವಣ್ಣ, ತಮ್ಮ ನೋವನ್ನು ತೋಡಿಕೊಂಡು ಬಂದವರಲ್ಲಿ ಕೆಲವರಿಗೆ ಸಾಂತ್ವನ ಹೇಳುತ್ತ, ಕೆಲವರಿಗೆ ಸಹಾಯ ಮಾಡುತ್ತ, ಇನ್ನು ಕೆಲವರಿಗೆ ಮಾರ್ಗದರ್ಶನ ನೀಡುತ್ತ ತಮ್ಮದೇ ಆದ ರೀತಿಯಲ್ಲಿ ಸಮಾಜಸೇವೆ ಮಾಡುತ್ತಿದ್ದಾರೆ. ಈ ಸಹೃದಯತೆ, ಸರಳತೆ, ನೋವಿಗೆ ಸ್ಪಂದಿಸುವ ಸದ್ಗುಣವನ್ನು ಕನ್ನಡ ಚಿತ್ರರಂಗದ ಎಲ್ಲರೂ ಮೈಗೂಡಿಸಿಕೊಂಡರೆ ನಿಜಕ್ಕೂ ಚಿತ್ರರಂಗ ಮತ್ತು ಜನರ ನಡುವಿನ ಅಂತರ ಕಡಿಮೆಯಾಗುತ್ತದೆ. ಕಲಾವಿದರು ಈ ರೀತಿ ಸಮಾಜದ ದೀನರ ನೋವು-ನಲಿವುಗಳಿಗೆ ಸ್ಪಂದಿಸುವುದು ಒಂದು ರೀತಿಯಲ್ಲಿ ಅವರ ಸಾಮಾಜಿಕ ಜವಾಬ್ದಾರಿಯೂ ಹೌದು. ಇಂತಹ ಜವಾಬ್ದಾರಿಗೆ ಒಂದು ಮುನ್ನುಡಿಯನ್ನು ಬರೆದ ರಾಜ್ ಮಕ್ಕಳಿಗೆ ಭೇಷ್ ಎನ್ನೋಣ.

ಅದೇ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಂಧ ಬಾಲಕ ಮಲ್ಲಿಕಾರ್ಜುನ್‌ಗೆ ಪುನೀತ್ ಕಿರುತೆರೆಯ ಮೇಲೆ ಪ್ರೀತಿಯ ಸುರಿಮಳೆಯನ್ನೇ ಸುರಿದಿದ್ದರು. ಆ ಪುಟ್ಟ ಅಂಧ ಬಾಲಕ ಮಲ್ಲಿಕಾರ್ಜುನ್‌ರವರನ್ನು ಪುನೀತ್ ಮಾತನಾಡಿಸಿದ ರೀತಿಯೇ ಮನಮುಟ್ಟುವಂತಿತ್ತು. ಅಷ್ಟೇ ಅಲ್ಲ, ಆತನಿಗೆ ಇಷ್ಟವಾಗಿದ್ದ ತಬಲಾವನ್ನು ಸೆಟ್‌ನಲ್ಲೇ ಕೊಡಿಸಿದರು. "ಮಲ್ಲಿ... ಈ ತಬಲಾ ನಿಮಗೇ ಸಾರ್" ಎಂದು ಪುನೀತ್ ಹೇಳಿದಾಗ ಆ ಬಾಲಕನ




ಮುಖದಲ್ಲಿ ಮೂಡಿದ ಹರ್ಷವನ್ನು ನೋಡಿದವರು ಎಂದೂ ಮರೆಯುವುದಿಲ್ಲ, ಸಮಾರಂಭದ ಕೊನೆಯಲ್ಲಿ ಆತನಿಗೆ ಇಷ್ಟವಾದ ಒಂದು ರೇಡಿಯೋವನ್ನೂ ಪುನೀತ್ ಆತನಿಗೆ ತರಿಸಿಕೊಟ್ಟಿದ್ದರು.

ಒಂದು ಅಂದಾಜಿನ ಪ್ರಕಾರ 'ಕೋಟ್ಯಾಧಿಪತಿ' ಸ್ಪರ್ಧೆಗೆ ಬಂದಿದ್ದ ಹಲವಾರು ಜನರಿಗೆ ಪುನೀತ್ ಒಟ್ಟು 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರಂತೆ. ಅಂದರೆ, ಬೆಳ್ಳಿ ಪರದೆಯ ಮೇಲೆ ರಾರಾಜಿಸುತ್ತಿದ್ದ ಪುನೀತ್ ಅವರಿಗೆ ಸುವರ್ಣ ಚಾನಲ್ ನಡೆಸಿಕೊಟ್ಟ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮ ನಿಜಕ್ಕೂ ಒಂದು ರೀತಿಯಲ್ಲಿ ಪ್ರೇಕ್ಷಕರ ದುಃಖದುಮ್ಮಾನಗಳಿಗೆ ಸ್ಪಂದಿಸುವ ವೇದಿಕೆಯಾಯಿತು.

ಕೋಟ್ಯಾಧಿಪತಿ ಸ್ಪರ್ಧೆಯಲ್ಲಿ ಗೆದ್ದು ತಮ್ಮ ಆರ್ಥಿಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಎಂಬ ಆಸೆಯಿಂದ ಬಂದಿದ್ದವರು ಸ್ಪರ್ಧೆಯಲ್ಲಿ ಸೋತಾಗ ಆಕಾಶವೇ ಕುಸಿದುಬಿದ್ದಂತೆ ಮೂಲೆಯಲ್ಲಿ ಕುಳಿತುಕೊಂಡದ್ದೂ ಉಂಟು. ಅಂತಹ ನೊಂದ ಜೀವಗಳನ್ನು ಗುರುತಿಸಿ, ಅವರ ಸಮಸ್ಯೆಯನ್ನು ಅರಿತು ಪುನೀತ್ ಸಲಹೆಯಂತೆ ಅವರ ಆಪ್ತ ಸಹಾಯಕರು ಯಾರಿಗೂ ತಿಳಿಯದಂತೆ ಅವರಿಗೆ ಹಣ ನೀಡಿ ಸಮಾಧಾನ ಮಾಡಿದ್ದೂ ಉಂಟು.

'ಹಳ್ಳಿ ಹೈದ ಪ್ಯಾಟೆಗೆ ಬಂದ' ಎಂಬ ರಿಯಾಲಿಟಿ ಶೋನಲ್ಲಿ ಮೊದಲ ಪ್ರಶಸ್ತಿಯನ್ನು ಗೆದ್ದಿದ್ದ ರಾಜೇಶ್ ಎಂಬ ಕಾಡು ಕುರುಬ ಯುವಕ ಇತ್ತೀಚೆಗೆ ಮಾನಸಿಕವಾಗಿ ಅಸ್ವಸ್ಥಗೊಂಡು ಮೈಸೂರಿನ ಆಸ್ಪತ್ರೆಗೆ ದಾಖಲಾದನಲ್ಲಾ? ಈ ಸುದ್ದಿ ಗೊತ್ತಾಗುತ್ತಿದ್ದಂತೆ ಪುನೀತ್ ಬೆಂಗಳೂರಿನಿಂದ ಮೈಸೂರಿನ ಆಸ್ಪತ್ರೆಗೆ ಹೋಗಿ ರಾಜೇಶ್‌ನ ಆರೋಗ್ಯವನ್ನು ವಿಚಾರಿಸಿಕೊಂಡು ಅವನಿಗೊಂದಿಷ್ಟು ಸಹಾಯ ಮಾಡಿ ವಾಪಸ್ ಬಂದಿದ್ದರು.

ಬೆಳ್ಳಿ ಪರದೆಯ ಮೇಲಿನ ಒಬ್ಬ ಜನಪ್ರಿಯ ನಟ ಈ ರೀತಿ ಜನಸಾಮಾನ್ಯರ ನೋವಿಗೆ ಸ್ಪಂದಿಸಿ ಯಾವುದೇ ಪ್ರಚಾರದ ಅಬ್ಬರವಿಲ್ಲದೇ ತೆರೆಮರೆಯಲ್ಲಿ ಸಹಾಯ ಮಾಡಿದ್ದು ನಿಜಕ್ಕೂ ವಿಶೇಷ.



ಹಾಗೆ ನೋಡಿದರೆ, ಈ ರೀತಿ ನೊಂದವರಿಗೆ ಮ... ಬಡವರಿಗೆ ಸಹಾಯ ಮಾಡುವಲ್ಲಿ ರಾಜ್ ಸ... ಮತ್ತವರ ಮಕ್ಕಳು ಯಾವಾಗಲೂ ಇತರರಿಗಿ... ಒಂದು ಹೆಜ್ಜೆ ಮುಂದೆ ಎಂದರೆ ತಪ್ಪಾಗಲಾರದು...

ಕಳೆದ ಜುಲೈ 12ಕ್ಕೆ ಶಿವರಾಜ್‌ಕುಮಾ... ತಮ್ಮ 50ನೇ ವರ್ಷವನ್ನು ಪೂರೈಸಿದ... ಅವರ ಅಭಿಮಾನಿಗಳು ಅತ್ಯಂತ ಅದ್ದೂ...ಯಾಗಿ ನಗರದ ಅರಮನೆ ಮೈದಾನದ... ಕಾರ್ಯಕ್ರಮ ಮಾಡುವ ಯೋಜನೆಯ... ಹಮ್ಮಿಕೊಂಡಿದ್ದರು. ಆದರೆ ಅದನ್ನು ತೀವ್ರವಾ... ವಿರೋಧಿಸಿದ್ದು ಶಿವರಾಜ್‌ಕುಮಾರ್ ಮತ್ತು ಅ... ಪತ್ನಿ ಗೀತಾ.

"ಕಳೆದ ವರ್ಷವಷ್ಟೇ ನಾವು ಈ ರೀತಿ... ಹಾಡು, ಕುಣಿತದ ಸಂಭ್ರಮವನ್ನು ಮಾಡಿದ್ದೇ... ಮತ್ತೆ ಅದೇ ರೀತಿ ಮಾಡುವುದು ಚೆನ್ನಾಗಿ... ವುದಿಲ್ಲ, ಈಗ ಕರ್ನಾಟಕ ರಾಜ್ಯ ಅತ್ಯ... ಸಂಕಷ್ಟದ ಸಮಯವನ್ನು ಎದುರಿಸುತ್ತಿ... ರಾಜ್ಯದೆಲ್ಲೆಡೆ ಬರ ಇದೆ. ಇಂತಹ ಸಂದರ್ಭ...ದಲ್ಲಿ ನಾಲ್ಕು ಜನರಿಗೆ ಸಹಾಯವಾಗು... ಏನಾದರೂ ಕಾರ್ಯಕ್ರಮವನ್ನು ಮಾಡೋಣ..." ಎಂದು ಶಿವಣ್ಣ ದಂಪತಿಗಳು ಸೂಚಿಸಿದರು. ಆಗ ಅಲ್ಲೇ ಇದ್ದ ಪುನೀ... ಕೂಡಲೇ "ಶಿವಣ್ಣನ ಹುಟ್ಟುಹಬ್ಬಕ್ಕೆ ನಾನು 10 ಲಕ್ಷ ರೂ. ನೀಡುತ್ತೇನೆ. ಹಣದಲ್ಲಿ ಒಂದಿಷ್ಟು ಬಡವರಿಗೆ ಆಟೋಗಳನ್ನು ನೀಡಿ, ಕನ್ನಡ ಶಾಲೆಗ... ಸಹಾಯ ಮಾಡಿ" ಎಂದರಂತೆ.

ಶಿವಣ್ಣ, ಗೀತಾ ಮತ್ತು ಪುನೀತ್ ಅವರ ಆಶಯದಂತೆ ಆಗಸ್ಟ್... ರಂದು ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಬಡವ... 12 ಆಟೋ, ಮೂರು ಆ್ಯಂಬುಲೆನ್ಸ್, ಮುಖ್ಯಮಂತ್ರಿಗಳ ಬರ ಪರಿಹಾ... ನಿಧಿಗೆ 5 ಲಕ್ಷ ರೂ., ಹಲವು ಕನ್ನಡ ಶಾಲೆಗಳಿಗೆ ತಲಾ 1 ಲಕ್ಷ ರೂ... ಕೊಡಲು ನಿರ್ಧರಿಸಲಾಗಿದೆ. ಜೊತೆಗೆ ಶಿವಣ್ಣ ರಾಘವೇಂದ್ರ ಮತ್ತು ಪುನೀ... "ಈ ಕಾರ್ಯಕ್ರಮದ ಎಲ್ಲಾ ವೆಚ್ಚವನ್ನು ನಾವೇ ಭರಿಸುತ್ತೇವೆ. ಹುಟ್ಟುಹಬ್ಬಕ್ಕ... ಬೇರೆಯವರ ಬಳಿ ಹಣ ಕಲೆಕ್ಷನ್ ಮಾಡುವುದು ಬೇಡ" ಎಂದು ಹೇಳಿದ...

ಇಡೀ ಸಮಾರಂಭದ ವ್ಯವಸ್ಥೆಯನ್ನು ನಿರ್ದೇಶಕರ ಸಂಘದ ಅಧ್ಯಕ್ಷರ... ರಮೇಶ್ ಮತ್ತವರ ತಂಡ ವಹಿಸಿಕೊಂಡಿದೆ. ಅಭಿಮಾನಿ ಸಂಘ ಮ... ನಿರ್ದೇಶಕರ ಸಂಘ ಜೊತೆಯಾಗಿ ನಡೆಸುತ್ತಿರುವ ಈ ಕಾರ್ಯಕ್ರಮ ನಿಜ... ಶಿವಣ್ಣನ ಸಮಾಜಮುಖಿ ಕಾರ್ಯಕ್ರಮದ ಮೊದಲ ಹೆಜ್ಜೆಯಾಗುತ್ತದೆ.

ಇತ್ತೀಚೆಗೆ ಮಡಿವಾಳಪ್ಪ ಎಂಬ ಶಿವಣ್ಣನ ಅಭಿಮಾನಿಯೊಬ್ಬ 'ಜೋ... ಚಿತ್ರದ ಹಾಡನ್ನು ಕಿವಿಗೆ ಹಾಕಿಕೊಂಡು ಕೇಳುತ್ತ ಪೈಂಟಿಂಗ್ ಮಾಡುತ್ತಿದ್ದ... ಐದನೇ ಮಹಡಿಯಿಂದ ಕೆಳಗೆ ಬಿದ್ದು ಕಾಲು ಮುರಿದುಕೊಂಡು ಆ... ಸೇರಿದ್ದರು. ಶಿವಣ್ಣ ಹುಬ್ಬಳ್ಳಿಯ ಆಸ್ಪತ್ರೆಗೆ ಹೋಗಿ ಮಡಿವಾಳಪ್ಪನ ಆರೋ... ವಿಚಾರಿಸಿಕೊಂಡಿದ್ದು ಮಾತ್ರವಲ್ಲ, ಆತನ ಚಿಕಿತ್ಸೆಯ ವೆಚ್ಚವನ್ನೂ ಭರಿಸುವುದ... ಹೇಳಿದ್ದಾರೆ. ಜೊತೆಗೆ ಆತನ ಮಕ್ಕಳ ವಿದ್ಯಾಭ್ಯಾಸದ ಸಂಪೂರ್ಣ ಹೊಣೆಯ... ಸ್ವತಃ ತಾವೇ ನೋಡಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಕೆಲವು ವರ್ಷಗಳಿಂದ ಹಲವು ನಟನಟಿಯರು ವರ್ಷಕ್ಕೊಮ್ಮೆ ತ... ಹುಟ್ಟುಹಬ್ಬದ ಸಂದರ್ಭದಲ್ಲಿ ಆಸ್ಪತ್ರೆಗೋ, ಅನಾಥಾಶ್ರಮಕ್ಕೋ ಹೋ... ರೋಗಿಗಳಿಗೆ ಹಣ್ಣುಹಂಪಲು ನೀಡಿ, ಮಕ್ಕಳಿಗೆ ಬಟ್ಟೆ ನೀಡಿ, ಅವರೊಂ... ಫೋಟೋ ತೆಗೆಸಿಕೊಳ್ಳುವ ಮೂಲಕ ತಮ್ಮ ಹುಟ್ಟುಹಬ್ಬವನ್ನು ಆಚರಿಸ... ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ವರ್ಷಕ್ಕೊಮ್ಮೆ ಹೀಗೆ ದಾನ-ಧ... ಮಾಡುವ ಈ ತಾರೆಯರ ಕೃತಕತೆಯನ್ನು ಅನೇಕರು ಟೀಕಿಸಿದ್ದುಂಟು.



ರಾಜೇಶ್ ಜೊತೆ ಪುನೀತ್


ಆದರೆ ಪುನೀತ್ ಮತ್ತು ಶಿವಣ್ಣ ತಮ್ಮ ನೋವನ್ನು ತೋಡಿಕೊಂ... ಬಂದವರಲ್ಲಿ ಕೆಲವರಿಗೆ ಸಾಂತ್ವನ ಹೇಳುತ್ತ, ಕೆಲವರಿಗೆ ಸಹಾಯ ಮಾ... ಇನ್ನು ಕೆಲವರಿಗೆ ಮಾರ್ಗದರ್ಶನ ನೀಡುತ್ತ ತಮ್ಮದೇ ಆದ ರೀತಿ... ಸಮಾಜಸೇವೆ ಮಾಡುತ್ತಿದ್ದಾರೆ. ಈ ಸಹೃದಯತೆ, ಸರಳತೆ, ನೋವಿಗೆ ಸ್ಪಂದಿ... ಸದ್ಗುಣವನ್ನು ಕನ್ನಡ ಚಿತ್ರರಂಗದ ಎಲ್ಲರೂ ಮೈಗೂಡಿಸಿಕೊಂಡರೆ ನಿ... ಚಿತ್ರರಂಗ ಮತ್ತು ಜನರ ನಡುವಿನ ಅಂತರ ಕಡಿಮೆಯಾಗುತ್ತದೆ.

ಒಂದು ಮಾತಂತೂ ನಿಜ. ಕಲಾವಿದರು ಈ ರೀತಿ ಸಮಾಜದ ದಿ... ನೋವು-ನಲಿವುಗಳಿಗೆ ಸ್ಪಂದಿಸುವುದು ಒಂದು ರೀತಿಯಲ್ಲಿ ಅವರ ಸಾಮ... ಜವಾಬ್ದಾರಿಯೂ ಹೌದು. ಇಂತಹ ಜವಾಬ್ದಾರಿಗೆ ಒಂದು ಮುನ್ನುಡಿಯ... ಬರೆದ ರಾಜ್ ಮಕ್ಕಳಿಗೆ ಭೇಷ್ ಎನ್ನೋಣ.

> 'ನವೀನ್ ನ್ಯೂಸ್ ಯಾಕೆ ಮಾಡಬೇಕಿತ್ತು, ಅವನಿಗೆ ಅಕ್ಕ ತಂಗಿ ಇಲ್ವಾ? ಅವರಿಗೆ ಹೊಡೆಯಲ್ವ? ಅದನ್ನು ಟಿವಿಯಲ್ಲಿ ತೋರಿಸ್ತಾರಾ? ನೋಡ್ಕೋತೀನಿ ನಾನು ಅವನನ್ನು. ಅವನು ಮಂಗಳೂರಿನಲ್ಲಿ ತಾಲೀಬಾನ್ ಸಂಸ್ಕೃತಿ ಇದೆ ಎಂದು ಹೇಳಿದ. ಅಸ್ಸಾಂನ ಘಟನೆಗೆ ಈ ಘಟನೆಯನ್ನು ಹೋಲಿಸಿ ಲೈವ್ ಕೊಟ್ಟ. ಈ ಬಾರಿ ಅವನನ್ನು ಬಿಡುವುದಿಲ್ಲ, ಈ ಕೇಸ್‌ನಲ್ಲಿ ಅವನನ್ನು ಫಿಕ್ಸ್ ಮಾಡುತ್ತೇನೆ. ಅವನಿಗೆ ಎಷ್ಟು ಬೇಕಾದರೂ ಇನ್‌ಫ್ಲೂಯನ್ಸ್ ಇರಲಿ. ಫಿಕ್ಸ್ ಮಾಡುವುದು ಮಾಡೋದೆ" ಎಂದು ಸೀಮಂತ್ ಹೇಳಿದರು. "ಹೊಡೆದಿದ್ದು ದೊಡ್ಡ ವಿಷಯ ಅಲ್ಲ, ಅದನ್ನು ಚಿತ್ರೀಕರಿಸಿದ್ದು ಮಹಾಪರಾಧ" ಎಂಬುದಷ್ಟೇ ಪೊಲೀಸ್ ಆಯುಕ್ತ ...ಮಂತ್ ಕುಮಾರ್ ಸಿಂಗ್ ಅವರ ಮಾತಿನ ಅರ್ಥ ಎಂಬುದಂತೂ ಸ್ಪಷ್ಟ.

ಪತ್ರಕರ್ತನಾಗಿ ಕೋಮುವಾದಿಗಳ ಕ್ರೂರ ಮುಖ ಬಯಲು ಮಾಡಿದ್ದೇನೆ





ಜುಲೈ 28 ಸಂಜೆ 6.45 ರ ವೇಳೆ. ನನ್ನ ಸುದ್ದಿ ...ಲ ಯುವಕನೊಬ್ಬ ನನಗೆ ಕರೆ ಮಾಡಿದ. ಆತ ...ೀಲ್ ನಿವಾಸಿ. ಆತ ನನಗೆ ತಿಳಿಸಿದ್ದಿಷ್ಟು: "ನವೀನಣ್ಣ, ... ಪಡೀಲ್ ಜಂಕ್ಷನ್‌ನಲ್ಲಿ ಒಂದು ಟಿಂಬರ್ ಯಾರ್ಡ್ ...ಯಲ್ವ, ಅಲ್ಲಿ ಸುಮಾರು 30 ಮಂದಿ ಯುವಕರು ...ಕೊಂಡು ಮಾತನಾಡುತ್ತಿದ್ದರು. ಇನ್ಯಾರನ್ನೋ ಕರೆಯಲು ...ರಿಗೋ ಒತ್ತಾಯಿಸುತ್ತಿದ್ದರು. ಬೈಕುಗಳನ್ನು ರೆಡಿ ...ಕೊಳ್ಳಿ ಎನ್ನುತ್ತಿದ್ದರು. ಬಹುಶಃ ಅವರು ನಮ್ಮ ...ಲಿನ ಗುಡ್ಡೆಯಲ್ಲಿರುವ ಗೆಸ್ಟ್ ಹೌಸ್‌ನ ಮೇಲೆ ದಾಳಿ ...ಡಲು ಯೋಚಿಸುತ್ತಿದ್ದಾರೆ ಎನಿಸುತ್ತದೆ. ಬ್ಯಾರಿ ...ಡುಗರು, ಹಿಂದೂ ಹುಡುಗಿಯರು ಎಂದೆಲ್ಲಾ ...ತನಾಡುತ್ತಿದ್ದರು" ಎಂದ. "ಅವರು ಯಾವ ...ಟನೆಯವರು ಅಂತ ತಿಳ್ಕೋ ಮಾರಾಯ" ಎಂದೆ ... ಅವರು ಹಿಂದೂ ಸಂಘಟನೆಯವರು ಎಂಬುದಷ್ಟೇ ...ಗೆ ಖಚಿತವಾಗಿತ್ತೇ ವಿನಃ ನಿಖರವಾಗಿ ಯಾವ ...ಟನೆ ಎಂಬುದು ತಿಳಿಯಲಿಲ್ಲ.

ತಕ್ಷಣ ನನ್ನ ಮನಸ್ಸಿಗೆ ಬಂದ ಪ್ರಶ್ನೆ "ಈ ಮಾಹಿತಿಯನ್ನು ...ೀಸರಿಗೆ ನೀಡಬೇಕೇ ಬೇಡವೇ" ಎಂಬುದು. ದಾಳಿ ...ರು ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ಯಾಕಾಗಿ, ...ರ ಮೇಲೆ, ಯಾವ ಸಂಘಟನೆ, ಎಲ್ಲಿಗೆ ದಾಳಿ ...ಡುತ್ತಿದೆ ಎಂಬುದೂ ಗೊತ್ತಿಲ್ಲ. ತೀರಾ ಪ್ರಾಥಮಿಕ ...ಹಿತಿಯಷ್ಟೆ ನನಗೆ ತಿಳಿದಿತ್ತು. ಸಂಘಟನೆಯ ...ರ್ಯಕರ್ತರೇ ಫೋನಾಯಿಸಿದ್ದರೆ ಪೊಲೀಸರಿಗೆ ಮಾಹಿತಿ ...ಬಹುದಿತ್ತು. ನನ್ನ ಸುದ್ದಿಮೂಲ ಮಾಹಿತಿ ನೀಡಿದ್ದರಿಂದ ...ಸುದ್ದಿಯನ್ನು ಖಚಿತಪಡಿಸಿಕೊಂಡೇ ಪೊಲೀಸರಿಗೆ ...ಹಿತಿ ನೀಡೋಣ ಎಂದುಕೊಂಡು ನಾನು ಮತ್ತು ... ಕ್ಯಾಮರಾಮೆನ್ ಪಡೀಲ್ ಗುಡ್ಡೆಯ ಮೇಲಿರುವ ...ಹೌಸ್ ಕಡೆ ಬೈಕಿನಲ್ಲಿ ತೆರಳಿದೆವು.

...ಒಂದೈದು ನಿಮಿಷದಲ್ಲಿ ಪಡೀಲ್ ಗುಡ್ಡೆಯಲ್ಲಿರುವ ...ರ್ನಿಂಗ್ ಮಿಸ್ಟ್ ಎನ್ನುವ ಹೋಂ ಸ್ಟೇ ಅಥವಾ ... ಹೌಸ್ ಹೊರಭಾಗದಲ್ಲಿ ನಾನು ಮತ್ತು ನನ್ನ ...ರಾಮೆನ್ ಇದ್ದೆವು. ಆಗ ಅಲ್ಲಿ ಯಾವ ದಾಳಿಕೋರರೂ ...ಲ್ಲ. ಐದು ನಿಮಿಷ ಅಲ್ಲೇ ಕಾದು ನಿಂತೆವು. ಯಾರು, ...ಕಾಗಿ ಈ ಹೋಂ ಸ್ಟೇಗೆ ದಾಳಿ ಮಾಡಲು ಸಿದ್ಧತೆ ...ಡುತ್ತಿದ್ದಾರೆ ಎಂಬುದು ಗೊತ್ತೇ ಆಗಲಿಲ್ಲ. ಪಡೀಲ್ ...ಡ್ರಿಯಿಂದ ಅಂದಾಜು ಅರ್ಧ ಕಿಮಿ ರಸ್ತೆ ದಾರಿಯಲ್ಲಿ ...ಹೋಂ ಸ್ಟೇ ಇದೆ. ಇದರ ಸುತ್ತಲೂ ದೊಡ್ಡದಾದ ...ಂಪೌಂಡ್ ಇದೆ. ಒಂದೇ ಒಂದು ಗೇಟ್ ಇದೆ. ...ನಿಂದ 60 ಮೀಟರ್ ದೂರದಲ್ಲಿ ಹೋಂ ಸ್ಟೇ ಬಂಗಲೆ ... ನಾನು ಗೇಟ್ ಹತ್ತಿರ ನಿಂತು ಒಮ್ಮೆ ಇಡೀ ...ಗಲೆಯತ್ತ ಕಣ್ಣಾಡಿಸಿದೆ. ಅಲ್ಲಿ ದಾಳಿ ಮಾಡಲು ...ರಣವಾಗುವಂತಹ ಯಾವುದೇ ಆ್ಯಕ್ಟಿವಿಟೀಸ್ ನನಗೆ ...ಕಾಣಿಸಲಿಲ್ಲ. ಒಬ್ಬಳು ಹುಡುಗಿ ಹೊರಗೆ ಚೇರ್‌ನಲ್ಲಿ ...ಕುಳಿತಿದ್ದಳು. ಇನ್ನಿಬ್ಬರು ಹುಡುಗರು ಬಂಗಲೆಯ ...ಂದು ಮೂಲೆಯಲ್ಲಿ ನಿಂತುಕೊಂಡು ಮೊಬೈಲ್‌ನಲ್ಲಿ ...ನಾಡುತ್ತಿದ್ದರು. ಅವರು ಯಾವುದೇ ರೀತಿಯಲ್ಲೂ ...ನೂನುಬಾಹಿರ ಕೃತ್ಯದಲ್ಲಿ ತೊಡಗಿರಲಿಲ್ಲ. ದಾಳಿಕೋರರು ...ನಡೆಸುವ ಸನ್ನಿವೇಶ ಅಲ್ಲಿರಲಿಲ್ಲ. ಆದುದರಿಂದ ಆಗಲೂ ... ಪೊಲೀಸರಿಗೆ ಮಾಹಿತಿ ನೀಡಬೇಕು ಅನ್ನಿಸಲಿಲ್ಲ. ... ಮಾಹಿತಿ ತಪ್ಪಾದರೆ ಇಡೀ ಪೊಲೀಸ್ ಇಲಾಖೆಗೆ ... ಮಾಹಿತಿ ನೀಡಿದಂತಾಗುತ್ತದೆ. ಜೊತೆಗೆ ಹೋಂ ...ಸ್ಟೇಯಲ್ಲಿದ್ದವರಿಗೆ ವಿನಾಕಾರಣ ಪೊಲೀಸ್ ಕಿರುಕುಳ ...ಲು ನಾನು ಕಾರಣ ಆಗುತ್ತೇನೆ ಎಂಬ ಆತಂಕದಿಂದಲೇ ...ಹಿತಿ ನೀಡಲಿಲ್ಲ.

...ನಾನು ಈ ರೀತಿ ಯೋಚಿಸುತ್ತಿರುವಾಗಲೇ ಸುಮಾರು ...ಮತ್ತಕ್ಕೂ ಅಧಿಕ ಇದ್ದ ತಂಡವೊಂದು ಹೋಂ ಸ್ಟೇ ...ನತ್ತ ಬರುತ್ತಿತ್ತು. ನಾನು ತಕ್ಷಣ ಕುತೂಹಲದಿಂದ ... ಭಾಷೆಯಲ್ಲಿ "ಏನು ವಿಷಯ? ಏನಾಗ್ತಾ ಇದೆ ...?" ಎಂದು ಪ್ರಶ್ನಿಸಿದೆ. ತಕ್ಷಣ ಯುವಕನೊಬ್ಬ ...ರಿಗಳು ನಮ್ಮ ಹಿಂದೂ ಹುಡುಗಿಯರನ್ನು ಇಲ್ಲಿ ...ಕೊಂಡು ಬಂದಿದ್ದಾರೆ. ಅವರನ್ನು ಬಿಡಬಾರದು" ... ಅಷ್ಟರಲ್ಲಿ ಗುಂಪಿನಲ್ಲಿದ್ದ ಇನ್ನಿತರ ಯುವಕರು ...ಗೆ ಕುಳಿತಿದ್ದ ಹುಡುಗಿಯತ್ತ ಕೈ ತೋರಿಸಿ "ಅಲ್ಲಿ, ...ಇದ್ದಾಳೆ ಹುಡುಗಿ, ಅಗೋ ಹುಡುಗರು ಅಲ್ಲಿದ್ದಾರೆ"

ಎಂದು ಯುವಕ ಯುವತಿಯರತ್ತ ಓಡಿ ದಾಳಿಗೆ ಸಿದ್ಧರಾದರು. ತಕ್ಷಣ ದಾಳಿಯ ಬಗ್ಗೆ ಅರಿವಾದ ಆ ಯುವತಿ ತನ್ನನ್ನು ರಕ್ಷಣೆ ಮಾಡಿಕೊಳ್ಳಲು ಬಂಗಲೆಯ ಒಳ ಹೋದಳು ಮತ್ತು ಬಾಗಿಲು ಹಾಕಲು ಯತ್ನಿಸಿದಳು. ಆಗ ಸುಮಾರು 30 ರಷ್ಟಿದ್ದ ದಾಳಿಕೋರರು ಬಾಗಿಲನ್ನು ಬಲವಾಗಿ ದೂಡಿ ಬಾಗಿಲು ತೆರೆಯುವಲ್ಲಿ ಸಫಲರಾದರು.

ಈಗ ನನ್ನ ಪ್ರಜ್ಞೆ ನಿಜವಾಗಿಯೂ ಜಾಗೃತವಾಗಿತ್ತು. ತಕ್ಷಣ ನನ್ನ ಕಚೇರಿ ಮೊಬೈಲ್ 9972570044 ನಿಂದ ಮಂಗಳೂರು ಗ್ರಾಮಾಂತರ ಪೊಲೀಸ್ ನಿರೀಕ್ಷಕ ರವೀಶ್ ನಾಯಕ್‌ರ 9480805330 ಎಂಬ ಮೊಬೈಲ್ ಸಂಖ್ಯೆಗೆ ಕರೆ ಮಾಡಿದೆ. ಆಗ ಸುಮಾರು 7.15 ರ ಸಂಜೆ ಸಮಯ. ರವೀಶ್ ನಾಯಕ್ ನನ್ನ ಕರೆ ಸ್ವೀಕರಿಸಲೇ ಇಲ್ಲ.

ಇತ್ತ ಒಂದು ಕಡೆಯಿಂದ ದಾಳಿ ಪ್ರಾರಂಭವಾಗಿತ್ತು. ಇನ್ನೇನು ಆಗುತ್ತೋ ಎಂಬ ಆತಂಕದ ನಡುವೆಯೇ ಕಕ್ಕಾಬಿಕ್ಕಿಯಾದ ಹುಡುಗಿಯರು ಎಲ್ಲೆಲ್ಲೋ ಓಡಲು ಶುರುವಿಟ್ಟುಕೊಂಡಿದ್ದರು. ಪೊಲೀಸರಿಗೆ ಫೋನ್ ಮಾಡಿದರೆ ಕರೆ ಸ್ವೀಕರಿಸುತ್ತಿರಲಿಲ್ಲ. ಬೇರೆ ದಾರಿ ಕಾಣದೆ ಟಿವಿ 9 ವರದಿಗಾರನಾಗಿರುವ ನನ್ನ ಗೆಳೆಯ ರಾಜೇಶ್‌ರಾವ್ ಬಳಿ ಪೊಲೀಸರಿಗೆ ಫೋನ್ ಮಾಡುವಂತೆ ಹೇಳಿದೆ. ರಾಜೇಶ್ ರಾವ್ ತನ್ನ ಮೊಬೈಲ್‌ನಿಂದ ಇನ್ಸ್‌ಪೆಕ್ಟರ್ ರವೀಶ್ ನಾಯಕ್‌ಗೆ ಕರೆ ಮಾಡಿದರು. ಆಗಲೂ ರವೀಶ್ ನಾಯಕ್ ಕರೆ ಸ್ವೀಕರಿಸಲೇ ಇಲ್ಲ.

ನಾವು ಇನ್ಸ್‌ಪೆಕ್ಟರ್‌ಗೆ ಫೋನ್ ಕರೆ ಮಾಡುತ್ತಿರುವಾಗಲೇ ನಮ್ಮ ಕ್ಯಾಮರಾಮೆನ್ ದಾಳಿಕೋರರ ಹಿಂದೆಯೇ ಹೋಗಿ ತನ್ನ ಕರ್ತವ್ಯ ನಿರ್ವಹಿಸುತ್ತಿದ್ದ. ಆಗ ನಾನು ಮತ್ತು ನನ್ನ ಕ್ಯಾಮರಾಮೆನ್ ಮಾತ್ರ ಅಲ್ಲಿದ್ದೆವು. ಅಷ್ಟರಲ್ಲಿ ಸ್ಥಳೀಯ 'ಸಹಾಯ' ಎಂಬ ಕೇಬಲ್ ಚಾನೆಲ್‌ನ ಕ್ಯಾಮರಾಮೆನ್ ಶರಣ್ ಮತ್ತು ಫೋಟೋಗ್ರಾಫರ್ ವಿನಯ ಕೃಷ್ಣ ಅಲ್ಲಿಗೆ ಬಂದಿದ್ದರು.

ನಾನು ಎಲ್ಲವನ್ನೂ ಮೂಕಪ್ರೇಕ್ಷಕನಾಗಿ ನೋಡುತ್ತಿದ್ದೆ. ಏನೂ ಮಾಡಲಾಗದ ಅಪರಾಧಿ ಮನೋಭಾವ ನನ್ನಲ್ಲಿ ಮೂಡಿತ್ತು. ದಾಳಿಕೋರರಲ್ಲಿ ಶೇಕಡಾ 50ಕ್ಕೂ ಅಧಿಕ ಮಂದಿ ಮದ್ಯಪಾನ ಮಾಡಿದ್ದರು. ನಾನು ಹೇಳಿದರೂ ಕೇಳೋ ಸ್ಥಿತಿಯಲ್ಲಿ ಅವರಿರಲಿಲ್ಲ. ಈ ಜಗತ್ತಿನಲ್ಲಿ ಏನೇನೋ ಹಿಂಸೆಗಳು ನಡೆದಿರಬಹುದು. ಆದರೆ ನನ್ನ ಜೀವಮಾನದಲ್ಲಿ ಇಂತಹ ಹಿಂಸೆಯನ್ನು ನಾನೆಂದೂ ನೋಡಿರಲಿಲ್ಲ.

ನನ್ನ ಕ್ಯಾಮರಾಮೆನ್ ಎಲ್ಲೆಲ್ಲಿ ಹೊಡೆಯುತ್ತಿದ್ದರೋ ಅಲ್ಲೆಲ್ಲ ಓಡುತ್ತಿದ್ದ. ನಾನು ನೋಡುತ್ತಿದ್ದೆ ಮತ್ತು ಸಾಧ್ಯವಾದಷ್ಟೂ ಕಿರಿಚುತ್ತಿದ್ದೆ. "ಏ ಹುಡುಗಿಯರಿಗೆ ಹೊಡೀ ಬೇಡ್ರಿ" ಎಂತ ಬೊಬ್ಬೆ ಹೊಡೆಯುತ್ತಿದ್ದೆ. ನನ್ನ ಬೊಬ್ಬೆ ನನ್ನ ಕ್ಯಾಮರಾದಲ್ಲಿ ದಾಖಲಾಗಿದೆಯೇ ವಿನಃ ದಾಳಿಕೋರರ ಹೃದಯಕ್ಕೆ ತಟ್ಟಲೇ ಇಲ್ಲ. ಹಲ್ಲೆಗೆ ಒಳಗಾದ ಯುವಕರು ಗೋಗರೆಯುತ್ತಿದ್ದರು. "ಪ್ಲೀಸ್ ಬಿಟ್ಟುಬಿಡಿ. ನಾವು ಬರ್ತ್ ಡೇ ಪಾರ್ಟಿ ನಡೆಸುತ್ತಿದ್ದೇವೆ, ಪ್ಲೀಸ್" ಎಂದು ಅವರ ಕಾಲಿಗೆ ಬೀಳುತ್ತಿದ್ದರು. ಆದರೂ ಕ್ರೂರಿ ದಾಳಿಕೋರರ ಮನಸ್ಸು ಕರಗಲಿಲ್ಲ. ಇಷ್ಟೇ ಆಗಿದ್ದರೆ ನಾನು ಅದನ್ನೆಲ್ಲ ಮರೆತುಬಿಡುತ್ತಿದ್ದೆ. ಆದರೆ ಅದಾದನಂತರ ನನ್ನ ಕಣ್ಣ ಮುಂದೆ ನಡೆದದ್ದು ಭೀಭತ್ಸ ದೃಶ್ಯಗಳು.

ನಾಲ್ವರು ಹುಡುಗರಿಗೆ ದಾಳಿಕೋರರು ಬಡಿಯುತ್ತಿರುವ ದೃಶ್ಯ ನೋಡಿ ಶಾಕ್‌ಗೆ ಒಳಗಾದ ಯುವತಿಯರು ದಿಕ್ಕಾಪಾಲಾಗಿ ಓಡಲು ಶುರುವಿಟ್ಟುಕೊಂಡರು. ಬಂಗಲೆಯ ತುಂಬಾ ಓಡುತ್ತಿರುವ ಯುವತಿಯರ ಹಿಂದೆ ಒಂದಷ್ಟು ದಾಳಿಕೋರರ ಓಟ ನಡೆಯುತ್ತಿತ್ತು. ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಒಬ್ಬಳು ಹುಡುಗಿ ಒಂದನೇ ಮಹಡಿಯಿಂದ ಕೆಳಗೆ ಜಿಗಿದಳು. ಅವಳನ್ನು ಹಿಡಿದುಕೊಂಡ ಇಪ್ಪತ್ತಕ್ಕೂ ಅಧಿಕ ದಾಳಿಕೋರರು ಆಕೆಯ ವಸ್ತ್ರಗಳನ್ನು ಚೆಲ್ಲಾಪಿಲ್ಲಿ ಮಾಡಿದರು. ಆಕೆಯ ಕೆನ್ನೆಗೆ ಬಗಿದು, ಆಕೆಯನ್ನು ಗೋಡೆಗೆ ನೂಕಿದರು. ಅಷ್ಟರಲ್ಲಿ ಪಿಂಕ್‌ಡ್ರೆಸ್ ತೊಟ್ಟುಕೊಂಡಿದ್ದ ಹುಡುಗಿಯೊಬ್ಬಳು ಓಡಲು ಶುರುವಿಟ್ಟುಕೊಂಡಳು.

ಆಕೆಯನ್ನು ಹಿಡಿದ ಗೂಂಡಾ ದಾಳಿಕೋರರು ಅಕ್ಷರಶಃ ಆಕೆಯನ್ನು ಬೆತ್ತಲು ಮಾಡಿದರು. ಒಂದು ತುಂಡು ವಸ್ತ್ರ ಹೊರತುಪಡಿಸಿ ಆಕೆಯನ್ನು ವಿವಸ್ತ್ರ ಮಾಡಿದನಂತರ ಆಕೆಯ ಅಂಗಾಂಗಗಳ ಮೇಲೆ ಉದ್ದೇಶಪೂರ್ವಕವಾಗಿ ದಾಳಿ ಮಾಡಿದರು. ಇದು ನನ್ನನ್ನು ಅಕ್ಷರಶಃ ಅಧೀರನನ್ನಾಗಿಸಿದ ದೃಶ್ಯ. ಈ ರೀತಿಯ ದೃಶ್ಯವನ್ನು ನಾನು ನನ್ನ ಜೀವಮಾನದಲ್ಲಿ ನೋಡಿರಲಿಲ್ಲ. ಇವೆಲ್ಲವೂ ವಿಶುವಲ್ ಆಗದೇ ಇರುವಂತದ್ದು.

ನಮ್ಮ ಕ್ಯಾಮೆರಾದಲ್ಲಿ ಶೂಟ್ ಆಗಿದ್ದು ಅವತ್ತಿನ ದಾಳಿಯ ಸ್ವಲ್ಪವೇ ಸ್ವಲ್ಪ ಭಾಗ. ಆನಂತರ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಎಲ್ಲಾ ಹುಡುಗ ಹುಡುಗಿಯರನ್ನು ಒಂದೇ ಕೋಣೆಯಲ್ಲಿ ಹಾಕಿ ಚಿಲಕ ಹಾಕಿದರು. ಇವೆಲ್ಲವೂ ನಡೆದಿದ್ದು ಮಿಂಚಿನ ವೇಗದಲ್ಲಿ, ಹೆಚ್ಚೆಂದರೆ 15 ನಿಮಿಷದಲ್ಲಿ ಇವೆಲ್ಲವೂ ಮುಗಿದುಹೋಗಿತ್ತು.

ದಾಳಿಕೋರರ ಕಾರ್ಯಾಚರಣೆ ಮುಗಿದನಂತರ ಪೊಲೀಸ್ ಇನ್ಸ್‌ಪೆಕ್ಟರ್ ರವೀಶ್ ನಾಯಕ್, ಪೊಲೀಸ್ ಎಸ್ಸೈ ಮುನಿಕಂಠ ನೀಲಸ್ವಾಮಿ ಮತ್ತು ಪೊಲೀಸ್ ಪೇದೆಗಳು ಬಂದರು. ವಿಶೇಷ ಎಂದರೆ ಪೊಲೀಸರಿಗೆ ದಾಳಿಕೋರರ ಜೊತೆ ಮೊದಲೇ ಸಂಪರ್ಕ ಇದ್ದ ರೀತಿಯಲ್ಲಿ ಪೊಲೀಸರು ವರ್ತಿಸಿದರು. ಸುಮಾರು ಅರ್ಧ ಗಂಟೆಗಿಂತಲೂ ಹೆಚ್ಚುಕಾಲ ಪೊಲೀಸರು ದಾಳಿಕೋರರ ಜೊತೆ ಮಾತುಕತೆಯಲ್ಲಿ ತಲ್ಲೀನರಾದರು. ದಾಳಿಕೋರರನ್ನು ಬಂಧಿಸುವ ಬದಲು ಪೊಲೀಸರು ಅವರ ಜೊತೆ ಹರಟೆ ಹೊಡೆಯುತ್ತಿದ್ದದ್ದು ನನಗೆ ಆಶ್ಚರ್ಯ ಉಂಟುಮಾಡಿತು. ಇವೆಲ್ಲಾ ನಡೆಯುತ್ತಿರಬೇಕಾದರೆ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಯುವಕನೊಬ್ಬ ತಪ್ಪಿಸಿಕೊಳ್ಳಲು ಯತ್ನಿಸಿದ. ತಕ್ಷಣ ಪೊಲೀಸರು ಆ ಯುವಕನನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಪೊಲೀಸರ ವಶದಲ್ಲಿದ್ದ ಯುವಕನ ದಾಳಿಕೋರರು ಪೊಲೀಸರ ಸಮ್ಮುಖದಲ್ಲೇ ಮತ್ತೆ ಹಲ್ಲೆ ನಡೆಸಿದರು.

ಅಷ್ಟರಲ್ಲಿ ನಮ್ಮ ಇನ್ನಷ್ಟು ಕ್ಯಾಮರಾಮೆನ್‌ಗಳು ಬಂದರು. ನಾನು ನನ್ನ ಕ್ಯಾಮರಾಮೆನ್ ಜೊತೆ ಕಚೇರಿಗೆ ಬಂದು ಎಲ್ಲಾ ವಿಝುವಲ್ಸ್‌ಗಳನ್ನು ಬೆಂಗಳೂರು ಕಚೇರಿಗೆ ಅಪ್‌ಲಿಂಕ್ ಮಾಡಿದೆ. 7.45 ಕ್ಕೆ ವರದಿ ಪ್ರಕಟವಾಯಿತು. ವರದಿ ಪ್ರಕಟವಾದ ಕೆಲವೇ ನಿಮಿಷಗಳಲ್ಲಿ ನಮ್ಮ ಚಾನೆಲ್‌ನಲ್ಲಿ ಬರುತ್ತಿದ್ದ ಸುದ್ದಿ ಮತ್ತು ದೃಶ್ಯಗಳನ್ನು ರಾಷ್ಟ್ರೀಯ ವಾಹಿನಿಗಳು ಬಳಕೆ ಮಾಡಿಕೊಂಡು ಸುದ್ದಿ ಪ್ರಕಟಿಸಿದವು. ತಕ್ಷಣ ಇದೊಂದು ರಾಷ್ಟ್ರೀಯ ಸುದ್ದಿಯಾಗಿ ಮಾರ್ಪಾಡಾಯಿತು.

ಇದರಿಂದ ತೀವ್ರವಾಗಿ ಕೋಪಗೊಂಡ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ನನ್ನ ಗೆಳೆಯ ಟಿವಿ 9 ವರದಿಗಾರ ರಾಜೇಶ್ ರಾವ್‌ಗೆ ದೂರವಾಣಿ ಕರೆ ಮಾಡಿದರು. ರಾಜೇಶ್‌ಗೆ ಸೀಮಂತ್ ಕುಮಾರ್ ಸಿಂಗ್ ಕರೆ ಮಾಡಿದಾಗ ನಾನು ರಾಜೇಶ್ ಜೊತೆಗಿದ್ದೆ. ಸೀಮಂತ್ ಅವರ ಮಾತುಗಳನ್ನು ರಾಜೇಶ್ ಲೌಡ್‌ಸ್ಪೀಕರ್ ಇಟ್ಟು ನನಗೆ ಕೇಳಿಸಿದ. "ನವೀನ್ ನ್ಯೂಸ್ ಯಾಕೆ ಮಾಡಬೇಕಿತ್ತು, ಅವನಿಗೆ ಅಕ್ಕ ತಂಗಿ ಇಲ್ವಾ? ಅವರಿಗೆ ಹೊಡೆಯಲ್ವ? ಅದನ್ನು ಟಿವಿಯಲ್ಲಿ ತೋರಿಸ್ತಾರಾ? ನೋಡ್ಕೋತೀನಿ ನಾನು ಅವನನ್ನು. ಅವನು ಮಂಗಳೂರಿನಲ್ಲಿ ತಾಲೀಬಾನ್ ಸಂಸ್ಕೃತಿ ಇದೆ ಎಂದು ಹೇಳಿದ. ಅಸ್ಸಾಂನ ಘಟನೆಗೆ ಈ ಘಟನೆಯನ್ನು ಹೋಲಿಸಿ ಲೈವ್ ಕೊಟ್ಟ. ಈ ಬಾರಿ ಅವನನ್ನು ಬಿಡುವುದಿಲ್ಲ, ಈ ಕೇಸ್‌ನಲ್ಲಿ ಅವನನ್ನು ಫಿಕ್ಸ್ ಮಾಡುತ್ತೇನೆ. ಅವನಿಗೆ ಎಷ್ಟು ಬೇಕಾದರೂ ಇನ್‌ಫ್ಲೂಯನ್ಸ್ ಇರಲಿ. ಫಿಕ್ಸ್ ಮಾಡುವುದು ಮಾಡೋದೆ" ಎಂದು ಸೀಮಂತ್ ಹೇಳಿದರು. "ಹುಡುಗಿಯರಿಗೆ ಮತ್ತು ಹುಡುಗರಿಗೆ ಹೊಡೆದಿದ್ದು ದೊಡ್ಡ ವಿಷಯ ಅಲ್ಲ, ಅದನ್ನು ಚಿತ್ರೀಕರಿಸಿದ್ದು ಮಹಾಪರಾಧ" ಎಂಬುದಷ್ಟೇ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರ ಮಾತಿನ ಅರ್ಥ ಎಂಬುದಂತೂ ಸ್ಪಷ್ಟ.

ಇಂದು ಬೆಳಗ್ಗೆ ನನಗೆ ಇನ್ನೊಂದು ಶಾಕ್ ಕಾದಿತ್ತು, ನಾನು ಯಾರ ಪರವಾಗಿ ಸುದ್ದಿ ಮಾಡಿದ್ದೆನೋ ಅವರೇ ನನ್ನ ವಿರುದ್ಧ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ನನಗೆ ಸ್ಪಷ್ಟವಾಗಿ ಗೊತ್ತಿತ್ತು. ಹಲ್ಲೆಗೊಳಗಾದ ಯಾವುದೇ ಹುಡುಗಹುಡುಗಿ ಸ್ವ ಇಚ್ಛೆಯಿಂದ ನನ್ನ ವಿರುದ್ಧ ದೂರು ನೀಡಲು ಸಾಧ್ಯವಿಲ್ಲ. "ಪ್ಲೀಸ್ ಹೊಡೆಯಬೇಡಿ" ಎಂದು ನಾನು ಸಾಧ್ಯವಾದಷ್ಟು ಬೊಬ್ಬೆ ಹಾಕುತ್ತಿದ್ದದ್ದು ಹಲ್ಲೆಗೊಳಗಾದ ಯುವತಿಯರಿಗೆ ಗೊತ್ತಿತ್ತು ಅಂದುಕೊಳ್ಳುತ್ತೇನೆ. ಸಂಜೆಯಾದಾಗ ನನ್ನ ಡೌಟ್ ಕ್ಲೀಯರ್ ಆಯಿತು. ಮಾಧ್ಯಮದ ಜೊತೆ ಮಾತನಾಡಿದ ಹಲ್ಲೆಗೊಳಗಾದ ಯುವಕರು "ನಾವು ಮಾಧ್ಯಮ ಮಂದಿ ವಿರುದ್ಧ ದೂರು ನೀಡಿಲ್ಲ, ನಮಗೆ ಮಾಧ್ಯಮದವರು ಸಪೋರ್ಟ್ ಮಾಡಿದ್ದಾರೆ" ಎಂದರು.

ಅದೇನೇ ಇರಲಿ. ಮಂಗಳೂರು ಗ್ರಾಮಾಂತರ ಪೊಲೀಸರು ನನ್ನ ವಿರುದ್ಧ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪೊಲೀಸರು ನಾವು ಚಿತ್ರೀಕರಿಸಿದ ವಿಷ್ಯುಅಲ್ಸ್ ಆಧಾರದಲ್ಲೇ ಈವರೆಗೆ ಎಂಟು ಮಂದಿ ದಾಳಿಕೋರರನ್ನು ಬಂಧಿಸಿದ್ದಾರೆ. ನಾವು ಒಂದು ಆಕ್ಷೇಪಾರ್ಹ ಘಟನೆಯನ್ನು ಚಿತ್ರೀಕರಿಸಿ ಸುದ್ದಿ ಪ್ರಸಾರ ಮಾಡಿದ್ದೇವೆಯೇ ಹೊರತು ಆಕ್ಷೇಪಾರ್ಹ ದೃಶ್ಯವನ್ನಲ್ಲ ಎಂಬುದು ನನಗೆ ಸ್ಪಷ್ಟತೆ ಇದೆ. ಮಂಗಳೂರಿನಲ್ಲಿ ಜುಲೈ 28 ರಾತ್ರಿ ನಡೆದ ದಾಳಿ ಹೊಸದೇನೂ ಅಲ್ಲ. ಪ್ರತೀ ವಾರಕ್ಕೊಂದು ಇಂತಹ ಘಟನೆ ನಡೆಯುತ್ತದೆ. ಮುಸ್ಲಿಂ ಹುಡುಗ ಹಿಂದೂ ಹುಡುಗಿ ಒಟ್ಟಾಗಿದ್ದರೆ ಹಿಂದೂ ಮತೀಯವಾದಿಗಳು ಅವರಿಗೆ ಹಲ್ಲೆ ಮಾಡಿ ಮತೀಯವಾದಿಗಳೇ ಅವರನ್ನು ಠಾಣೆಗೆ ಕೊಂಡೊಯ್ದು ಪೊಲೀಸರ ವಶಕ್ಕೆ ನೀಡುತ್ತಾರೆ. ಪೊಲೀಸರು ಪ್ರೇಮಿ(ಗೆಳೆಯರು)ಗಳ ತಂದೆತಾಯಿಯನ್ನು ಕರೆಸಿ ಎಚ್ಚರಿಕೆ ನೀಡಿ ಕಳುಹಿಸುತ್ತಾರೆ. ನಾವು ಶೂಟಿಂಗ್ ಮಾಡದೇ ಇದ್ದರೆ ಇಲ್ಲೂ ಅಷ್ಟೇ ನಡೆಯುತ್ತಿತ್ತು. ನಮ್ಮ ಶೂಟಿಂಗ್‌ನಿಂದ ಕೋಮುವಾದಿಗಳ ಒಂದು ಕ್ರೂರ ಮುಖ ಬಯಲಾಗಿದೆ ಮತ್ತು ಎಂಟು ಮಂದಿ ಬಂಧಿತರಾಗುವಂತೆ ಮಾಡಿದೆ. ಯಾರು ಏನೇ ಅನ್ನಲಿ, ಯಾವ ಕೇಸೇ ಬೀಳಲಿ, ನಾನು ಪತ್ರಕರ್ತನಾಗಿ ಸಮಾಜಕ್ಕೆ ಏನೋ ನ್ಯಾಯ ನೀಡಿದ್ದೇನೆ ಅನ್ನಿಸುತ್ತಿದೆ. ಅಳುತ್ತಿರುವ ನನ್ನ ಮನಸ್ಸಿಗೆ ಸದ್ಯ ಅಂತಹ ಸಮಾಧಾನ ಸಾಕು.

ನನ್ನ ಮೇಲೆ ದೂರು ನೀಡಿರುವುದು ಮತ್ತು ನನ್ನ ವಿರುದ್ಧ ಎಫ್‌ಐಆರ್ ದಾಖಲಿಸಿರುವುದು ದೊಡ್ಡ ವಿಷಯವೇ ಅಲ್ಲ. ನನ್ನ ಮೇಲಿನ ಎಫ್‌ಐಆರ್‌ನಿಂದ ದಾಳಿಕೋರ ಕ್ರೂರಿ ಮೃಗಗಳಿಗೆ ಶಿಕ್ಷೆಯಾಗುವುದಾದರೆ ನನ್ನ ಮೇಲಿನ ಎಫ್‌ಐಆರನ್ನು ನಾನು ಖುಷಿ ಪಡುತ್ತೇನೆ. ಯಾವುದಾದರೂ ಒತ್ತಡಕ್ಕೆ ಮಣಿದು ಆರೋಪದಿಂದ ನನ್ನನ್ನು ಬಿಡುಗಡೆ ಮಾಡುವಾಗ ಅಂತಹ ಬಿಡುಗಡೆಯಿಂದ ಆರೋಪಿ ದಾಳಿಕೋರರಿಗೆ ಲಾಭವಾಗುವುದಾದರೆ ಅಂತಹ ಬಿಡುಗಡೆ ನನಗೆ ಬೇಕಾಗಿಲ್ಲ. ನನ್ನ ಸಮ್ಮುಖದಲ್ಲೇ ನನ್ನ ಸಹೋದರಿಯರ ಮೇಲೆ ದಾಳಿ ನಡೆಸಿದ ದಾಳಿಕೋರರಿಗೆ ನ್ಯಾಯಾಲಯ ಅದೆಂತಹ ಶಿಕ್ಷೆ ನೀಡಿದರೂ ನ್ಯಾಯ ನೀಡಿದಂತಾಗುವುದಿಲ್ಲ. ಆದರೂ ಅವರಿಗೆ ಶಿಕ್ಷೆಯಾಗಬೇಕು.

****

ಇನ್ನಷ್ಟು ಬರೆಯಲು ಇದೆ. ಬರೆಯಲು ಸಮಯ ಸಾಕಾಗಿಲ್ಲ. ಯಾವುದೇ ವ್ಯಕ್ತಿ ಯಾ ಸಂಘಟನೆಗೆ ಈ ದಾಳಿ ವಿರುದ್ಧ ಹೋರಾಟ ಮಾಡುವುದಾದರೆ ಇನ್ನಷ್ಟು ಮಾಹಿತಿ ಬೇಕಾಗಿದ್ದಲ್ಲಿ ಅಥವಾ ಯಾವುದೇ ತನಿಖಾ ಸಂಸ್ಥೆಗೆ ಮಾಹಿತಿ ಬೇಕಾದ್ದಲ್ಲಿ ಯಾವುದೇ ಅವಧಿಯಲ್ಲಿ ನನ್ನನ್ನು ಸಂಪರ್ಕಿಸಬಹುದು.

● ನವೀನ್ ಸೂರಿಂಜೆ,

ಪತ್ರಕರ್ತ, ಕಸ್ತೂರಿ ನ್ಯೂಸ್ 24, ಮಂಗಳೂರು

ವೈದೇಹಿಯ ಮಡಿಲಿನಂತಹ ಮಂಗಳೂರೇ... ನಿನಗೇನಾಗಿದೆ?


ಚೆಡ್ಡಿ ಕಿರಾತಕರ ದಾಳಿ ಬಗ್ಗೆ ಮೂರು ವಿಶೇಷ ಲೇಖನಗಳು

2012ರ ಜುಲೈ 28ರ ಶನಿವಾರ ನಾನು ಟೀವಿಯನ್ನು ನೋಡಲಿಲ್ಲ, ಈ ನೆಮ್ಮದಿ ಮತ್ತು ಸ್ವಾಸ್ಥ್ಯ ಭಾನುವಾರದ ಪತ್ರಿಕೆಗಳನ್ನು ಓದಿದ ನಂತರ ಕದಡಿ ಹೋಯಿತು. ಈ ಬಗ್ಗೆ ಪ್ರತಿಭಟನೆಯನ್ನು ದಾಖಲಿಸುವ ಸಲುವಾಗಿ ಸಮಾನ ಮನಸ್ಕರ ತಂಡವು ಸೋಮವಾರ ಮಧ್ಯಾಹ್ನ ಹಾಸನದಲ್ಲಿ ಸಭೆ ಸೇರಿದ ನಂತರ ನಾನು ಇಂಟರ್‌ನೆಟ್‌ನಲ್ಲಿ ಆ ಘಟನೆಯನ್ನು ನೋಡಿದೆ. ಆ ದೃಶ್ಯಗಳನ್ನು ನೋಡಿದಾಗ ನನಗೆ ಉಂಟಾದ ಮಾನಸಿಕವಾದ ಆಘಾತವನ್ನು ವಿವರಿಸಲು ನನ್ನ ಬಳಿ ಪದಗಳೇ ಇಲ್ಲ ಎಂದು ಅನಿಸುತ್ತಿದ್ದಾಗಲೇ, ಈ ಘಟನೆಯ ಬಗ್ಗೆ ನನ್ನ ಅನಿಸಿಕೆಯನ್ನು ದಾಖಲಿಸಲೇಬೇಕು ಎಂಬ ತೀವ್ರತೆ ಕೂಡಾ ಹೆಚ್ಚಿದೆ.

ಪ್ರತಿಯೊಂದು ಪ್ರದೇಶಕ್ಕೆ ಭೌಗೋಳಿಕ ಮಿತಿ ಮತ್ತು ಜೈವಿಕ ವೈವಿಧ್ಯತೆ ಇರುವಂತೆ ಮಿಡಿಯುವ ಹೃದಯ ಹಾಗೂ ಮನಸ್ಸೂ ಇರುತ್ತದೆ. ಮಂಗಳೂರು ವಿದ್ಯಾವಂತರ, ಸುಸಂಸ್ಕೃತರ ಜಿಲ್ಲೆ ಎಂಬ ಅಭಿಪ್ರಾಯವಿತ್ತು, ಆದರೆ ಕ್ರಮೇಣ ಆರು ವರ್ಷಗಳವರೆಗಿನ ಹೆಣ್ಣು ಮಕ್ಕಳ ಜನನ ಪ್ರಮಾಣದಲ್ಲಿ ಉಂಟಾದ ಏರು-ಪೇರು, ಅಗಾಧ ವರದಕ್ಷಿಣೆಯ ಬೇಡಿಕೆ ಮತ್ತು ಅದರ ಪರಿಣಾಮವಾಗಿ ಮೂಡಿದ ಪರಿಸರವು ಮಂಗಳೂರಿನ ಮೆರುಗನ್ನು ಕುಗ್ಗಿಸಿದವು. ಇನ್ನು 2009ರಲ್ಲಿ ಪಬ್‌ನಲ್ಲಿ ಮಹಿಳೆಯರ ಮೇಲೆ ನಡೆದ ಶ್ರೀ ರಾಮಸೇನೆಯ ದಾಳಿಯು ಮಂಗಳೂರಿನ ಹೆಸರನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಚಿರಸ್ಥಾಯಿಯಾಗುವಂತೆ ಮಾಡಿತು. ಅದಕ್ಕೆ ಪ್ರತಿಕ್ರಿಯೆಯಾಗಿ ಮೂಡಿಬಂದ 'ಪಿಂಕ್ ಚೆಡ್ಡಿ' ಪ್ರತಿಭಟನೆಯು ಪ್ರಮೋದ್ ಮುತಾಲಿಕನನ್ನು ರಾಜಕೀಯ ಅಂಚಿಗೆ ತಂದು ನಿಲ್ಲಿಸಿತು. ಅಷ್ಟೇ ಅಲ್ಲ, ಕರಾವಳಿ ತೀರದಿಂದ ತೇಲಿ ಬಂದಿರುವ ಮತ್ತು ಬರುತ್ತಿರುವ ಅಮಾನುಷವಾದ ಹಲ್ಲೆಗಳು, ಅಮಾನವೀಯ ಜನಾಂಗ ದ್ವೇಷದ ಹಿಂಸಾತ್ಮಕ ಘಟನೆಗಳು ಮಂಗಳೂರಿನ ಹಿರಿಮೆಗೆ ಗರಿಗಳನ್ನೇನೂ ಮೂಡಿಸಲಿಲ್ಲ.

ಮಂಗಳೂರು ಎಂದರೆ ನನಗೆ ವೈದೇಹಿ ನೆನಪಾಗುತ್ತಾರೆ. ಅವರ ಪ್ರೀತಿ ನನ್ನ ಅಂತಃಕರಣವನ್ನು ತಟ್ಟುತ್ತದೆ. 1988ನೇ ಇಸವಿಯಲ್ಲಿ ಲೇಖಕಿಯರ ಸಂಘದ ಕಾರ್ಯಕ್ರಮಕ್ಕೆ ನಾನು ಹೋದಾಗ ನನ್ನ ಮಗ ತಾಹೇರ್ ಆರು ತಿಂಗಳ ಮಗುವಾಗಿದ್ದ. ನಾನು ನನ್ನ ಭಾಷಣದ ಸಲುವಾಗಿ ವೇದಿಕೆಗೆ ಹೋದಾಗ ವೈದೇಹಿ ಅವನನ್ನು ಪ್ರೀತಿಯಿಂದ ತಮ್ಮ ಎದೆಗಾನಿಸಿ ಮಡಿಲಲ್ಲಿ ಆಶ್ರಯ ನೀಡಿದ್ದು ಇನ್ನೂ ನನ್ನ ಕಣ್ಣಿಗೆ ಕಟ್ಟಿದೆ. ಅಂತಹ ಮಹಾನ್ ಲೇಖಕಿಯ ಮಡಿಲ ಪ್ರಭಾವವೋ ಏನೋ ಅವನೂ ಕೂಡಾ (ಇಂಗ್ಲಿಷಿನಲ್ಲಿ) ಸೊಗಸಾಗಿ ಬರೆಯುತ್ತಾನೆ. ನಂತರ 2004ನೇ ಇಸವಿಯಲ್ಲಿ ನನಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಸಿಕ್ಕಿದಾಗ ಶಿವಮೊಗ್ಗದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು. ಅಲ್ಲಿ ವೈದೇಹಿ ಮತ್ತೆ ಅವನನ್ನು ನೋಡಿದಾಗ ಆತ ಆಳೆತ್ತರ ಬೆಳೆದಿದ್ದ. ಅವನ ಬೆನ್ನುತಟ್ಟಿ, ಕೈ ಹಿಡಿದು ವೈದೇಹಿ ವ್ಯಕ್ತಪಡಿಸಿದ ಸಂತೋಷ, ಅವರ ಪ್ರತಿಯೊಂದು ಭಾವದಲ್ಲಿಯೂ ವ್ಯಕ್ತವಾದ ವಾತ್ಸಲ್ಯವನ್ನು ಅವನು ಇಂದಿಗೂ ನೆನಪಿನಲ್ಲಿಟ್ಟಿದ್ದಾನೆ.

ವೈದೇಹಿಯ ಮಡಿಲಿನಂತಹ ಮಂಗಳೂರೇ... ಇಂದು ನಾನು ನಿನ್ನನ್ನು ಏನೆಂದು ಸಂಬೋಧಿಸಬೇಕು? ಘಟ್ಟ ದಾಟಿ ಯಾಕೆ ಇಂತಹ ಹಸಿಹಸಿ ರಕ್ತದ ವಾಸನೆ ಬರುತ್ತಿದೆ? ಯಾಕೆ ದ್ವೇಷದ ಅಗ್ನಿ ಕಾಡನ್ನು ದಾಟಿ ವ್ಯಾಪಿಸುತ್ತಿದೆ? ಯಾಕೆ ಕೀಚಕರು ಕಂಡುಬರುತ್ತಿದ್ದಾರೆ? ಯಾಕೆ ದ್ರೌಪದಿಯ ವಸ್ತ್ರಾಪಹರಣವಾಗುತ್ತಿದೆ? ಯಾಕೆ ಸೀತೆಯನ್ನು ಪದೇಪದೇ ಅಗ್ನಿಪರೀಕ್ಷೆಗೆ ಒಡ್ಡುತ್ತಿರುವೆ... ಓ ಮಂಗಳೂರೇ... ಏನಾಗಿದೆ



ನಿನಗೆ?

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನಗಳನ್ನು ರೂಪಿಸಲು ಶಾಸಕಾಂಗ, ತನಿಖೆಗಾಗಿ ಪೋಲೀಸ್ ಇಲಾಖೆ, ತನಿಖೆಯ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಿ ಸಂವಿಧಾನದ ಚೌಕಟ್ಟಿನಲ್ಲಿ ವಿಶ್ಲೇಷಿಸಿ ನ್ಯಾಯ ತೀರ್ಮಾನವನ್ನು ಮಾಡಲು ನ್ಯಾಯಾಂಗ, ಈ ನ್ಯಾಯವನ್ನು ಜಾರಿಗೊಳಿಸಲು ಒಂದು ಸೂಕ್ತ ವ್ಯವಸ್ಥೆ ಇದೆ. ಇದಲ್ಲದೆ ಪತ್ರಿಕಾರಂಗವನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗ ಎನ್ನುತ್ತೇವೆ. ಮಂಗಳೂರಿನಲ್ಲಿ ನಡೆದ ಘಟನೆಯನ್ನು ನಾನು ನೈತಿಕ ಪೋಲೀಸರಿಂದ ಆದದ್ದು ಎಂದು ಭಾವಿಸುವುದಿಲ್ಲ, ಬದಲಿಗೆ ಅನೈತಿಕ ಪೋಲೀಸರು ಎಂದು ನಾವು ಸಂಬೋಧಿಸಬಹುದಾದ ಕೆಲವು ಯುವಕರು ಕ್ಯಾಮೆರಾ ಕಣ್ಣೆದುರಿಗೆ ತಮ್ಮದೇ ಸ್ವಘೋಷಿತ ಶಾಸನಗಳನ್ನು ಹೇರುತ್ತಾ ತಮ್ಮನ್ನು ತಾವೇ ಪೋಲೀಸರೆಂದು ಪರಿಭಾವಿಸಿ, ಖಾಸಗಿತನದ ಮೇಲೆ ದಾಳಿಯನ್ನು ಮಾಡುತ್ತಾ ತಾವೇ ನ್ಯಾಯಾಧೀಶರಾಗಿ ತೀರ್ಮಾನಗಳನ್ನು ಕೊಡುತ್ತಾ ನಡೆಸಿದ ಕೃತ್ಯಗಳಿಗೆ ಯಾವ ಹೆಸರನ್ನು ಕೊಡಬೇಕು? ಹುಟ್ಟು ಹಬ್ಬದ ಪಾರ್ಟಿಯಲ್ಲಿ ಸಂತೋಷವನ್ನು ಹಂಚಿಕೊಳ್ಳುತ್ತಿದ್ದ ಯುವಕ, ಯುವತಿಯರಿಗೆ ಮತ್ತೆಂದೂ ಹುಟ್ಟುಹಬ್ಬ ಆಚರಿಸಿಕೊಳ್ಳದಂತಹ ಕರಾಳ ಗಾಯವನ್ನು ಮಾಡಿರುವ ಆ ಯುವಕರಿಗೆ ಯಾವ ಹೆಸರಿನಿಂದ ಕರೆಯಬೇಕು? ಇಷ್ಟೊಂದು ಅಮಾನವೀಯ ವಾಗಿ ಅವರ ಮನಸ್ಸುಗಳಲ್ಲಿ ವಿಕೃತಿಯನ್ನು ತುಂಬಿಸಿರುವ ವಿಷಯುಕ್ತ ವ್ಯವಸ್ಥೆಯನ್ನು ಹೇಗೆ ಶಿಥಿಲಗೊಳಿಸಬೇಕು? ಸಂಸ್ಕೃತಿಯ ಹೆಸರಿನಲ್ಲಿ ಸಂಸ್ಕೃತಿ ಹೀನತೆ, ಧರ್ಮದ ಹೆಸರಿನಲ್ಲಿ ಅಧರ್ಮವನ್ನು ಆಚರಿಸುವ ಕುಯುಕ್ತಿಯಿಂದ ಈ ಯುವಕರ ವ್ಯಕ್ತಿತ್ವವನ್ನು ನಿರ್ನಾಮ ಮಾಡಿರುವ, ದ್ವೇಷದ ಮೂಲಕ ಅಧಿಕಾರವನ್ನು ಗಳಿಸಬಹುದೆಂಬ ಭ್ರಮೆಯಲ್ಲಿರುವವರು ಆ ಮೂಲಕ ಮಂಗಳೂರಿನ ಹೆಸರನ್ನು ಯಾವ ಪಾತಾಳಕ್ಕೆ ಅದ್ದುತ್ತಿದ್ದಾರೆ ಎಂದು ಅವರಿಗೇ ಅರಿವಿಲ್ಲ. ಏನು ಮಾಡೋಣಾ. ಅಸಹಾಯಕತೆಯಿಂದ ಹೇಳೋಣವೇ "ಪ್ರಭು ಅವರೇನು ಮಾಡುತ್ತಿದ್ದಾರೆಂಬುದು ಅವರಿಗೆ ಅರಿವಿಲ್ಲ; ಅವರನ್ನು ಕ್ಷಮಿಸು" ಎಂದು ಪ್ರೀತಿಯ ಭಾಷೆಯನ್ನು ಬಳಸಿದಲ್ಲಿ ಅವರಿಗೆ ಅರ್ಥವಾಗುವುದೇ...?

ಅಸ್ತಿತ್ವ ರಾಜಕಾರಣದ ಭಾಗವಾಗಿ ಧಾರ್ಮಿಕ ಸಂಕೇತಗಳು ಧಾಳಾಗಿ ಹಬ್ಬುತ್ತಿದ್ದು ಮಾರಿಗೊಂದು ಗುಡಿ, ಪ್ರಾರ್ಥನಾ ಮಂದಿರಗಳು ಕಂಗೊಳಿಸುತ್ತಿವೆ. ಮಹಿಳೆಯ ಅಧೀನತೆ ಇದೇ ಅಸ್ತಿತ್ವ ರಾಜಕಾರಣದ ಮುಂದುವರೆದ ಭಾಗವಾಗಿದೆ. ಧಾರ್ಮಿಕ ನಾಯಕರ ಹಿಡಿತದಲ್ಲಿ ಜನಸಾಮಾನ್ಯರು ಉಸಿರುಗಟ್ಟುತ್ತಿದ್ದಾರೆ. ಆದರೆ ಧಾರ್ಮಿಕ ನಿರ್ಬಂಧಗಳು ಮಹಿಳೆಯರನ್ನು ಹೆಚ್ಚು-ಹೆಚ್ಚಿಗೆ ಅಧೀನತೆಯೆಡೆಗೆ ಒತ್ತರಿಸುತ್ತಿವೆ. ಖಾಪ್ ಪಂಚಾಯತಿಗಳು ತಮ್ಮ ಅವಮಾನವೀಯ ಆದೇಶಗಳ ಮೂಲಕ ಮಾಡುತ್ತಿರುವುದು ಇದನ್ನೇ. ಪುರುಷಶಾಹಿಯು ತನ್ನ ಅಧಿಕಾರವನ್ನು ಮಹಿಳೆಯ ಮೇಲಿನ ಹಿಂಸೆಯ ಮೂಲಕ ಅಧಿಕೃತಗೊಳಿಸುತ್ತಿದೆ. ಹೀಗಾಗಿ ಗುವಾಹಟಿಯಲ್ಲಾಗಲೀ ಅಥವಾ ಬೆಂಗಳೂರಿನಲ್ಲಾಗಲೀ ಅಥವಾ ಮಂಗಳ... ನಲ್ಲಾಗಲೀ ನಡೆದಿರುವ, ನಡೆಯುತ್ತಿರುವ ಮತ್ತು ಮುಂ... ನಡೆಯ ಬಹುದಾದ ಮಹಿಳೆಯ ಮೇಲಿನ ಹಿಂಸೆ ಪು... ಷಾಧಿಕಾರವನ್ನು ಹಿಂಸೆಯ ಮೂಲಕ ಸರ್ವಮಾನ್ಯಗೊಳಿಸ... ಕಾರ್ಯತಂತ್ರದ ಭಾಗವಷ್ಟೇ.

ಮಂಗಳೂರಿನ ಹೋಂ ಸ್ಟೇಯಲ್ಲಿ ತಮ್ಮ ಪಾರ... ತಾವು ಒಂದು ಖಾಸಗಿ ಸಮಾರಂಭದ ಮೂಲ... ಸಂತೋಷಪಡುತ್ತಿದ್ದ ಯುವಜನರ ಮೇಲೆ ಅಮಾನವೀ... ವಾಗಿ ಹಲ್ಲೆ ಮಾಡಿ ಅವರ ದೈಹಿಕ-ಮಾನಸಿಕ ಸ್ಥಿತಿಯ... ಅಸ್ತವ್ಯಸ್ತಗೊಳಿಸಿ, ಅವರ ವ್ಯಕ್ತಿತ್ವವನ್ನು ನಾಶ ಮಾಡು... ಪ್ರಯತ್ನದಲ್ಲಿ ಸಫಲತೆ ಸಿಗುವುದಿಲ್ಲ, ಏಕೆಂದರೆ, ದುಃಸ್ವ... ವೊಂದನ್ನು ಕಂಡು ಎಚ್ಚರವಾದ ಕೂಡಲೇ ಆ ಸ್ವಪ್ನ... ಭಯಾನಕತೆ ಒಂದಿಷ್ಟು ಪ್ರಭಾವ ಬೀರುವುದಾದರ... ತದನಂತರ ಆ ದುಃಸ್ವಪ್ನವು ತಂತಾನೇ ಮಾಯವಾಗುವುದ... ಹಾಗೆ.... ಈ ದ್ವೇಷದ ಸಾರ್ವಜನಿಕ ಪ್ರದರ್ಶನ... ಮಾಡಿದವರಿಗೆ ತಿರುಗುಬಾಣವಾಗಬೇಕು. ರಾಜಕೀ... ಪ್ರಭಾವದಿಂದ ಅವರಿಗೆ ರಕ್ಷಣೆ ಸಿಕ್ಕಿದರೂ ನೈಸಗಿ... ನ್ಯಾಯವ್ಯವಸ್ಥೆಯೊಂದು ಇದ್ದೇ ಇದೆಯಲ್ಲಾ, ಅದರಿ... ಯಾರಿಗೆ ಬಿಡುಗಡೆ ದೊರಕೀತು?

ವಿನಾಕಾರಣ ಹಲ್ಲೆಗೊಳಗಾದ ಯುವಕಯುವತಿಯ... ಆಘಾತಕ್ಕೆ ಒಳಗಾಗಿರಬಹುದು. ಅದರಲ್ಲೂ ಸದ... ಕ್ರಿಮಿನಲ್ ಕೃತ್ಯಕ್ಕೆ ಬಲಿಯಾದ ಹೆಣ್ಣು ಮಕ್ಕಳು ತೀ... ಕುಗ್ಗಿ ಹೋಗಿರಬಹುದು. ಆದರೆ ಸಾರ್ವಜನಿಕವಾ... ಹರಾಜಾದದ್ದು ಸದರಿ ಕೃತ್ಯಗಳನ್ನು ಮಾಡಿದವರ ಮ... ಮತ್ತು ರಾಜ್ಯ ಸರ್ಕಾರದ ಘನತೆ. ಧರ್ಮ ಮತ್ತು ಸಂಸ್ಕೃತಿ... ರಕ್ಷಕರು ಆ ಅಸಹಾಯಕ ಹೆಣ್ಣು ಮಕ್ಕಳ ಕಪಾ... ಹೊಡೆದಿಲ್ಲ, ಬದಲಿಗೆ ಸರ್ಕಾರದ ಕಾನೂನು ಮ... ಸುವ್ಯವಸ್ಥೆಯ ಪಾಲನೆಗೆ ಪ್ರಹಾರವನ್ನು ಮಾಡಿದ್ದಾರೆ. ಏಕೆಂ... ಯಾವುದೇ ಕ್ರಿಮಿನಲ್ ಕೃತ್ಯವು ವ್ಯಕ್ತಿಯೊಬ್ಬನ ವಿರು... ನಡೆಸಿದ ದೌರ್ಜನ್ಯವಲ್ಲ, ಬದಲಿಗೆ ರಾಜ್ಯದ ವಿರುದ್ಧ ನಡೆ... ದೌರ್ಜನ್ಯ. ಹೀಗಾಗಿಯೇ ಎಲ್ಲಾ ಕ್ರಿಮಿನಲ್ ಕೃತ್ಯ... ಅಭಿಯೋಜನೆಯನ್ನು ದೂರುದಾರನ ಪರವಾಗಿ ಸರ್ಕಾರ... ನಡೆಸುತ್ತದೆ. ಅಷ್ಟೇ ಅಲ್ಲದೇ ಈ ಘಟನೆಗಳು ಮರುಕಳಿ... ತ್ತಿರುವುದನ್ನು ಗಮನಿಸಿದಲ್ಲಿ ಈ ಕ್ರಿಮಿನಲ್ ಕೃತ್ಯಗಳ... ಮಾಡುವವರಿಗೆ ಕಾಣದ ಕೈಗಳ ರಕ್ಷಣೆ ಇದೆ ಎಂಬು... ವೇದ್ಯವಾಗುತ್ತದೆ.


ಜನರ ಮೇಲೆ – ವಿಶೇಷವಾಗಿ ಮಹಿಳೆಯರ ಮೇ... – ಇರುವ ಅಥವಾ ಇಡಬಯಸುವ ಧಾರ್ಮಿ... ಅಧಿಕಾರವನ್ನು ಪುನಃಪುನಃ ಪರೀಕ್ಷೆಗಳಿಗೊಳಪಡಿ ಸುವುದು... ಆ ಮೂಲಕ ತಾವೇ ಧರ್ಮ ಮತ್ತು ಸಂಸ್ಕೃತಿಯ ರಕ್ಷಕರೆಂ... ಪೋಸು ಕೊಡುವುದು, ಮಾಧ್ಯಮಗಳ ಮೂಲಕ ಜನ... ಸಂವಹನ ಮಾಡಿ ಜನತೆಯ ಸಮರ್ಥನೆಯನ್ನು ಮ... ಮರ್ಯಾದೆಯನ್ನು ಪಡೆಯುವುದು, ಆ ಮೂಲಕ ತ... ಸಿದ್ಧಾಂತವನ್ನು ಒಪ್ಪುವ ರಾಜಕೀಯ ಪಕ್ಷದಲ್ಲಿ ಅಧಿಕಾ... ಹಣ ಹಾಗೂ ವರ್ಚಸ್ಸನ್ನು ಪಡೆಯುವುದು, ತ... ವಯೋಮಾನಕ್ಕೆ ತಕ್ಕಂತೆ ಸಿಗದಿರುವ ವಿದ್ಯೆ, ಅಂತ... ಹಣ, ಸ್ಥಾನಮಾನ ಮತ್ತು ಹೆಣ್ಣು ಮಕ್ಕಳೊಡನೆ ಸ್ನೇ... ಮೊದಲಾದವು ಬೇರೆಯವರಿಗೆ ಸಿಗುತ್ತಿದೆಯಲ್ಲಾ ಎ... ಅಸಹನೆ- ಇವುಗಳೆಲ್ಲಾ ಈ ಕೃತ್ಯದ ಹಿನ್ನೆಲೆಯ... ಇರಬಹುದಾದ ಉದ್ದೇಶಗಳು ಎಂದು ನನಗನಿಸುತ್ತ... ಇದಕ್ಕಿಂತ ಭಿನ್ನವಾಗಿ ಯಾವುದಾದರೂ ಕಾರಣಗಳಿ... ಎಂಬುದನ್ನು ಮಾನಸಿಕ ತಜ್ಞರೇ ವಿಶ್ಲೇಷಿಸಬೇಕಾಗುತ್ತ...

ಈ ಪ್ರಸಂಗದಲ್ಲಿ ಮಂಗಳೂರಿನ ಪೋಲೀಸರ ಪಾ...

ಆರೆಸ್ಸೆಸ್ ಸಂಸ್ಕೃತಿಯ ಬಿಂಬ

All men are intellectuals, in that all have intellectual and rational faculties, but not all men have the social function of intellectuals -- Antonio Gramsci

ನಿನ್ನೆ ಮಂಗಳೂರಿನಲ್ಲಿ ಹಿಂದೂ ಸಂಘಟನೆಯ ಹುಡುಗರು ಹೆಣ್ಣುಮಕ್ಕಳ ಮೇಲೆ ನಡೆಸಿದ ಹಲ್ಲೆ ಅವಮಾನವೀಯವಾದದ್ದು ಹಾಗೂ ಅತ್ಯಂತ ಕ್ರೌರ್ಯವಾದದ್ದು. ಆದರೆ ಇದು ಹೊಸದಾಗಿ ನಡೆಯುತ್ತಿದೆ ಎಂದು ನಾವು ಗಾಬರಿಗೊಂಡರೆ ಅದು ನಮ್ಮ ಆತ್ಮವಂಚನೆಯಷ್ಟೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಇದು ದೇಶಾದ್ಯಂತ ನೂರಾರು ಬಾರಿ ನಡೆದಿದೆ. ಈ ಮತೀಯವಾದಿ ಆರೆಸ್ಸೆಸ್ ಸಂಘಟನೆ 'ಗರ್ವ್ ಸೆ ಕಹೋ ಹಮ್ ಹಿಂದೂ ಹೈ' ಎನ್ನುವ ಘೋಷಣೆಯನ್ನು ಹುಟ್ಟು ಹಾಕಿದಾಗಲೇ ಈ ಹಲ್ಲೆಯ ಕ್ರೌರ್ಯದ ಬೀಜಗಳು ಮೊಳಕೆಯೊಡೆದದ್ದು, ನಂತರ 'ಏಕ್ ಧಕ್ಕ ಔರ್ ದೋ' ಎನ್ನುವ ಫ್ಯಾಸಿಸ್ಟ್ ಮನಸ್ಥಿತಿ ಚಲನಶೀಲಗೊಂಡಾಗ ಈ ಕ್ರೌರ್ಯದ ಅನೇಕ ಮುಖಗಳು ಅನಾವರಣಗೊಂಡವು. ಈ ಬಗೆಯ ಕ್ರೌರ್ಯಕ್ಕೆ ನೀರೆರೆದು ಪೋಷಿಸಿದ ಅಡ್ವಾನಿ ಹಾಗೂ ಮತ್ತೊಬ್ಬ ಫ್ಯಾಸಿಸ್ಟ್ ನರೇಂದ್ರ ಮೋದಿ ಇಂದು ಭವಿಷ್ಯದ ಪ್ರಧಾನಿ ಪಟ್ಟದ ಸ್ಪರ್ಧಿಗಳು. ಇವರನ್ನು ಹಾಗೂ ಇವರ ಫ್ಯಾಸಿಸ್ಟ್ ಮಾತೃ ಪಕ್ಷ ಆರೆಸ್ಸೆಸ್ ಅನ್ನು ಸಹಿಸಿಕೊಂಡ ಘೋರವಾದ ತಪ್ಪಿಗೆ ಸಮಾಜ ಈ ಬಗೆಯ ಹಲ್ಲೆಗಳನ್ನು ಕಾಲಕ್ಕಾಲಕ್ಕೆ ಎದುರು ನೋಡಬಹುದು. ಇವರ ಹಿಂದುತ್ವದ ಕ್ರೌರ್ಯದ ಹುಸಿಚಿಂತನೆಗೆ ದೇಶವೊಂದರ, ರಾಜ್ಯವೊಂದರ ಸಾಂಸ್ಕೃತಿಕ ಸಮಾಜ ಹಾಗೂ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ವ್ಯವಸ್ಥೆ ತೆರಬೇಕಾದ ಬೆಲೆ ಅಪಾರವಾದದ್ದು. ಚಿಂತಕ ಗ್ರಾಮ್ಷಿ ಹೇಳಿದ ಹಾಗೆ "ನಾವು ಮೇಲ್ನೋಟಕ್ಕೆ ವೇದಾಂತಿಗಳಾಗಿಯೂ, ಸಿದ್ಧಾಂತವಾದಿಗಳಾಗಿಯೂ ಕಾಣಿಸಿಕೊಳ್ಳುತ್ತೇವೆ. ಆದರೆ ಈ ಮುಗ್ಧ ವೇದಾಂತಗಳೇ ನಮ್ಮಲ್ಲಿ ನಮಗೆ ಗೊತ್ತಿಲ್ಲದ ಹಾಗೆ ನಮ್ಮೊಳಗೆ ಫ್ಯಾಸಿಸ್ಟ್ ಸಂಸ್ಕೃತಿಯನ್ನು ಹುಟ್ಟುಹಾಕುತ್ತವೆ." ಈ ಮಾತುಗಳು ನಾಗರಿಕ ಸಮಾಜದಲ್ಲಿ ಅತ್ಯಂತ ಕ್ರೌರ್ಯದಿಂದ ಅಸಹಾಯಕ ಹೆಣ್ಣುಮಕ್ಕಳ ಮೇಲೆ ಅನಾಗರಿಕವಾಗಿ ಹಲ್ಲೆ ನಡೆಸಿದ ಆ ಘಾತ... ಹುಡುಗರಿಗೂ ಅನ್ವಯಿಸುತ್ತದೆ. ಈ ಅಮಾನವೀ... ಅನಾಗರಿಕ ಹಲ್ಲೆಯನ್ನು ಹಿಂದೂ ಸಂಸ್ಕೃತಿಯ ಹೆಸರಿ... ಸಮರ್ಥಿಸಿಕೊಳ್ಳುತ್ತಿರುವ ಜನಸಾಮಾನ್ಯರಿಗ... ಅನ್ವಯಿಸುತ್ತದೆ. ನಮ್ಮ ಕಾಲಘಟ್ಟದಲ್ಲಿ ಈ ತರ... ಅನಾಗರಿಕ ಘಟನೆಗಳು ನಡೆದಾಗ... ಅಸಹಾಯಕತೆಯಿಂದ ಪತ್ರಿಕಾ ಹೇಳಿಕೆ... ಮೂಲಕ, ಲೇಖನಗಳ ಮೂಲಕ ಖಂಡಿಸ... ನಮಗೂ ಅನ್ವಯಿಸುತ್ತದೆ.



ಈ ಫ್ಯಾಸಿಸ್ಟ್ ಧೋರಣೆಗಳಿಂದ ಮುಕ್ತ... ರಾಜಕೀಯ ಚಿಂತಕ ಗ್ರಾಮ್ಷಿಯು "ಸಾಂಸ್ಕೃ... ಯಜಮಾನ್ಯ"ವನ್ನು ಪ್ರತಿಪಾದಿಸುತ್ತಾ... **(Cultural hegemony)**. ಈ ಸಾಂಸ್ಕೃ... ಯಜಮಾನ್ಯದಲ್ಲಿ ಗ್ರಾಮ್ಷಿಯು ದುಡಿಯ... ವರ್ಗಗಳು ಕೇವಲ ಆರ್ಥಿಕ ಬೆಳವಣಿಗೆ... ಮುಖಾಂತರವಾಗಲೀ, ಕೇವಲ ರಾಜಕೀ... ಅಧಿಕಾರದ ಮುಖಾಂತರವಾಗಲೀ ಒಂ... ಸಮಾಜವನ್ನು ಕಟ್ಟಲು ಸಾಧ್ಯವಿಲ್ಲ, ಬದಲ... ಈ ದುಡಿಯುವ ಜನತೆ ಸಾಂಸ್ಕೃತಿಕ... ಬುದ್ಧಿಜೀವಿಗಳಾಗಿಯೂ ರೂಪಗೊಂಡಾಗ... ವ್ಯವಸ್ಥೆಯಲ್ಲಿ ಸಮತೋಲನ, ಸ... ಒಡಮೂಡುತ್ತದೆ ಎಂದು ಚಿಂತಿಸುತ... ಇಲ್ಲದೇ ಹೋದಲ್ಲಿ ಪಟ್ಟಭದ್ರ ಹಿತಾಸಕ್ತಿಯ...

ಕ್ಟ್ರಾನಿಕ್ ಮಾಧ್ಯಮದ ಪತ್ರಕರ್ತರ ವೃತ್ತಿ ಮತ್ತು ಕನಿಷ್ಠ ನಿಕ ಕರ್ತವ್ಯದ ನಡುವಿನ ದ್ವಂದ್ವ, ಸಾರ್ವಜನಿಕರ ಕ್ರಿಯೆಗಳು ಹಾಗೂ ಅನೇಕ ವ್ಯಕ್ತಿಗಳ ಬಯಲಿಗೆ ಬಿದ್ದ ವಿವಾದಗಳು ಇವೆಲ್ಲವೂ ಕಂಡುಬರುತ್ತವೆ. ಈ ಎಲ್ಲಾ ಲೆಯಲ್ಲಿ ಪೊಲೀಸರು ಪ್ರಥಮ ವರ್ತಮಾನ ವರದಿಯಲ್ಲಿ ಬಲಿಸಿರುವ ಆರೋಪಗಳನ್ನು ಗಮನಿಸಬೇಕಿದೆ. ಈ ಯ ಘಟನೆಯನ್ನು ಪೊಲೀಸರು ಯಾವ ಕಲಮುಗಳ ನ್ನು ನೋಂದಾವಣೆ ಮಾಡಬೇಕು ಎಂಬುದರ ಬಗ್ಗೆ ಹಾಂಗವು ಇದುವರೆವಿಗೆ ಸನ್ನದ್ಧವಾಗಿಯೇ ಇಲ್ಲ. ಹೀಗಾಗಿ ಪ್ರಕರಣವನ್ನು ತುಂಡು-ತುಂಡನ್ನಾಗಿ ನೋಡಲಾಗಿದೆ. ರತೀಯ ದಂಡಸಂಹಿತೆಯ ಕಲಮುಗಳ ನಡುವೆ ತುಕಾಡಿ ತದನಂತರ ಬೇರೆ ಬೇರೆ ಕಾನೂನುಗಳ ಆಶ್ರಯ ಪಡೆದರೂ ಆ ಆಕ್ರಮ ಘಟನೆಯ ಸಮಗ್ರ ಅಪರಾಧ ನ್ನು ಕಾನೂನಿನ ಅಡಿಯಲ್ಲಿ ತರಲಾಗುವುದಿಲ್ಲ. ಓದಲು ತ್ರ ಉದ್ದನೆಯ ಪಟ್ಟಿ ಇರುವ ಈ ಕಲಮುಗಳ ಒಳ ಕ್ಕು ನೋಡಿದರೆ ಬೇರೆಯದೇ ಲೋಕ ಕಂಡುಬರುತ್ತದೆ. ಂದುವರೆದಂತೆ ತನಿಖೆ ಮತ್ತು ಇನ್ನುಳಿದ ಸಾಕ್ಷ್ಯಾಧಾರಗಳ ದೃಢೀಕರಣ ಮತ್ತು ಆರೋಪ ಸಾಬೀತುಗೊಳಿಸುವಿಕೆ ಲೀಸ್ ಇಲಾಖೆಗೆ ಸವಾಲೇ ಸರಿ.

2009ರ ಪಬ್ ದಾಳಿಯ ವಿರುದ್ಧ ಯುವಜನಾಂಗವು ಕ್ ಚಡ್ಡಿ' ಆಂದೋಲನವನ್ನು ರೂಪಿಸಿ ಪಬ್ ದಾಳಿ ತಹ ಅಮಾನವೀಯ ಘಟನೆ ಎಂಬುದನ್ನು ನಿರೂಪಿಸಿತು. ಯಾವ ಯುವ ಮನಸ್ಸು ಇನ್ನೊಂದು ನೂತನ ಕ್ಕಾರದ ಆಂದೋಲನವನ್ನು ಹಮ್ಮಿಕೊಳ್ಳುವುದೋ ಯದು. ಆದರೆ ಈ ನಿಟ್ಟಿನಲ್ಲಿ ಅತ್ಯಂತ ಜರೂರಾಗಿ ಬೇಕಾದುದು ಮತ್ತು ಎಲ್ಲಾ ಸಂಘಟನೆಗಳು ಮತ್ತು ಮನಸ್ಸಿನ ವ್ಯಕ್ತಿ ಮತ್ತು ಶಕ್ತಿಗಳು ಪ್ರತಿಪಾದಿಸಬೇಕಾದುದು ಂದರೆ, ಇಂತಹ ದುರ್ಘಟನೆಯು ಮತ್ತೆ ಮರುಕಳಿಸದಂತೆ ಬೇಕಾದಲ್ಲಿ ಶಾಸನಸಭೆಯಲ್ಲಿ ವಿಶೇಷ ಕಾನೂನೊಂದನ್ನು ಸಲ್ಪಡಬೇಕಾದ್ದರ ಅಗತ್ಯ. ಭಾರತೀಯ ದಂಡ ಂತೆಯಲ್ಲಿ ಅನೇಕ ತಿದ್ದುಪಡಿಗಳಾಗಿ ಮಹಿಳೆಯರಿಗೆ ಕೆ ಒದಗಿಸುವ ಅನೇಕ ಕಾನೂನುಗಳು ರೂಪಿತವಾಗಿವೆ. ಗೆಯೇ ಈಗಲೂ ಕೂಡಾ ಭಾರತ ದಂಡಸಂಹಿತೆಯಲ್ಲಿ ದ್ದುಪಡಿಯಾಗಿ ಮಂಗಳೂರಿನ ಘಟನೆಗಳಿಗೆ ಮತ್ತು ಖಾಪ್ ಚಾಯತಿಯ ಆದೇಶಗಳಿಗೆ ಅನ್ವಯವಾಗುವಂತಹ ಶೇಷ ಕಾನೂನೊಂದು ತುರ್ತಾಗಿ ರೂಪಿತವಾಗಬೇಕಾಗಿದೆ. ಹೋಮ್‌ಸ್ಟೇಲ್‌ನಲ್ಲಿ ನಡೆದ ಅಕ್ರಮ ಕೃತ್ಯಗಳು ಕಾನೂನು ರೀತ್ಯಾ ಪರಾಕೃತ್ಯಗಳೆಂದು ಪರಿಗಣಿಸಬೇಕಾಗಿದೆ. ಹಾಗೂ ಈ ಭಾರತೀಯ ದಂಡಸಂಹಿತೆಯಲ್ಲಿ ತಿದ್ದುಪಡಿಯಾಗ ಕಾಗಿದೆ ಅಥವಾ ಕರ್ನಾಟಕ ರಾಜ್ಯವೇ ವಿಶೇಷ ನೂನನ್ನು ರೂಪಿಸುವ ಅವಕಾಶವಿದೆ. ಇಂತಹ ಷ್ಠವಾದ ಮತ್ತು ಪರಿಣಾಮಕಾರಿಯಾಗಿ ಜಾರಿಯಾಗುವ ನೂನು ಶಾಸಕಾಂಗದಲ್ಲಿ ರೂಪಿತವಾದರೆ ಬಹುಶಃ ಂದಿನ ದಿನಗಳಲ್ಲಿ ಈ ಅಕ್ರಮ ಕೃತ್ಯಗಳು ಲಗಬಹುದು. ಆದರೆ ಪುರುಷನ ಅಹಂಕಾರಕ್ಕೆ ನುಗುಣವಾಗಿ ಮಹಿಳೆಯನ್ನು ಹತ್ತಿಕ್ಕುವ ಅಧಿಕಾರದ ವೃತ್ತಿಗೆ ಅನುಸಾರವಾಗಿ ಅತ ಕ್ರೌರ್ಯದ ಹೊಸಹೊಸ ಪ್ಕಾರಗಳನ್ನು ಮಾಡಬಹುದು.

ಈ ನಿಟ್ಟಿನಲ್ಲಿ ಬಲಿಷ್ಠವಾದ ಕಾನೂನು ಹಾಗೂ ಮೌನ ರಿದಿರುವ ನಾಗರಿಕ ಸಮಾಜ-ಇವೆರಡೇ ನಮಗೆ ಮತ್ತು ಂದಿನ ಯುವ ಜನಾಂಗಕ್ಕೆ ಇರುವ ಆಶಾಕಿರಣ.

• ಬಾನು ಮುಷ್ತಾಕ್

ಚೆಡ್ಡಿಗಳ ಲೇಟೆಸ್ಟ್ ಸಾಹಸ ಭಗಿನಿಯರ ಮಾನರಕ್ಷಣೆ

ಮೊನ್ನೆ ತಾ. 28.7.2012 ಶನಿವಾರ ಇಳಿಸಂಜೆ ಮಂಗಳೂರಿನ ಒಂದು ಖಾಸಗಿ ಕಟ್ಟಡದಲ್ಲಿ ನಡೆದ ಖಾಸಗಿ ಸಂತೋಷಕೂಟದಲ್ಲಿ ಭಾಗವಹಿಸಿದ ಯುವಕ ಯುವತಿಯರ ಮೇಲೆ ಸರಿಸುಮಾರು ಅವರದ್ದೇ ಪ್ರಾಯದ ಯುವಕರು ಬೈದು, ಕೂಗಾಡಿ, ದೈಹಿಕ ಹಲ್ಲೆ ನಡೆಸಿದ ಟೀವಿ ದೃಶ್ಯಾವಳಿಯನ್ನು ಜನ ಈಗಾಗಲೇ ನೋಡಿದ್ದಾರೆ. ಅವತ್ತು ನಡೆದ ಹಲ್ಲೆಯಲ್ಲಿ ಪೆಟ್ಟು ತಿಂದವರು ಅಸಹಾಯಕರಾಗಿದ್ದರು ಮತ್ತು ತಮಗೆ ಹೊಡೆಯುತ್ತಿದ್ದವರ ಬಳಿ "ನಾವು ಏನೂ ತಪ್ಪು ಮಾಡಿಲ್ಲ; ಪ್ಲೀಸ್ ಹೊಡೆಯಬೇಡಿ" ಎಂದು ಗೋಗರೆಯುತ್ತಿದ್ದರು. ಒಬ್ಬ ಯುವಕ, "ಇದು ರೇವ್ ಪಾರ್ಟಿ ಅಲ್ಲ; ನನ್ನ ಬರ್ತ್‌ಡೇ ಪಾರ್ಟಿ" ಎಂದು ಮತ್ತೆಮತ್ತೆ ಹೇಳುತ್ತಿದ್ದ. ಆದರೂ ಹಲ್ಲೆಕೋರರು ಅವನಿಗೆ ನಿರ್ದಯವಾಗಿ ಬಾರಿಸುತ್ತಿದ್ದರು.

ಈ ದೃಶ್ಯ ಹೃದಯ ಹಿಂಡುವಂತಹದ್ದಾಗಿದ್ದರೂ ನಮಗೆ ಯಾರಿಗೂ ಅಪರಿಚಿತವೇನೂ ಅಲ್ಲ. ಈಗಾಗಲೇ ನಾವು ಹಲವು ಬಾರಿ ಇಂತಹ ದೃಶ್ಯಗಳನ್ನು ನೋಡಿದ್ದೇವೆ. ಇದು ಈಗ ಮಂಗಳೂರು ಮಾತ್ರವಲ್ಲ ಕರಾವಳಿಯ ಪುತ್ತೂರು, ಉಪ್ಪಿನಂಗಡಿ, ಸುಳ್ಯ, ಸುಬ್ರಹ್ಮಣ್ಯ, ಉಡುಪಿ, ಕುಂದಾಪುರ, ಮೂಲ್ಕಿ, ಮೂಡುಬಿದಿರೆ ಮತ್ತು ಇನ್ನೂ ಹಲವು ಊರುಗಳಲ್ಲಿ ಆರ್‌ಎಸ್‌ಎಸ್, ಭಜರಂಗದಳ, ವಿಹಿಂಪ, ಹಿಂದೂ ಜಾಗರಣ ವೇದಿಕೆ, ಶ್ರೀರಾಮ ಸೇನೆ ಮುಂತಾದ ನಾನಾ ಹೆಸರುಗಳ ಆದರೆ ಒಂದೇ ಸಿದ್ಧಾಂತದ ಚೆಡ್ಡಿಪಡೆ ಹಿಂದೂ ಧರ್ಮ ಮತ್ತು ಹಿಂದೂ ಭಗಿನಿಯರ ಶೀಲವನ್ನು ರಕ್ಷಿಸುವ ವಿಧಾನ.

ಕರಾವಳಿಯಲ್ಲಿ ಈ ಹಿಂದೆ ನಡೆದ ಇಂತಹದ್ದೇ ಗುಂಪು ಹಲ್ಲೆಗಳನ್ನು ನೆನಪಿಸಿಕೊಳ್ಳಿ. ಆರು ತಿಂಗಳ ಕೆಳಗೆ ಕುಕ್ಕೆ ಷಷ್ಠಿಯ ದಿನ ಸುಬ್ರಹ್ಮಣ್ಯದಲ್ಲಿ ನಡೆಯುವ ಮಡೆಸ್ನಾನದ ಆಚರಣೆಯನ್ನು ನೋಡಲು ಬಂದ ಮೈಸೂರಿನ ದಲಿತ ಕಾರ್ಯಕರ್ತ ಶಿವರಾಮು ಅವರನ್ನು ನಾಲ್ಕಾರು ಧಾಂಡಿಗರು ಸುತ್ತುವರಿದು ಅವರ ಪಂಚೆ ಎಳೆದು, ಮೈಮೇಲೆ ಎಲ್ಲೆಂದರಲ್ಲಿ ಬಾರಿಸಿದ್ದರು. ಅದಕ್ಕಿಂತ ಮೊದಲು ಜನವರಿ 24 ರಂದು ಶ್ರೀರಾಮಸೇನೆಯವರು ಎಂದು ಹೇಳಲಾದ ಸುಮಾರು 40 ಮಂದಿ ಗೂಂಡಾಗಳು ಮಂಗಳೂರಿನ ಪಬ್ ಒಂದರ ಮೇಲೆ ನಡೆಸಿದ ದಾಳಿ ಕೂಡಾ ದೇಶಾದ್ಯಂತ ಸುದ್ದಿ ಮಾಡಿತ್ತು. ಅದಕ್ಕೂ ಮೊದಲು 2005 ರ ಮಾರ್ಚ್ 5 ರಂದು ಉಡುಪಿಯ ಹೊರವಲಯದ ಆದಿ ಉಡುಪಿ ಮೈದಾನದಲ್ಲಿ ನೂರಾರು ಜನರ ಎದುರು ಇಬ್ಬರು ಮುಸ್ಲಿಮರನ್ನು ಬೆತ್ತಲೆಗೊಳಿಸಿ ಗುಂಪು ಹಲ್ಲೆಗೆ ಒಳಪಡಿಸಿದ ಫೋಟೋ ಕರ್ನಾಟಕದ ಎಲ್ಲ ಪ್ರಮುಖ ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ಜೊತೆಗೆ ಪ್ರತ್ಯಕ್ಷ ಸಾಕ್ಷಿ ಪುರಾವೆ ಇರುವ ಪ್ರತಿಯೊಂದು ಘಟನೆಗೂ, ಪ್ರತ್ಯಕ್ಷ ಸಾಕ್ಷಿ ಪುರಾವೆ ಇಲ್ಲದ ಇಂತಹ ನೂರಾರು ಘಟನೆಗಳು ಕರಾವಳಿಯಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ನಡೆದಿದೆ.

ರಾಜ್ಯದ ರಾಜಕೀಯದಲ್ಲಿ ಬಿಜೆಪಿ ಮುನ್ನೆಲೆಗೆ ಬಂದದ್ದು ಕೂಡ ಇದೇ ಕಾಲಾವಧಿಯಲ್ಲಿ ಎಂಬುದನ್ನೂ ನಾವು ನೆನಪಿಸಿಕೊಳ್ಳಬೇಕು. ಇದು ಕಾಕತಾಳೀಯವೇನೂ ಅಲ್ಲ. ಒಂದೆರಡು ತಿಂಗಳ ಕೆಳಗೆ ಮಂಗಳೂರಿನ ಸಾರ್ವಜನಿಕ ಸಭೆಯೊಂದರಲ್ಲಿ ಆಗ ಮುಖ್ಯಮಂತ್ರಿಯಾಗಿದ್ದ ಬಿಜೆಪಿ ನಾಯಕ ಸದಾನಂದ ಗೌಡರೇ ಸ್ವತಃ "ಲವ್ ಜೆಹಾದ್" ಬಗ್ಗೆ ಜನ ಎಚ್ಚೆರವಾಗಿರಬೇಕು ಎಂದು ಕರೆ ಕೊಟ್ಟಿದ್ದರು. ಸಾರ್ವಜನಿಕ ಸ್ಥಳಗಳಲ್ಲಿ ಹಿಂದೂ ಯುವತಿಯರ ಜೊತೆ ಅನ್ಯ ಕೋಮಿನ ಹುಡುಗರು ಕಂಡುಬಂದರೆ ಅವರ ಮೇಲೆ ಹಲ್ಲೆ ಮಾಡಲು ನಮ್ಮ ಬೆಂಬಲವಿದೆ ಎಂದು ರಾಜ್ಯ ಮುಖ್ಯಮಂತ್ರಿಯವರೇ ಅಂದು ಪರೋಕ್ಷವಾಗಿ ಹೇಳಿದ್ದರು! ಆದರೆ ಅವರು ಹಾಗೆ ಹೇಳುವ ಮೊದಲೇ ಕರಾವಳಿಯ ವಿವಿಧ ಊರುಗಳಲ್ಲಿ ಅಂತಹ ಅಸಂಖ್ಯ ಘಟನೆಗಳು ಪೊಲೀಸರ ಸಹಕಾರದೊಡನೆ ಸಂಭವಿಸಿದ್ದವು.



ಕಳೆದ ಒಂದು ದಶಕದಲ್ಲಿ ಕರಾವಳಿಯಾದ್ಯಂತ ಇಂತಹ ಘಟನೆಗಳನ್ನು ನಡೆಸಿದ ಸಂಘಟನೆ ಯಾವುದೇ ಇರಲಿ, ಅವುಗಳೆಲ್ಲದರ ಸ್ಫೂರ್ತಿಯ ಸೆಲೆ ಮಾತ್ರ ಆರ್‌ಎಸ್‌ಎಸ್‌ನ ಹಿಂದುತ್ವದ ಸಿದ್ಧಾಂತ. ಮಂಗಳೂರಿನ ಇತ್ತೀಚೆಗಿನ ಘಟನೆಯೂ ಆಕಸ್ಮಿಕವಲ್ಲ, ಹಿಂದುತ್ವದ ಸಿದ್ಧಾಂತವೇ ಈ ಹಲ್ಲೆಗೂ ಸೂತ್ರಧಾರನಾಗಿದೆ. ಈ ವಾಸ್ತವವನ್ನು ಮರೆಮಾಚಿ, ಮಂಗಳೂರಿನ ಹಲ್ಲೆ ಹೆಣ್ಣಿನ ಮೇಲೆ ಗಂಡಿನ ಆಕ್ರಮಣ ಎಂದು ವಾದಿಸುವುದು ಸಲ್ಲದು. ಕೆಲವು ಸರ್ಕಾರೀ ಕೃಪಾಪೋಷಿತ ಮಹಿಳಾಮಣಿಗಳು ಇದ್ದಕ್ಕಿದ್ದಂತೆ ಸ್ತ್ರೀವಾದದ ಮೇಕಪ್ ಧರಿಸಿ ಇಂತಹ ದಾರಿ ತಪ್ಪಿಸುವ ಸಮಜಾಯಿಷಿಗಳನ್ನು ಈಗ ನೀಡುತ್ತಿದ್ದಾರೆ.

ಗಂಡಿನಿಂದ ಹೆಣ್ಣಿನ ಶೋಷಣೆ ಎಲ್ಲ ಕಾಲಗಳಲ್ಲಿಯೂ, ಎಲ್ಲ ದೇಶಗಳಲ್ಲಿಯೂ, ಬಹುಶಃ ಎಲ್ಲ ಮನೆಗಳಲ್ಲಿಯೂ ಕಾಣುವ ವಿದ್ಯಮಾನ. ಆದರೆ ಮಂಗಳೂರಿನ ದುರ್ಘಟನೆಯನ್ನು ಹೀಗೆ ಸದ್ಯದ ರಾಜಕೀಯದಿಂದ ಬೇರ್ಪಡಿಸಿ ನೋಡಲಾಗುವುದಿಲ್ಲ. ಹಿಂದುತ್ವದ ಸಿದ್ಧಾಂತ ಅದಕ್ಕೆ ನೇರವಾಗಿ ಕಾರಣವಾಗಿರುವುದರಿಂದ ಈ ಸಿದ್ಧಾಂತ ಮತ್ತು ಅದರ ಸಂಘಟನೆ ಆರ್‌ಎಸ್‌ಎಸ್‌ಗಳನ್ನು ಎದುರಿಸಿ ಹಿಮ್ಮೆಟ್ಟಿಸದೆ ಈ ಬಗೆಯ ಹಲ್ಲೆಗಳನ್ನು ತಡೆಗಟ್ಟಲು ಸುತರಾಂ ಸಾಧ್ಯವಿಲ್ಲ.

ಮಂಗಳೂರಿನ ದುರ್ಘಟನೆಗೆ ತಕ್ಷಣದ ಪ್ರತಿಕ್ರಿಯೆಯಾಗಿ ಮುಖ್ಯಮಂತ್ರಿ, ಗೃಹಮಂತ್ರಿ, ಜಿಲ್ಲೆಯ ಉಸ್ತುವಾರಿ ಮಂತ್ರಿ ಹಾಗೂ ರಾಜ್ಯದ ಹಿರಿಯ ಪೊಲೀಸು ಅಧಿಕಾರಿಗಳು ಘಟನೆಯನ್ನು ಖಂಡಿಸಿ ಅಪರಾಧಿಗಳ ಮೇಲೆ ಸೂಕ್ತಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದ್ದಾರೆ. ಆದರೆ ಆ ಮಾತುಗಳನ್ನು ಅವರು ಹೇಳಿಮುಗಿಸುವ ಮೊದಲೇ ಮಂಗಳೂರಿನ ಬಿಜೆಪಿ ಮುಖಂಡರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೇ ಧಮಕಿ ಹಾಕಿ ಬಂಧಿತರಾದ ಆರೋಪಿಗಳನ್ನು ಬಿಡಿಸಿಕೊಂಡು ಹೋಗಿದ್ದಾರೆ. ಇದರಲ್ಲಿ ಕೂಡ ಆಶ್ಚರ್ಯಪಡುವಂತಹದ್ದೇನೂ ಇಲ್ಲ. ಕರಾವಳಿಯಲ್ಲಿ ನಡೆದ ಇಂತಹ ಯಾವುದೇ ಪ್ರಕರಣದಲ್ಲೂ ಯಾರಿಗೂ ಇದುವರೆಗೆ ಶಿಕ್ಷೆ ಆಗಿಲ್ಲ; ಮುಂದೆಯೂ ಆಗುವುದಿಲ್ಲ.

ಈಗಾಗಲೇ ಸಂಘಪರಿವಾರದ ಹಲವರು ಮೊನ್ನೆಯ ಘಟನೆಯಲ್ಲಿ ಹಲ್ಲೆಕೋರರನ್ನು ಸಮರ್ಥಿಸಿ ಮಾತಾಡಿದ್ದಾರೆ. ಬಿಜೆಪಿಯ ರಾಜ್ಯ ಘಟಕದ ಮಾಜಿ ಅಧ್ಯಕ್ಷರೂ, ಹಾಲಿ ಉಪಮುಖ್ಯಮಂತ್ರಿಗಳೂ ಆಗಿರುವ ಈಶ್ವರಪ್ಪ "ಮಂಗಳೂರಲ್ಲಿ ದಾಳಿ ನಡೆಸಿದ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರ ನಿಲುವು ಸರಿಯಾಗಿಯೇ ಇದೆ. ಆದರೆ ಅವರ ಕ್ರಮ ಮಾತ್ರ ಸರಿ ಇಲ್ಲ. ನಮ್ಮ ಸಂಸ್ಕೃತಿಗೆ ಧಕ್ಕೆ ಉಂಟಾಗುವಂತಹ ಯಾವುದೇ ಚಟುವಟಿಕೆ ನಡೆಯುವುದು ಸರಿ ಅಲ್ಲ...." ಎಂದು ಹೇಳಿದ್ದಾರೆ. (ಉದಯವಾಣಿ ತಾ. 30.7.2012) ಪುಟ 7) ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಯಾವಯಾವ ಚಟುವಟಿಕೆಗಳಿಂದ ನಮ್ಮ ಸಂಸ್ಕೃತಿಗೆ ಧಕ್ಕೆ ಉಂಟಾಗುತ್ತದೆ ಎಂದು ತಿಳಿಸಿದ್ದರೆ ಉಪಕಾರವಾಗುತ್ತಿತ್ತು.

ಖಾಸಗಿ ಕಟ್ಟಡವೊಂದರಲ್ಲಿ ಕೇವಲ ಆಹ್ವಾನಿತರಿಗೆ ಸಂತೋಷಕೂಟ ಏರ್ಪಡಿಸುವುದರಿಂದ ಸಂಸ್ಕೃತಿಗೆ ಧಕ್ಕೆ ಉಂಟಾಗುತ್ತದೋ? ಇದನ್ನು ತೀರ್ಮಾನಿಸುವವರು ಹಿಂದೂ ಜಾಗರಣ ವೇದಿಕೆಯವರೋ? ಹಲ್ಲೆಗೊಳಗಾದ ಮಂಗಳೂರಿನ ಯುವಕ-ಯುವತಿಯರಿಗೆ ಸಹಾನುಭೂತಿ ತೋರುವುದರ ಬದಲು ಈಶ್ವರಪ್ಪ ಅವರಿಗೆ ಧರ್ಮಸಂಸ್ಕೃತಿಗಳ ಬಗ್ಗೆ ಕ್ಲಾಸು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕೆ ಅವರಿಗೆ ಇರುವ ಅರ್ಹತೆ ಏನು ಎಂಬ ಮಾತು ಹಾಗಿರಲಿ, ಯಾವುದು ಖಾಸಗಿ, ಯಾವುದು ಸಾರ್ವಜನಿಕ ಎನ್ನುವುದರ ಪ್ರಜ್ಞೆಯಾದರೂ ಅವರಿಗೆ ಇದೆಯೆ?

• ಜಿ. ರಾಜಶೇಖರ

ತ್ವವು ತನ್ನದೇ ಆದ ಬೂರ್ಜ್ವಾ ಯಜಮಾನಿಕೆಯನ್ನು ಸ್ಕೃತಿಯ ಹೆಸರಿನಲ್ಲಿ ಸಮಾಜದ ಮೇಲೆ ಹೇರುತ್ತದೆ ದು ಗ್ರಾಮ್ಷಿಯ ಖಚಿತವಾದ ಅಭಿಪ್ರಾಯ. ಇಂದು ದಲ್ಲಿ ನಿನ್ನೆ ಹಾಗೂ ನಿರಂತರವಾಗಿ ಕೆಲವು ವರ್ಷಗಳಿಂದ ಂಗಳೂರು ಹಾಗೂ ಮಂಗಳೂರು ಮತ್ತು ಉಡುಪಿ ಲ್ಲೆಯಲ್ಲಿ ಸಂಸ್ಕೃತಿಯ ಹೆಸರಿನಲ್ಲಿ ನಡೆದ ಹಲ್ಲೆಯ ಹಿಂದಿನ ರ್ಯದ ಮನಸ್ಥಿತಿಯನ್ನು ಈ ಸಾಂಸ್ಕೃತಿಯ ಯಜಮಾನ್ಯದ ಭಾಷೆಯಲ್ಲಿ ಅರ್ಥೈಸಬೇಕು. ನಾವೆಲ್ಲ ನಮ್ಮ ನೆಲದ ಜಪೀಯ ಸಂಸ್ಕೃತಿಯನ್ನು, ಜೀವಪರವಾದ ಅವೈದಿಕ ಸ್ಕೃತಿಯ ಯಜಮಾನ್ಯವನ್ನು ವ್ಯವಸ್ಥೆಯೊಳಗೆ ಚಲನಶೀಲ ಗಿ, ನಿರಂತರವಾಗಿ ನೆಲೆಗೊಳ್ಳಲು ಪ್ರಯತ್ನಿಸಿಲ್ಲದ ತಪ್ಪಿಗಾಗಿ ದು ಸಂಘಪರಿವಾರದ ವಿಕೃತಿ ಚಿಂತನೆಯನ್ನು ಮೈಗೂಡಿಸಿ ಂದ ಹಿಂದೂ ಸಂಸ್ಕೃತಿಯ ಹೆಸರಿನಲ್ಲಿ ನಿರಂತರವಾದ ಇಂದು ನಮ್ಮ ಕಣ್ಣೆದುರಿಗೆ ನಡೆಯುತ್ತಿದೆ. ಇಲ್ಲಿ ಜನಿಕ ಬುದ್ಧಿಜೀವಿಗಳು ಕೇವಲ ಮಾತುಗಾರರಾಗದೆ ರಂಗವಾಗಿ ಸಾಮಾನ್ಯ ಜನತೆಯೊಂದಿಗೆ ಬೆರೆತು ನ್ನು ಬುದ್ಧಿಜೀವಿಗಳನ್ನಾಗಿ ರೂಪಿಸುವಲ್ಲಿ ಸೋತಂತಹ ದಲ್ಲಿ ಸಂಘಪರಿವಾರದ ವಿಕೃತಿ ಚಿಂತನೆಗಳು ಆ ಲಿಯಾದ ಜಾಗವನ್ನು ಆಕ್ರಮಿಸಿಕೊಳ್ಳುತ್ತವೆ ಹಾಗೂ ಯಜಮಾನಿಕೆಯನ್ನು ಪ್ರತಿಷ್ಠಾಪಿಸುತ್ತವೆ. ಇಂದು ನಾಯಕ ಹೆಣ್ಣುಮಕ್ಕಳ ಮೇಲೆ ಹಲ್ಲೆ ಮಾಡಿದ ಆ ಗರಿಕ ಯುವಕರು, ಹಿಂದೂ ಸಂಘಟನೆಗಳು ಮತ್ತು ಮಾನ್ಯರು ಆ ದುಷ್ಕೃತ್ಯವನ್ನು ಹಿಂದೂ ಸಂಸ್ಕೃತಿಯ ಹೆಸರಿನಲ್ಲಿ ಪದೇ ಪದೇ ಸಮರ್ಥಿಸಿಕೊಳ್ಳುತ್ತಿರುವುದಕ್ಕೆ ಕಾರಣ ನಮ್ಮೆಲ್ಲರ ಸಾಂಸ್ಕೃತಿಕ ನಿಷ್ಕ್ರಿಯತೆ ಮತ್ತು ಸಿನಿಕತೆ. ನಾವೆಲ್ಲ ಸಾಂಸ್ಕೃತಿಕವಾಗಿ ನಿಷ್ಕ್ರಿಯಗೊಂಡಾಗ ಸಂಘಪರಿವಾರ ಪ್ರೇರಿತ ಬಲು ಸುಲಭವಾಗಿ ಸರಳೀಕೃತಗೊಂಡ ದೇವರುಗಳನ್ನು, ನಂಬಿಕೆಗಳನ್ನು ಒಳಗೊಂಡ ಏಕರೂಪಿ ಕಲ್ಪಿತ ಹಿಂದೂ ಸಂಸ್ಕೃತಿ ಬಂದು ನೆಲೆಯೂರುತ್ತದೆ. ಇಂತಹ ವ್ಯವಸ್ಥೆಯಲ್ಲಿ ಒಂದು ಬಗೆಯ ಒಪ್ಪಿತ ಗುಲಾಮಗಿರಿ ನೆಲೆಗೊಳ್ಳುತ್ತದೆ. ಈ ಗುಲಾಮಗಿರಿ ಧರ್ಮವನ್ನು ಸಾರ್ವಜನಿಕವಾಗಿ ಚರ್ಚೆಯನ್ನು ಆರಂಭಿಸಲು ಪ್ರೇರೇಪಿಸುತ್ತದೆ. ಈ ಬಗೆಯ ಪಟ್ಟಭದ್ರ ನೆಲೆಯಲ್ಲಿ ಚರ್ಚೆಗೊಂಡ ಧಾರ್ಮಿಕತೆಯು ಕಡೆಗೆ ಸನಾತನ ಧರ್ಮಗಳ ಸಂಕೇತಗಳಾಗಿ ರೂಪಗೊಂಡು ಕ್ರಮೇಣವಾಗಿ ಜೀವವಿರೋಧಿ ಸಂಕೇತಗಳಾಗಿ ಬಿಡುತ್ತವೆ. ಆಗಲೇ ಗ್ರಾಮ್ಷಿ ಹೇಳಿದ ಹಾಗೆ ನಮ್ಮ ಕಾಲ ಬುಡದಲ್ಲಿ ನೆಲ ಕುಸಿಯುತ್ತಿದ್ದರೂ ನಾವು ಅದನ್ನು ಅರಿಯಲಾರದಷ್ಟು ಮೈಮರೆತಿರುತ್ತೇವೆ. ಆಗ ಈ ಜೀವ ವಿರೋಧಿ ಕ್ಷುಲ್ಲಕತನದ ಧಾರ್ಮಿಕತೆಯು ಕ್ರಮೇಣವಾಗಿ ಇಡೀ ಸಮಾಜವನ್ನು ವ್ಯಾಪಕವಾಗಿ ಆಕ್ರಮಿಸಿಕೊಂಡು ಬಿಡುತ್ತದೆ. ಇದರ ಸಾಕ್ಷಿಯಾಗಿ ಮಂಗಳೂರಿನಲ್ಲಿ ನಡೆದ ಹಲ್ಲೆಯನ್ನು ಜನತೆಯು ಸಮರ್ಥಿಸಿಕೊಳ್ಳುವಂತಹ ಅನಾಗರಿಕ ಮಾನವವಿರೋಧಿ ವ್ಯವಸ್ಥೆ ಸೃಷ್ಟಿಗೊಂಡಿರುವುದು. ಇಲ್ಲಿ 'ದಯವೇ ಧರ್ಮದ ಮೂಲವಯ್ಯ' ಎಂದು ಹೇಳಿದ ವಚನಕಾರರ ಜೀವಪರ ಮಾತುಗಳು ನಾಮಾವಶೇಷಗೊಳ್ಳುತ್ತವೆ. ಆಗ ಸಮಾಜದಲ್ಲಿ ಪ್ರಗತಿಪರರಾಗುವ ಹಂಬಲ ಮತ್ತು ತುಡಿತ ಕ್ರಮೇಣವಾಗಿ ಕಣ್ಮರೆಯಾಗುತ್ತದೆ.

ಇಂದು ಈ ಬಿಜೆಪಿ ಪಕ್ಷದ ಫ್ಯಾಸಿಸ್ಟ್ ಧೋರಣೆಗೆ, ಅದರ ದಿಕ್ಕು ತಪ್ಪಿದ ಭ್ರಷ್ಟ ಆಡಳಿತಕ್ಕೆ ವ್ಯಾಪಕವಾಗಿ ಖಂಡನೆಗಳು ವ್ಯಕ್ತವಾಗುತ್ತಿದೆ. ಆದರೆ ಈ ಅಸಹನೆ ಒಂದು ಜನಪರ ಚಳವಳಿಯಾಗಿ ರೂಪಿತವಾಗುತ್ತಿಲ್ಲ. ಇದರ ದುರ್ಲಾಭವನ್ನು ಆಡಳಿತ ಪಕ್ಷಗಳು ಮತ್ತು ಸಮಾಜದ ಲುಂಪೆನ್ ಗುಂಪುಗಳು ಸರಿಯಾಗಿಯೇ ದುರುಪಯೋಗಪಡಿಸಿಕೊಳ್ಳುತ್ತವೆ. ನಾಗರಿಕ ಸಮಾಜದ ಈ ನಿಷ್ಕ್ರಿಯತೆಯ ಫಲವಾಗಿಯೇ ಮಂಗಳೂರಿನಲ್ಲಿ ಇಂತಹ ಅನಾಗರಿಕ ಕೃತ್ಯ ನಡೆದರೂ ಇಲ್ಲಿನ ಸೋ ಕಾಲ್ಡ್ ಸಂಭಾವಿತ ಮುಖ್ಯಮಂತ್ರಿ ನಗುತ್ತಲೇ ಸಮಾಧಾನದಿಂದ ಉತ್ತರಿಸುತ್ತಾರೆ. ಇಲ್ಲಿನ ಭ್ರಷ್ಟ ಗೃಹಮಂತ್ರಿಗಳು ಇದೇನು ಅಂತಹ ದೊಡ್ಡ ವಿಷಯವೇ ಎಂಬಂತೆ ಜಾರಿಕೊಳ್ಳುತ್ತಾರೆ. ಈ ಅಧಃಪತನಕ್ಕೆ ನಾವೆಲ್ಲ ನಮ್ಮೊಳಗಿನ ಭಯವನ್ನು, ಹಿಂಜರಿಕೆಯನ್ನು ಮತ್ತು ಸಿನಿಕತನವನ್ನು ಕಿತ್ತೊಗೆಯುವ ಮೂಲಕ ಉತ್ತರಿಸಬೇಕಾಗಿದೆ. ಇಲ್ಲಿ ಗಾಂಧಿ ಹೇಳಿದಂತೆ ಅಹಿಂಸೆಯೆಂದರೆ, ಮಾನವೀಯತೆಯೆಂದರೆ ಹಿಂಸಾಕೃತ್ಯಗಳಲ್ಲಿ ತೊಡಗದಿರುವುದಷ್ಟೇ ಅಲ್ಲ, ಈ ಹಿಂಸೆಯನ್ನು ವಿರೋಧಿಸುವುದು ಸಹ ಅಹಿಂಸೆಯಾಗುತ್ತದೆ. ಇಲ್ಲದಿದ್ದರೆ ಈ ಮೌನವು ಆ ದುಷ್ಕೃತ್ಯದಲ್ಲಿ ಪಾಲ್ಗೊಳ್ಳುವಿಕೆಯ ಲಕ್ಷಣವೂ ಆಗುತ್ತದೆ. ಇಂತಹ ಸಂದರ್ಭದಲ್ಲಿ ನಿರ್ಲಿಪ್ತತೆ ಎಂದರೆ ಮೂಕಸಾಕ್ಷಿಗಳು ಮಾತ್ರವಲ್ಲ ಈ ಹಿಂಸೆಯಲ್ಲಿ ಪಾಲುದಾರರೂ ಸಹ.

• ಬಿ.ಶ್ರೀಪಾದ ಭಟ್

ಚಡ್ಡಿ ರಿಪಬ್ಲಿಕ್

■ ನಹುಷ



ಕೇಸರಿ ಕಿರಾತಕರ ಕಾಮೋನ್ಮಾದ ಮತ್ತು ಹಪ್ತೋತ್ಸಾಹ!!

ಆ ಹುಡುಗ-ಹುಡುಗಿಯರು ಕೈಮುಗಿದು ಕಂಬನಿ ಗರೆಯುತ್ತಿದ್ದರು! "....ಪ್ಲೀಸ್ ಹೊಡೀಬೇಡಿ... ಹೊಡೀಬೇಡಿ... ಬಟ್ಟೆ ಹರೀಬೇಡಿ... ಪ್ಲೀಸ್...." ಅಂತಾ ಅಂಗಲಾಚುತ್ತಿದ್ದರು!! "ನಾವೇನೂ ತಪ್ಪು ಮಾಡಿಲ್ಲ... ಇದು ಬರೀ ಬರ್ತ್‌ಡೇ ಪಾರ್ಟಿ ಅಷ್ಟೇ... ರೇವ್‌ಪಾರ್ಟಿ ಅಲ್ಲ... ಡ್ರಾಗ್ಸ್-ಗಿಗ್ಸ್ ಏನೂ ಇಲ್ಲ... ಅಕ್ರಮ-ಅಶ್ಲೀಲ ಇಲ್ಲೇನೂ ನಡೀತಿಲ್ಲ... ನಮ್ಮನ್ನು ಬಿಟ್ಟುಬಿಡಿ.... ದಮ್ಮಯ್ಯ..." ಎಂದು ಜೀವ ಭಯದಿಂದ ಚೀರಾಡುತ್ತಿದ್ದರು!!

ಆದರೆ ಆ ಆರ್ತ ಆಕ್ರಂದನ ಮಾತ್ರ ಹುಸಿ ಹಿಂದೂತ್ವದ ಅಮಲೇರಿಸಿಕೊಂಡಿದ್ದ ಬೀದಿ ಕಾಮಣ್ಣರಿಗೆ ಕೇಳಿಸಲಿಲ್ಲ. ಹೊಟ್ಟೆ ತುಂಬ ಕುಡಿದು ಹಿಂದೂ ಜಾಗರಣೆಗೆ ಹೊರಟಿದ್ದ ಕಿರಾತಕರಿಗೆ ಅಲ್ಲಿದ್ದ ಹುಡುಗಿಯರೇ ಟಾರ್ಗೆಟ್ ಆಗಿತ್ತು. ಸುಪ್ತ ತೃಷೆ ತೀರಿಸಿಕೊಳ್ಳುವ ಹಠದಿಂದ ಆ ಸಂತೋಷ ಕೂಟದ ಮೇಲೆ ಮುಗಿಬಿದ್ದ ಪುಂಡ-ಪೋಕರಿ- ಪೋಲಿ ಹಿಂದೂ ಪಡೆ ಅಮಾಯಕ ಹುಡುಗೀರ ಹಿಂಡಿ-ಹಿಸುಕಿ ವಿಕೃತಾನಂದ ಪಡೆದು ಕೇಕೆ ಹಾಕುತ್ತಿತ್ತು.

ಪಾಪದ ಹುಡುಗ-ಹುಡುಗೀರ ಮುಖ-ಮೂತಿ ಎನ್ನದೆ "ಛಟಾರ್... ಛಟಾರ್...." ಎಂದು ಬಾರಿಸುತ್ತಿದ್ದರು; ಅವರ ಬಟ್ಟೆ ಬಿಚ್ಚಿಸಿದರು; ತಾವೇ ಹರಿದು- ಹಾಕಿದರು. ಅವರ ಮೊಬೈಲ್-ಬಂಗಾರ-ಹಣ ಎಗರಿಸಿ ಹುಚ್ಚೆದ್ದು ಕುಣಿದರು. ಧರ್ಮ ಜಾಗರಣದ ಪೋಸು ಕೊಡುತ್ತಲೇ ಈ ಕೇಸರಿ ಮೃಗಗಳು ಲೈಂಗಿಕ ದೌರ್ಜನ್ಯ ನಡೆಸಿದರು. ಬಹಿರಂಗವಾಗಿ ತಲುಬು ತೀರಿಸಿಕೊಳ್ಳಲು ಸುಲಿಗೆ ಮಾಡಲು "ಜಾಗರಣ" ವೇದಿಕೆ ಆಗಿತ್ತು! ಹಿಂದೂ ರೌಡಿಗಳು ಮಾಡಿದ ಅವಾಂತರ-ಅತ್ಯಾಚಾರ-ಅನಾಚಾರ-ದುರಾಚರ-ದರೋಡೆ ಹೇಳ ತೀರದಾಗಿತ್ತು.

ಮೊನ್ನೆ ಮಂಗಳೂರಿನ ಹೊರವಲಯದ ಪಡೀಲ್ ಬಳಿಯ ಬಡ್ಲಗುಡ್ಡೆಯ 'ಮಾರ್ನಿಂಗ್ ಮಿಸ್ಟ್ ಹೋಮ್ ಸ್ಟೇ'ನಲ್ಲಿ ಹಿಂದೂ ಜಾಗರಣಾ ವೇದಿಕೆಯ ಗೂಂಡಾಗಳು ಮಾಡಿದ ಧರ್ಮೋದ್ಧಾರದ ಕಾರ್ಯಾಚರಣೆಯಿದು; ಮತ್ತೊಮ್ಮೆ ಮಂಗಳೂರಿನ ಮರ್ಯಾದೆಗೆ ಸಂಘ ಪರಿವಾರ ಮಸಿ ಬಳಿದ ಘೋರ ಪಾತಕವಿದು.



ಅಮಾಯಕರ ಮೇಲೆ ದಾಳಿ ನಡೆಸಿದ ಸುಭಾಷ್ ಪಡಿಲ್ ಮತ್ತು ಗಣೇಶ್ ಜತೆ ಪೊಲೀಸರು

ಬರ್ತ್ ಡೇ ಪಾರ್ಟಿ

ಅಂದು ಶನಿವಾರ (28.7.2012). ಊರ್ವದ ಇವೆಂಟ್ ಮ್ಯಾನೇಜರ್ ರಾಜೇಂದ್ರ ಕುಮಾರ್ ಎಂಬವರ ಮಗ ವಿಜಯ ಕುಮಾರ್‌ನ ಹುಟ್ಟುಹಬ್ಬದ ದಿನ; ಅಂದೇ ವಿಜಯ್ ಮತ್ತವನ ಗೆಳೆಯರ ಸಹಪಾಠಿ ಹುಡುಗಿಯೊಬ್ಬಳದೂ ಬರ್ತ್‌ಡೇ. ಹೀಗಾಗಿ ಎಂಟು ಹುಡುಗರು ಮತ್ತು ಐವರು ಹುಡುಗೀರು ಪಡೀಲ್‌ನ ಹೋಮ್ ಸ್ಟೇ ಬಾಡಿಗೆ ಪಡೆದು ಸಂತೋಷಕೂಟ ಆಯೋಜಿಸಿದ್ದರು. ಸಂಜೆ 6ರ ನಂತರ ಗೆಳೆಯ-ಗೆಳತಿಯರು ಒಬ್ಬೊಬ್ಬರಾಗಿ ಬರತೊಡಗಿದ್ದರು. ಆ ಹುಡುಗ-ಹುಡುಗಿಯರು ಸೌಜನ್ಯ-ಸಂಸ್ಕಾರ-ಸಂಸ್ಕೃತಿಯ ಗೆರೆಯೇನೂ ದಾಟಿರಲಿಲ್ಲ. ದೊಡ್ಡದಾಗಿ ಸಂಗೀತ ಕೂಡ ಹಾಕಿರಲಿಲ್ಲ. ಮಸ್ತಿ ಮಾಡುತ್ತಿರಲಿಲ್ಲ. ನೃತ್ಯವೂ ಇರಲಿಲ್ಲ. ಗಾಂಜಾ-ಮದ್ಯ-ಇನ್ನಾವುದೇ ಅಮಲು ಪದಾರ್ಥ ತಂದಿರಲಿಲ್ಲ. ಊಟದ ಪೊಟ್ಟಣ-ಬಿಯರ್-ಕೋಕಾಕೋಲಾ ಬಿಟ್ಟರೆ ಮತ್ತೇನೂ ಆ ಪಾರ್ಟಿಯಲ್ಲಿ ಇರಲಿಲ್ಲ.



ಹುಡುಗಿಯರು 7.30 ರ ಒಳಗೆ ಊಟ ಮಾಡಿ ಹೋಗುವ ಪ್ಲಾನ್ ಹಾಕಿಕೊಂಡೇ ಬಂದಿದ್ದರು. ಯಾರೂ ಕದ್ದು-ಮುಚ್ಚಿ ಪಾರ್ಟಿಗೆ ಬಂದಿರಲಿಲ್ಲ. ಎಲ್ಲರೂ ಪಾಲಕರ-ಪೋಷಕರ ಅನುಮತಿ ಪಡೆದೇ ಬಂದಿದ್ದರು. ಅವರೆಲ್ಲ ನಗರದ ಸಹ್ಯಾದ್ರಿ-ರೋಷನಿ ನಿಲಯ ಮತ್ತು ಶ್ರೀದೇವಿ ಕಾಲೇಜಿನ ವಿದ್ಯಾರ್ಥಿಗಳು. ಇವರಲ್ಲಿ ಪೊಲೀಸ್ ಆಫೀಸರ್ ಒಬ್ಬರ ಮಗಳೂ ಇದ್ದಳು. ಈ ಯುವಕ-ಯುವತಿಯರ ಗೆಟ್-ಟು-ಗೆದರ್ ಪಡೀಲ್‌ನ ಹೋಮ್ ಸ್ಟೇನಲ್ಲಿ ಅರೇಂಜ್ ಆಗಿರುವುದು ಆ ಭಾಗದ ಹಿಂದೂ ಜಾಗರಣಾ ವೇದಿಕೆಯ ಪುಂಡ ಸುಭಾಷ್ ಪಡೀಲ್ ಎಂಬಾತನ ಕಪಿಸೇನೆಗೆ ಗೊತ್ತಾಗುತ್ತದೆ. ಯುವಕ-ಯುವತಿಯರು ಸೇರುವಲ್ಲಿ, ಪಬ್‌ಗಳ ಮೇಲೆ, ಮಾಲ್‌ಗಳ ಮೇಲೆ, ಸಂತೋಷಕೂಟಗಳ ಮೇಲೆ ದಾಳಿ ಮಾಡಿ ಕಾಸು ಕೀಳುವುದನ್ನೇ ಉಪಕಸುಬಾಗಿ ಮಾಡಿಕೊಂಡು ಜೀವಿಸುತ್ತಿರುವ ರೌಡಿ ಸುಭಾಷ್ ಮಾರ್ನಿಂಗ್ ಮಿಸ್ಟ್ ಮೇಲೆ ದಾಳಿಗೆ ಸ್ಕೆಚ್ ಹಾಕುತ್ತಾನೆ.

ಹೇಯ-ಬರ್ಬರ-ಅಮಾನುಷ ದಾಳಿ

2004 ಜನವರಿ 24 ರಂದು ಮಂಗಳೂರಿನ ಅಮ್ನೇಷಿಯಾ ಪಬ್ ಮೇಲೆ ದಾಳಿ ನಡೆದಿತ್ತಲ್ಲವೇ? ಆ ಆಕ್ರಮಣದ ಸೂತ್ರಧಾರ ಈ ಸುಭಾಷ್ ಪಡೀಲ್. ಆ ದಾಳಿಯ ಬಳಿಕ ಆತನಿಗೆ ಪಬ್-ಬಾರ್-ಮಾಲ್-ಪಾರ್ಟಿ-ಪ್ರೇಮಿಗಳ ಮೇಲೆ ಮಾಡುವ ಆಕ್ರಮಣ ಲಾಭದಾಯಕ ಕಸುಬೆಂಬ "ಧರ್ಮದಂಧೆ" ರಹಸ್ಯ ಅರಿವಾಗಿದೆ. ಮೊನ್ನೆ ಇದೇ ದುರಾಚಾರಕ್ಕಾತ ಅಣಿಯಾಗಿದ್ದ. ಸುಮಾರು 50-60 ಪುಂಡ ಹಿಂದೂ ಹುಡುಗರ ಗ್ಯಾಂಗ್ ಸನ್ನದ್ಧ ಮಾಡಿಕೊಂಡಿದ್ದಾನೆ. ಮುಸ್ಸಂಜೆ ಆಗುವುದನ್ನೇ ಕಾಯುತ್ತ ಕಂಠಪೂರ್ತಿ ಈ ಗ್ಯಾಂಗ್ ಹೆಂಡ ಕುಡಿದುಕೊಂಡು ಉನ್ಮಾದದಿಂದ ತೂರಾಡುತ್ತಿತ್ತು. ಆ ಪಡೀಲ್ ಪಾರ್ಟಿಯಲ್ಲಿ ಕಾಲೇಜು ಹುಡುಗೀರು ಇರುವುದೇ ಇವರಿಗೆಲ್ಲ

ಪಿರ್ಕಿಲೀಸ್ ಪೊಲೀಸರು

ಎಂಥ ವಿಚಿತ್ರ ನೋಡಿ. ಮಲ್ಪೆಯ ಸೇಂಟ್ ಮೇರೀಸ್ ದ್ವೀಪದಲ್ಲಿ ಬಿಜೆಪಿ ಶಾಸಕ ರಘುಪತಿ ಭಟ್ಟನೇ ಖುದ್ದು ನಿಂತು ರೇವ್ ಪಾರ್ಟಿ ಮಾಡಿದಾಗ, ಇದೇ ಕಚ್ಚೆಹರುಕ ಭಟ್ಟ ಕಟ್ಟಿಕೊಂಡ ಹೆಂಡತಿಯ ಸಾವಿಗೆ ಕಾರಣನಾದಾಗ, ಅಸೆಂಬ್ಲಿಯಲ್ಲೇ ಬಿಜೆಪಿ ಮಂತ್ರಿಗಳು ಬ್ಲೂಫಿಲ್ಮ್ ನೋಡುತ್ತಿದ್ದಾಗ ಹಿಂದೂ ಪರಿವಾರ ಕಲ್ಲಡ್ಕ ಭಟ್ಟನಿಗಾಗಲಿ, ಆತ ತಯಾರಿಸಿರುವ ಕುಸಂತಾನದ ಸುಭಾಷ್, ಶರಣ್, ಸತ್ಯಜಿತ್, ಜಗದೀಶ್ ಕಾರಂತ ವಗೈರೆಗಳಿಗೆ ಕಾಡದ ಧರ್ಮದ ದರ್ದು-ನೈತಿಕತೆ ಪಬ್‌ನಲ್ಲಿ ಹುಡುಗಿಯರು ಕುಂತಾಗ, ಹೋಮ್ ಸ್ಟೇನಲ್ಲಿ ಹುಟ್ಟುಹಬ್ಬ ಆಚರಿಸುತ್ತಿದ್ದಾಗ "ಕೆರಳಿದೆ"! ಪುಂಡರಿಗೆ ಹಿಂದೂತ್ವದ ಹುಚ್ಚು ಕೆರಳಿದಾಗ ಮಂಗಳೂರು ಪೊಲೀಸರಿಗೂ ಅದನ್ನು ನಿಯಂತ್ರಿಸಬೇಕೆಂಬ ಕರ್ತವ್ಯಪ್ರಜ್ಞೆ ನೆನಪಾಗಲಿಲ್ಲ.

ಮಂಗಳೂರು ಪೊಲೀಸರ ಚಹರೆ ನೋಡಿದರೆ ಮೊನ್ನಿನ ಹೋಮ್ ಸ್ಟೇ ದಾಳಿ ಪ್ರಾಯೋಜಿಸಿದ್ದು ಸಂಘಪರಿವಾರ ಅಷ್ಟೇ ಅಲ್ಲ, ಆ ಮನುವಾದಿಗಳ ಜತೆ ಮಂಗಳೂರು ಪೊಲೀಸರೂ ಸೇರಿಕೊಂಡಿದ್ದಾರೆಂಬ ಅನುಮಾನ ಎಂಥವರಿಗೂ ಮೂಡುತ್ತದೆ. ಈ ಪೊಲೀಸರಿಗೆ ಮಹಿಳೆಯರ ಮೇಲೆ ದಾಳಿಗಿಳಿದ ಮನುಷ್ಯ ರೂಪದ ಮೃಗಗಳ ಮೇಲೆ ಆಕ್ರೋಶ ಇದ್ದಂತಿಲ್ಲ, ಆದರೆ ಈ ಪಾತಕವನ್ನು ಸಮಾಜದ ಮುಂದೆ ತೆರೆದಿಟ್ಟ ಪತ್ರಕರ್ತರ ಮೇಲೆ ದೊಡ್ಡ ದ್ವೇಷ ಪೊಲೀಸರಿಗೆ ಶುರುವಾಗಿದೆ. ಪೊಲೀಸರ ಕರ್ತವ್ಯ ಭ್ರಷ್ಟತೆ, ವೈಫಲ್ಯಕ್ಕೆ ಸಾಕ್ಷಿಯಾಗಿ ಮಾಧ್ಯಮ ಪ್ರತಿನಿಧಿಗಳು ನಿಂತಿದ್ದಾರೆ.



ಸೀಮಂತ ಕುಮಾರ್ ಸಿಂಗ್

ಸಂಘಪರಿವಾರದ ಕಾರ್ಯಕರ್ತರು ಪಡೀಲ್‌ನಲ್ಲಿ ಮುಸ್ಲಿಮ್ ತರುಣರ ಮೇಲೆ ಹಲ್ಲೆಗೆ ಸನ್ನದ್ಧರಾಗಿದ್ದಾರೆಂಬ ಮಾಹಿತಿ ಮೇರೆಗೆ "ಕಸ್ತೂರಿ" ಟೀವಿಯ ನವೀನ್ ಸೂರಿಂಜೆ ಮತ್ತು ಸ್ಥಳೀಯ "ಸಹಾಯ" ಚಾನೆಲ್‌ನ ಕ್ಯಾಮರಾಮನ್ ಶರಣ್ ಹೋಮ್ ಸ್ಟೇ ಬಳಿ ಹೋಗಿದ್ದರು. ಆದರೆ ಅಲ್ಲಿ ಈ ಪತ್ರಕರ್ತರು ಕಂಡದ್ದು ಭಯಾನಕ ದೃಶ್ಯ. ಹೋಮ್ ಸ್ಟೇ ಬಳಿ ಪಾರ್ಟಿ ಸಂಭ್ರಮದ ಯಾವ ವಾತಾವರಣವೂ ಇರಲಿಲ್ಲ. ಆದರೂ ಈ ಹಿಂದೂ ರೌಡಿಗಳು ಏಕಾಏಕಿ ಹೋಮ್ ಸ್ಟೇಗೆ ನುಗ್ಗಿ ಅನಾಚಾರ ಮಾಡಿದರು.


ತಕ್ಷಣ ಸೂರಿಂಜೆ ಕಂಕನಾಡಿ ಸಿಪಿಐ ರವೀಶ್ ನಾಯಕ್‌ರ 9480805330 ನಂಬರಿಗೆ ಫೋನಾಯಿಸಿದ್ದಾರೆ. ಎರಡೆರಡು ಬಾರಿ ಪ್ರಯತ್ನಿಸಿದ್ದಾರೆ. ಆದರೆ ಫೋನ್ ಕರೆಯನ್ನು ಸಿಪಿಐ ಸ್ವೀಕರಿಸಲಿಲ್ಲ. ಆಗ ಹೆಣ್ಣುಮಕ್ಕಳ ಮೇಲೆ ತುಂಬ ಅಮಾನುಷ-ಅಸಭ್ಯ- ಅಶ್ಲೀಲವಾಗಿ ಸಂಸ್ಕೃತಿಹೀನ ಹಿಂದೂತ್ವವಾದಿ ಗಳು ವರ್ತಿಸುತ್ತಿದ್ದಾಗ ಈ ಇಬ್ಬರು ಪತ್ರಕರ್ತರು ತಡೆಯಲು ಪ್ರಯತ್ನಿಸಿದ್ದಾರೆ. ಆದರೆ ಈ ರಾಕ್ಷಸರ ದೊಡ್ಡ ದಂಡಿನೆದುರು ಅಸಹಾಯಕರಾಗಿದ್ದಾರೆ. ಆಗವರು "ವರದಿಗಾರ" ಕೆಲಸ ಮಾಡಿದ್ದಾರೆ. ತಮ್ಮ ಡ್ಯೂಟಿ ಮಾಡಿದ್ದಾರೆ. ಹಿಂಜಾವೇ ಕಾರ್ಯಕರ್ತರ ಮೃಗೀಯ ಕುಕೃತ್ಯ ನಾಡಿಗೆ ತೋರಿಸಿದ್ದಾರೆ. ಇಂಥ ಸಂದರ್ಭದಲ್ಲೂ ಈ ಇಬ್ಬರು ಪತ್ರಕರ್ತರು ಹಿಂಜಾವೇಯವರು ಮಹಿಳೆಯರೊಂದಿಗೆ ಅಸಹ್ಯವಾಗಿ- ಅಮಾನವೀಯವಾಗಿ ನಡೆದುಕೊಂಡಿದ್ದು ಪ್ರಸಾರ ಮಾಡಿಲ್ಲ. ಈ ಸೂರಿಂಜೆ ಮಂಗಳೂರಿನಲ್ಲಿ ಸೆಕ್ಯುಲರ್ ಪತ್ರಕರ್ತನೆಂದು ಗುರುತಿಸಿ ಕೊಂಡಿರುವ, ಪ್ರಾಮಾಣಿಕ ವೃತ್ತಿವಂತ!

ಆದರೆ ತುಸು ಹೊತ್ತಲ್ಲಿ ಅಲ್ಲಿಗೆ ಬಂದ ಪೊಲೀಸರು ತಮ್ಮ ಕರ್ತವ್ಯ ಮಾಡಲಿಲ್ಲ. ತಕ್ಷಣ ಹೋಮ್ ಸ್ಟೇ ಒಳಗೆ ಹೋಗಿ ಸಂತ್ರಸ್ತರ ರಕ್ಷಿಸುವ, ಪಾತಕಿಗಳ ಮಟ್ಟಹಾಕುವ ಕೆಲಸ ಮಾಡಲಿಲ್ಲ. ಬದಲಿಗೆ ಹೊರಗೇ ನಿಂತು ಚಂದ ನೋಡಿದರು. ಅಂದರೆ ಹಲ್ಲೆಕೋರರಿಗೆ, ಅತ್ಯಾಚಾರಿಗಳಿಗೆ ಪರೋಕ್ಷ ಬೆಂಬಲ ನೀಡಿದರು. ಪೊಲೀಸರ ಈ ಹೇತ್ಲಾಂಡಿತನ, ಪಾತಕಕ್ಕೆ ಸಾಕ್ಷಿ ಪತ್ರಕರ್ತ ಸೂರಿಂಜೆ ಮತ್ತು ಶರಣ. ಹೀಗಾಗಿ ಈ ಇಬ್ಬರ ಮೇಲೆ ಪೊಲೀಸರಿಗೆ ಸಿಟ್ಟು ಬಂದಿದೆ. ತಮ್ಮ ಬಂಡವಾಳ ಬಯಲಾಗಿದೆ ಎಂದು ಹತಾಶರಾಗಿರುವ ಪೊಲೀಸರು ಈ ಇಬ್ಬರು ಮೇಲೆ ಕೇಸು ಜಡಿದು ಮುಯ್ಯಿ ತೀರಿಸಿಕೊಂಡಿದ್ದಾರೆ.

ಮಂಗಳೂರಿನ ಪತ್ರಕರ್ತರಿಗೆ ತದ್ವಿರುದ್ಧವಾಗಿ ನಾಡಿನ ದೃಶ್ಯ ಮಾಧ್ಯಮಗಳು ಹೋಮ್ ಸ್ಟೇ ದಾಳಿ ಹೊತ್ತಲ್ಲಿ ಹುಡುಗಿಯರ ಮೇಲಾದ ಹಲ್ಲೆಯನ್ನು ಮತ್ತೆ-ಮತ್ತೆ ತೋರಿಸಿ ತಮ್ಮ ಟಿಆರ್‌ಪಿ ಹೆಚ್ಚಿಸಿಕೊಳ್ಳುವ ವ್ಯಾಪಾರಿ ಬುದ್ಧಿ ತೋರಿಸಿಕೊಳ್ಳುತ್ತಿವೆ. ಇದೊಂಥರಾ ಅಲ್ಪತನ; ಕಾಳಜಿ ತೋರಿಸುತ್ತಲೇ ಕಾಸು



ಮಾಡಿ ಕೊಳ್ಳುವ ದೀವಾಳಿಕೋರತನ. ಹೀಗೆ ಪದೇ-ಪದೇ ಹಲ್ಲೆಗೀಡಾದ ಹುಡುಗೀರ ತೋರಿಸಿದರೆ ಅವರ ಮನಸ್ಥಿತಿ ಏನಾದೀತು? ಆ ಕುಟುಂಬದ ಪರಿಸ್ಥಿತಿ ಏನು? ಎಂಬುದೂ ಈ ಮಾಧ್ಯಮ ಪ್ರಭೃತಿಗಳಿಗೆ ಅರ್ಥವಾಗುತ್ತಿಲ್ಲವೆ? ಪಾಪಿ ಹಲ್ಲೆಕೋರರನ್ನು ಪದೇ-ಪದೇ ತೋರಿಸೋದು ಬಿಟ್ಟು, ಅವರ ಹಿಂದಿರುವ ಗುರುಗಳನ್ನು ತೋರಿಸೋದನ್ನು ಬಿಟ್ಟು ಅಸಹಾಯಕ ಹುಡುಗಿಯರನ್ನು ಟಿವಿಯಲ್ಲಿ ತೋರಿಸುವ ಟೀವಿ ಚಾನಲ್‌ಗಳ ದುರ್ಬುದ್ಧಿ ಏನೆನ್ನೋದು?



ರಿಸಿತ್ತು.

0 ರಿಂದ 7 ಗಂಟೆ ಹೊತ್ತಿಗೆ ಸುಭಾಷ್ ಪಡೀಲ್ ಪ್ಲುಗುಡ್ಡದ ಹೋಮ್ ಸ್ಟೇಗೆ ನುಗ್ಗಿದೆ. ಅಲ್ಲಿದ್ದ -ಹುಡುಗಿಯರಿಗೆ ಮನಸೋ ಇಚ್ಛೆ ಥಳಿಸಲು ಶಟ್ಟಿಕೊಂಡಿದೆ. ಹುಡುಗೀರೆಲ್ಲ ದಿಗ್ಭ್ರಾಂತರಾಗಿ ಮೇಲಿನ ಕೋಣೆ ಸೇರಿಕೊಂಡಿದ್ದಾರೆ. ಅಲ್ಲಿಗೂ ಯಿಟ್ಟ ಈ ಸೈತಾನರು ಕೋಣೆಯ ಬಾಗಿಲು ದ್ದಾರೆ. ಬರ್ಬರ-ಹೇಯ-ಅಮಾನುಷವಾಗಿ ರನ್ನು ಹೊಡೆದಿದ್ದಾರೆ. ಅವರ ಮೈ-ಮುಖದ ಕೈಹಾಕಿ ಬಟ್ಟೆ ಹಿಡಿದೆಳೆದು ಹರಿದಿದ್ದಾರೆ. ಗಂಡು ಹೊಡೆತ ತಿಂದು ಹೈರಾಣಾಗಿ ಬಿದ್ದಿದ್ದಾರೆ. ದ ತಪ್ಪಿಸಿಕೊಳ್ಳಲು ಒಬ್ಬ ಹುಡುಗಿಯಂತೂ ಹಂಗು ತೊರೆದು-ಮಾನ ಕಾಪಾಡಿಕೊಳ್ಳಲು ಮಹಡಿಯಿಂದ ಕೆಳಗೆ ಹಾರಿದ್ದಾಳೆ.

ಯನ್ನೂ ಬಿಡದೆ ಆ ಪಾರ್ಟಿಯಲ್ಲಿದ್ದ ಅಷ್ಟೂ ಹುಡುಗೀರನ್ನು ಕೋಣೆಯೊಂದರಲ್ಲಿ ತುಂಬಿದ ಹರಾಮಿಗಳು ಒಬ್ಬೊಬ್ಬರದಾಗಿ ಬಟ್ಟೆ ಬಿಚ್ಚಿಸಿ ಗಿಸಿದ್ದಾರೆ; ಓರ್ವ ತರುಣಿಯನ್ನಂತೂ ಭಾಗಶಃ ಮಾಡಲಾಗಿತ್ತು. ಟಿವಿ ಚಾನೆಲ್‌ಗಳಲ್ಲಿ ಕಾಣುವ ಂತಲೂ ಭೀಭತ್ಸವಾಗಿ-ಕಾಮಾಂಧರಾಗಿ ಈ ೇ ಬೀದಿಬಸವಗಳು ಮಹಿಳೆಯರ ಜೊತೆ ದ್ದಾರೆ; ಆ ನಿಷ್ಪಾಪಿ ಹುಡುಗೀರ ಮಾನ-ಪ್ರಾಣ ವಲು ತೀರಿಸಿಕೊಳ್ಳಲು ಹವಣಿಸಿದ್ದಾರೆ!!

ಪೊಲೀಸ್ ಪಾತಕ

ಹೋಮ್ ಸ್ಟೇನಲ್ಲಿ ತಮ್ಮ ಪಾಡಿಗೆ ತಾವು ಹುಟ್ಟುಹಬ್ಬ ಆಚರಿಸುತ್ತಿದ್ದ ಯುವಕ-ಯುವತಿಯರನ್ನು ಹೆಚ್ಚು-ಕಮ್ಮಿ ಒಂದು ತಾಸು ಲೈಂಗಿಕ-ದೈಹಿಕ ಹಿಂಸೆ ಕೊಟ್ಟು ಹಿಂದೂ ಜಾಗರಣಾ ವೇದಿಕೆಯ ಅನೈತಿಕ ಪೊಲೀಸರು ಕಾಡಿದ ನಂತರ ನೈಟ್ ಪೊಲೀಸರು ಬಂದಿದ್ದಾರೆ! ಬಂದವರೇ ತುಂಬ ಹೋಕೇಗೇಡಿಗಳಂತೆ ವರ್ತಿಸಿದ್ದಾರೆ. ಹೋಮ್ ಸ್ಟೇನ ಒಳಗೇನಾಗಿರಬಹುದೆಂಬ ಬಗ್ಗೆ ಈ ಖಾಕಿಗಳಿಗೆ ಕಾಳಜಿಯಾಗಲಿ, ಕರ್ತವ್ಯಪ್ರಜ್ಞೆಯಾಗಲೀ ಇರಲಿಲ್ಲ. ಒಳಗಿರುವವರನ್ನು ರಕ್ಷಿಸಬೇಕೆಂಬ ಕನಿಷ್ಠ ಮನುಷ್ಯತ್ವವೂ ಈ ಪೊಲೀಸರಲ್ಲಿ ಇರಲಿಲ್ಲ. ಕಂಕನಾಡಿ ಇನ್ಸ್‌ಪೆಕ್ಟರ್ ರವೀಶ್ ನಾಯಕ ಹೊರಗೆ ಸೇರಿದ್ದ ಜನರೊಂದಿಗೆ-ತನ್ನ ಪ್ಯಾದೆಗಳೊಂದಿಗೆ ಪಟ್ಟಾಂಗ ಹೊಡೆಯುತ್ತ ನಿಂತಿದ್ದ. ಅಲ್ಲಿ ಹುಡುಗಿಯರ ಮಾನ-ಪ್ರಾಣ ಹರಾಜಾಗುತ್ತಿದ್ದರೆ ಇಲ್ಲಿ ಪೊಲೀಸರು ಉದಾಸೀನದಿಂದಿದ್ದರು.

ಯಾಕೆ ಇಷ್ಟು ತಾತ್ಸಾರ? ತಕ್ಷಣ ಹೋಮ್ ಸ್ಟೇ ಒಳಗೆ ಹೋಗಿ ಹಲ್ಲೆಕೋರರ ತಡೆಯಲು ಪೊಲೀಸರು ಯಾಕೆ ಪ್ರಯತ್ನಿಸಲಿಲ್ಲ? ಯಾಕೆ ಅಮಾಯಕ ತರುಣ-ತರುಣಿಯರ ಬಚಾಯಿಸುವ ಕರ್ತವ್ಯ ಮಾಡಲಿಲ್ಲ? ಮಂಗಳೂರಿನ ಪೊಲೀಸರೇ ಹಾಗೆ. ಚೆಡ್ಡಿಗಳ-ಕೇಸರಿ ಕಿರಾತಕರ ಬಿ-ಟೀಮ್‌ನಂತೆ. ಮತಾಂಧರ-ಕಾಮಾಂಧರ ಕಾವಿ ಶಾಲಿಗೆ ಕೊಡುವ ಗೌರವ ಅಮಾಯಕ ಮಹಿಳೆಯರ ಮಾನ-ಪ್ರಾಣಕ್ಕೆ ಈ ಪೊಲೀಸರು ಕೊಡುವುದಿಲ್ಲ! ಇಲ್ಲಿಯ





ಪೊಲೀಸ್ ಕಮೀಷನರ್ ಸೀಮಂತಕುಮಾರ್ ಸಿಂಗ್ ಎಂಬ ಭ್ರಷ್ಟ ಮತ್ತು ಡೀಸಿ ಚನ್ನಪ್ಪ ಗೌಡ ಕೇಸರೀಕರಣವಾಗಿ ಅದ್ಯಾವುದೋ ಕಾಲವಾಗಿ ಹೋಗಿದೆ. ಇವರಿಗೆಲ್ಲ ಆರೆಸ್ಸೆಸ್ ಡಾನ್ ಕಲ್ಲಡ್ಕ ಪ್ರಭಾಕರ ಭಟ್ಟನೇ ಬಾಸ್. ಆತನ ಮರ್ಜಿ-ಮುಲಾಜಿನಂತೆಯೇ ಇವರ ಆಡಳಿತ; ಆ ಗಲಭೆಕೋರ-ಮನುವಾದಿ ಭಟ್ಟನ ಶಾಲೆಯ ಕಾರ್ಯಕ್ರಮವೊಂದರಲ್ಲಿ ಈ ಗೌಡ-ಸಿಂಗ್ ಕೇಸರಿ ಶಾಲು ಹಾಕಿಕೊಂಡೇ ಕುಂತಿದ್ದರು.

ಈ ಸಿಂಗ್-ಗೌಡರ ಅಧೀನಾಧಿಕಾರಿಗಳು ಸಂಘ ಪರಿವಾರದ ಪಾತಕಿಗಳ ಅನ್ಯಾಯ-ಅನಾಚಾರ-ಅತ್ಯಾಚಾರಕ್ಕೆ ನೆರವಾಗುತ್ತಲೇ ಬಂದಿದ್ದಾರೆ. ಮೊನ್ನೆಯೂ ಅಷ್ಟೇ, ಪಾತಕಿ ಸುಭಾಷ್ ಪಡೀಲ್‌ನ ಹಿಂಜಾವೇ ಗ್ಯಾಂಗಿನ ಹೋಮ್ ಸ್ಟೇ ದಾಳಿಗೆ ಪರೋಕ್ಷ ಬೆಂಬಲ ಪೊಲೀಸರು ಕೊಟ್ಟಿದ್ದರು. ಎಲ್ಲ ಮುಗಿದ ಬಳಿಕ ಬಂಧಿಸುವ ನಾಟಕವಾಡಿದರು. ಸುಭಾಷ್ ಪಡೀಲ್‌ನ ಕಾಮಾಂಧ ಗ್ಯಾಂಗ್ ಏನೋ ಅನಾಹುತಕ್ಕೆ ಹೊಂಚು ಹಾಕಿರುವುದು ಮಂಗಳೂರಿನ ಪತ್ರಕರ್ತರಿಗೆ ಅಂದು ಮಧ್ಯಾಹ್ನವೇ ಗೊತ್ತಾಗಿತ್ತು. ಪತ್ರಕರ್ತರಿಗೆ ಸಿಗುವ ಮಾಹಿತಿ ಅದ್ಯಾಕೆ ಪೊಲೀಸರಿಗೆ ಗೊತ್ತಾಗುವುದಿಲ್ಲ? ಯಾಕೆಂದರೆ ಪಕ್ಕಾ ಚೆಡ್ಡಿ ಗುಂಪೊಂದು ಮಂಗಳೂರು ಪೊಲೀಸ್ ಇಲಾಖೆಯಲ್ಲಿದೆ. ಇವರು ಧರ್ಮದ ಹೆಸರಲ್ಲಿ ಚಟ ತೀರಿಸಿಕೊಳ್ಳುವವರ-ಕಾಸು ಮಾಡಿಕೊಳ್ಳುವವರ-ರೌಡಿಗಿರಿ ಮಾಡುವವರ ಪರ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಇದು ಈ ಹಿಂದಿನ ಹಲವು ಸಂಘಪರಿವಾರದ ದಾಳಿಯಿಂದ ದೃಢಪಟ್ಟಿರುವ ಪೊಲೀಸ್ ಪಾತಕ!!

ಯಾವ ಆ್ಯಂಗಲ್ಲಿನಿಂದ ನೋಡಿದರೂ ಹೋಮ್ ಸ್ಟೇ ದಾಳಿ ಪ್ರಕರಣದಲ್ಲಿ ಪೊಲೀಸರೇ ಪ್ರಮುಖ ಆರೋಪಿಗಳಾಗಿ ಕಾಣಿಸುತ್ತಿದ್ದಾರೆ. ಮಂಗಳೂರು ಪೊಲೀಸರಿಗೆ ಹಿಂಜಾವೇ ದಾಳಿಗೆ ಸಿದ್ಧವಾಗಿರುವ ಬಗ್ಗೆ ಸುಳಿವು ಮೊದಲೇ ಸಿಕ್ಕಿತ್ತು. ದಾಳಿಕೋರರು ಹೋಮ್ ಸ್ಟೇಗೆ ನುಗ್ಗುವ ಮೊದಲೇ ಆ ಪರಿಸರದಲ್ಲಿ ಪೊಲೀಸರು ಹಾಜರಾಗಿದ್ದರು. ಆದರೆ ದಾಳಿ ತಡೆದರೆ ಅದೆಲ್ಲಿ ಚೆಡ್ಡಿ ರಿಪಬ್ಲಿಕ್ ದೊರೆ ಕಲ್ಲಡ್ಕನ ಕೆಂಗಣ್ಣಿಗೆ ತುತ್ತಾಗುತ್ತೇವೋ ಎಂಬ ಭಯ ಈ ಹೇತ್ಲಾಂಡಿ ಪೊಲೀಸರ ಕೈಕಟ್ಟಿ ಹಾಕಿತ್ತು. ಮಂಗಳೂರಲ್ಲಿ ಅನೈತಿಕ ಪೊಲೀಸ್‌ಗಿರಿ ನಡೆಸುವವರು ಅಥವಾ ಕೋಮು ಸೌಹಾರ್ದ ಕದಡುವವರು 65 ಕ್ಕಿಂತ ಹೆಚ್ಚಿಲ್ಲ. ಇವರನ್ನು ಹದ್ದುಬಸ್ತಿನಲ್ಲಿಟ್ಟರೆ ಮಂಗಳೂರಿನ ಶಾಂತಿ-ಸೌಹಾರ್ದತೆಗೆ ಭಂಗ ಬರಲಾರದೆಂದು ಕರಾವಳಿ ಪ್ರಾಂತದ ಐಜಿಪಿಯಾಗಿದ್ದ ಗೋಪಾಲ್ ಹೊಸೂರರೇ ಹೇಳಿದ್ದಾರೆ. ಇದು ಮಂಗಳೂರಿನ ಪೊಲೀಸ್ ಕಮೀಷನರ್ ಸೀಮಂತ್‌ಕುಮಾರ್ ಸಿಂಗ್‌ಗೆ ಗೊತ್ತಿಲ್ಲವಾ? ಗೊತ್ತಿದ್ದೂ ಸಿಂಗ್ ಸಾಹೇಬರು ಸಂಘಪರಿವಾರದ ಸೈತಾನರಿಗೆ ಪರಾರಿಯಾಗಲು ಅವಕಾಶ ಕಲ್ಪಿಸುತ್ತಿದ್ದಾರಷ್ಟೇ!!

'ಸಂಸ್ಕೃತಿ' ಸಂಘರ್ಷ

ಸಾಂಪ್ರದಾಯಿಕ ನಗರಿ ಕುಡ್ಲ (ಮಂಗಳೂರು) ಈಗ ಸಂಕ್ರಮಣ ಸಂದರ್ಭದಲ್ಲಿದೆ. ಕುಡ್ಲ ಯದ್ವಾತದ್ವಾ ಬೆಳೆಯುತ್ತಿದೆ. ಪ್ರಮುಖ ಶಿಕ್ಷಣ ಕೇಂದ್ರವಾಗಿ ದೇಶ-ವಿದೇಶದ ಕಣ್ಣು ಕೋರೈಸುತ್ತಿದೆ; ಎಲ್ಲೆಲ್ಲಿಂದಲೋ ಶಿಕ್ಷಣಾರ್ಥಿಗಳ ದಂಡೇ ಹರಿದುಬರುತ್ತಿದೆ. ಔದ್ಯೋಗೀಕರಣವೂ ಭರದಿಂದ ಸಾಗಿದೆ. ಇಲ್ಲಿನವರು ವಿದೇಶದಲ್ಲಿ-ವಿಶೇಷವಾಗಿ ಗಲ್ಫ್‌ನಲ್ಲಿ-ದೊಡ್ಡ ಸಂಖ್ಯೆಯಲ್ಲಿ ಉದ್ಯೋಗ ಕಂಡುಕೊಂಡಿದ್ದಾರೆ. ಹಣದ ಹೊಳೆಯೇ ಆ ಕಡೆಯಿಂದ ಇತ್ತ ಹರಿದುಬರುತ್ತಿದೆ. ಭೂಗತಲೋಕದ ನಂಟೂ ಈ ನಗರಕ್ಕೆ ಇದ್ದೇ ಇದೆ. ಮಾದಕ ದ್ರವ್ಯ, ನಕಲಿ ನೋಟು, ಹೈಟೆಕ್ ತೊಗಲೋದ್ಯಮ, ಮಾಲ್ ಸಂಸ್ಕೃತಿಗಳೆಲ್ಲ ಕುಡ್ಲದ ಉದ್ದಗಲಕ್ಕೆ ವ್ಯವಸ್ಥಿತವಾಗಿ ವ್ಯಾಪಿಸಿದೆ!

▶12



ಚೆಡ್ಡಿ ರಿಪಬ್ಲಿಕ್"ನಂತಾಗಿರುವ ಮಂಗಳೂರಲ್ಲಿ ಮಹಿಳೆಯರ ಪಹರಣ-ಹಲ್ಲೆ ಹಿಂದೂವಾದಿಗಳಿಂದ ಆಗಿರುವುದು ಇದೇ ೕಸಲ್ಲ. 2009 ರಲ್ಲಿ ಅಮ್ನೇಸಿಯಾ ಪಬ್ ಮೇಲೆ, 2011 ಆಗಸ್ಟ್‌ನಲ್ಲಿ ಂದ ಪಾರ್ಟಿ ಫಂಕ್ಷನ್ ಒಂದರ ಮೇಲೆ ಅನೈತಿಕ ಪೊಲೀಸರು ದಾಳಿ ದ್ದರು. ಈಗ ಹೋಮ್ ಸ್ಟೇ ಮೇಲೆ ಆಕ್ರಮಣವಾಗಿದೆ. ಪರರ ಮನೆ , ಪರಸ್ತ್ರೀ ಮೇಲೆ ಕೈಮಾಡಿ, ಮಾನಭಂಗ ಮಾಡಿ, ಹುಚ್ಚಾಪಟ್ಟೆ ಹಿಂದೂತ್ವ ರಕ್ಷಣೆಯ ಪುಣ್ಯಕಾರ್ಯ ಮಾಡುವ 'ಸಂಸ್ಕೃತಿ'ಯ ಹಸೆಂದರೆ ಆರೆಸ್ಸೆಸ್ 'ಡಾನ್' ಕಲ್ಲಡ್ಕ ಪ್ರಭಾಕರ್ ಭಟ್ಟ! ಈತ

ಈತ ಮಂಗಳೂರಲ್ಲಿ ದೊಂಬಿ-ಮತಾಂಧ ಮಾರಾಮಾರಿಯಲ್ಲಿ ಭಾಗಿಯಾಗಿದ್ದ. ಈ ಹಿಂದೂ ರೌಡಿ ಪ್ರವರ್ಧಮಾನಕ್ಕೆ ಬಂದಿದ್ದು 2005 ರಲ್ಲಿ. ಮಂಗಳೂರಿನ ಕೆ.ಎಸ್. ರಾವ್ ರಸ್ತೆಯಲ್ಲಿರುವ ಸಾಬಿಯೊಬ್ಬರ ಸಾರಿ ಪ್ಯಾಲೇಸ್ ಎಂಬ ಬಟ್ಟೆಯಂಗಡಿಯ ಕೆಲಸಗಾರರ ಮೇಲೀತ ದಾಳಿ ಮಾಡಿದ್ದ. ಆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಹಿಂದೂ-ಮುಸ್ಲಿಮ್ ಸಮುದಾಯದ ಹತ್ತಾರು ತರುಣ-ತರುಣಿಯರು ಒಂದು ಬಸ್ ಮಾಡಿಕೊಂಡು ಟೂರ್ ಹೊರಟಿದ್ದರು. ಆ ಬಸ್ ಈತ ತನ್ನ ಪುಂಡ ಸಹಚರರೊಂದಿಗೆ ಸೇರಿ ಅಡ್ಡಹಾಕಿ ಅದರಲ್ಲಿದ್ದ ಮಹಿಳೆಯರು-ಪುರುಷರನ್ನು ಹೊಡೆದು ರಕ್ತ ಹರಿಸಿದ್ದ. ಅನೈತಿಕತೆಯ ಕತೆ ಕಟ್ಟಿ ಅನೈತಿಕ ಪೊಲೀಸ್‌ಗಿರಿ ತೋರಿಸಿಕೊಂಡಿದ್ದ.

ಸೈತಾನ ಸುಭಾಷ್ ಪಡೀಲ್ ಜಾತಕ!

ಪಬ್ ದಾಳಿಯ ರೂವಾರಿಯೇ ಸುಭಾಷ್ ಪಡೀಲ್. ಅಂದು ಹೆಣ್ಣುಮಕ್ಕಳನ್ನೆಲ್ಲಾ ಈತ ಬರ್ಬರ-ಅಮಾನುಷವಾಗಿ ಹಿಂಸಿಸಿ "ಚಟ" ತೀರಿಸಿಕೊಂಡಿದ್ದ. ಹಫ್ತಾ ಸಿಗದ ಸಿಟ್ಟು ತೀರಿಸಿಕೊಂಡಿದ್ದ. ಜತೆಗೆ ಭಜರಂಗದಳದ ಎದುರಾಳಿಗಳಿಗೆ ತಾಕತ್ತು ತೋರಿಸಿದ್ದ. ಆದರೆ ಶ್ರೀರಾಮ ಸೇನೆಯಲ್ಲಿ ಆತನಿಗೆ ವರಮಾನ ನಿರೀಕ್ಷಿತ ರೀತಿಯಲ್ಲಿ ಬರಲಿಲ್ಲ. ಕಲ್ಲಡ್ಕನ ಕಿರಿಕಿರಿಯೂ ಶುರುವಾಗಿತ್ತು.

ಆದರೆ ಭಜರಂಗ ದಳ-ಶ್ರೀರಾಮ ಸೇನೆಯಲ್ಲಿ ಪಳಗಿದ್ದ ಸುಭಾಷ್ ಪಡೀಲ್ ಹಫ್ತಾ-ಮಾಮೂಲಿ ವಸೂಲಿಯಲ್ಲಿ ನಿಸ್ಸೀಮನಾಗಿ ಹೋಗಿದ್ದ. ಸಣ್ಣ-ಪುಟ್ಟ ವ್ಯಾಜ್ಯ ನಿಕಾಲಿ ಮಾಡಿ ಕಮೀಷನ್ ಹೊಡೆಯುತ್ತಿದ್ದ. ದಸರಾ ಹೊತ್ತಲ್ಲಿ "ಹುಲಿ ವೇಷ" ಪ್ರದರ್ಶನಕ್ಕೆಂದೇ ಈತ ಲಕ್ಷ-ಲಕ್ಷ ಸಂಗ್ರಹಿಸಿ ಸ್ವಾಹಾ ಮಾಡುತ್ತಿದ್ದ. ಇದು ಆತನಿಗೆ ಸಹಚರರಿಂದ ಪ್ರತಿರೋಧ ಎದುರಿಸುವ ಮಟ್ಟಕ್ಕೂ ಹೋಗಿತ್ತು. ಪದವಿನಂಗಡಿಯ ಬಿಲ್ಡರ್ ಸಿರಾಜ್ ಎಂಬಾತನಿಂದ ಒಂದು ಲಕ್ಷ ಪಡೆದಿದ್ದು ಆತನ ಬಗ್ಗೆ ಶ್ರೀರಾಮ ಸೇನೆಯಲ್ಲಿ ಅಸಮಾಧಾನ ಮೂಡಿಸಿತ್ತು. ಸಿರಾಜ್‌ನ ಬಿಹಾರಿ ಕೂಲಿಗಳು ಹಿಂದೂ ಹುಡುಗೀರಿಗೆ ಚುಡಾಯಿಸುತ್ತಾರೆಂದು ಈತ ಕ್ಯಾತೆ ತೆಗೆದಿದ್ದ.


ಈ ನಡುವೆ ಆತನ ಹೆಸರು ಕೆಎಫ್‌ಡಿ ಸಂಘಟನೆಯ ಇಕ್ಬಾಲ್ ಮರ್ಡರ್ ಕೇಸಲ್ಲೂ ಕೇಳಿಬಂದಿತ್ತು. ರಾಜಕೀಯ ಬಲವಿಲ್ಲದ, ಹಫ್ತಾ ವಸೂಲಿಗೆ ಸಹಕಾರಿಯಾಗದ ಶ್ರೀರಾಮ ಸೇನೆಯಲ್ಲಿದ್ದರೆ ಪ್ರಯೋಜನವಿಲ್ಲವೆಂದು ಸುಭಾಷ್ 2011 ರ ಜನವರಿಯಲ್ಲಿ ಹಿಂದೂ ಜಾಗರಣಾ ವೇದಿಕೆ ಸೇರಿಕೊಂಡಿದ್ದ. ಬಿಜೆಪಿ ಸರ್ಕಾರದ ಸೂತ್ರಧಾರ ಕಲ್ಲಡ್ಕ ಭಟ್ಟನ ಕಣ್ಗಾವಲಿನಲ್ಲಿರುವ ಹಿಂಜಾವೇಯಿಂದ ಸುಖ ಬಯಕೆ ಈಡೇರಿಸಿಕೊಳ್ಳಬಹುದೆಂದು ಸುಭಾಷ್ ಅಂದುಕೊಂಡಿದ್ದ. ಹಿಂಜಾವೇ ಸೇರಿದ್ದೇ ತಡ, ಆತ ಮರಳು ಮಾಫಿಯಾ, ಬಡ್ಡಿ ಮಾಫಿಯಾ, ತೊಗಲೋದ್ಯಮ ಮಾಫಿಯಾ, ಮಾಲ್ ದೊರೆಗಳಿಂದ ಮತ್ತು ಮುಸ್ಲಿಮ್ ವ್ಯಾಪಾರಿಗಳಿಂದ, ಬಾರ್, ಪಬ್, ಹೋಮ್ ಸ್ಟೇ, ರೆಸಾರ್ಟ್‌ನವರಿಂದ ಹಫ್ತಾ ಫಿಕ್ಸ್ ಮಾಡಿಕೊಂಡಿದ್ದ.

ಆದರೆ ಐಡೆಂಟಿಟಿ ಕ್ರೈಸಿಸ್ ಆತನನ್ನು ಕಾಡುತ್ತಲೇ ಇತ್ತು. ಈ ನಡುವೆ ಪಡೀಲ್‌ನ ಮಾರ್ನಿಂಗ್ ಮಿಸ್ಟ್ ಹೋಮ್ ಸ್ಟೇನ [illegible] ಈತನಿಗೆ ಭಕ್ಷಿ ಹಾಕುವುದು ನಿಲ್ಲಿಸಿದ್ದ. ಇದೆಲ್ಲದರ ಒಟ್ಟು ಪರಿಣಾಮವೇ ಆತ [illegible] ಹಿಂದೂ [illegible]!! ಇದು ಮಾನಭಂಗ! ಸಂಘಪರಿವಾರದ ಅಸಲೀ ಹಿಂದೂತ್ವ ಹಣೆ?!

ಹುಡುಗಿಯರ ಕೋಮು ಬೆರಕೆಯ ಕಾಮುಕರ ಜಾಲ ಬಯಲು ಮಾಡಿರುವ ಶರಣ್ ಪಂಪ್‌ವೆಲ್, ಪ್ರಸಾದ್ ಅತ್ತಾವರ್, ಸತ್ಯಜಿತ್, ಸುಭಾಷ್ ಪಡೀಲ್..... ಹೀಗೆ ಒಬ್ಬೊಬ್ಬರದು ಒಂದೊಂದು ರೀತಿಯ ಅತ್ಯಾಚಾರ-ಅನಾಚಾರ-ಅನಾಹುತ! ಎಲ್ಲರೂ ಗೋಪ್ರಾಣ-ಸ್ತ್ರೀ ಪ್ರಾಣವನ್ನೇ ಬಂಡವಾಳ ಮಾಡಿಕೊಂಡು ಕಾಮನೆ ಈಡೇರಿಸಿಕೊಳ್ಳುತ್ತಿರುವ ಪರಮ ಪಾತಕಿಗಳು.


ಸುಭಾಷ್ ಪಡೀಲ್ ಈಗ ಪ್ರಳಯಾಂತಕ ಕಮ್ಯುನಲ್ ಪಾಪಿಯಾಗಿ ಪ್ರವರ್ಧಮಾನಕ್ಕೆ ಬಂದಿರುವ ಸುಭಾಷ್ ಪಡೀಲ್ ಹಿಂದೂ ಹೀರೋಯಿಸಂ-ಹಣ-ಹೆಣವಲಿಗಾಗಿ ಮಾಡದ

ದಿನಗಳೆದಂತೆ ಭಜರಂಗದಳದಲ್ಲಿ ಈತ ಹಫ್ತಾ ಮತ್ತು ಲೀಡರಿಕೆಗಾಗಿ ಶರಣ ಪಂಪ್‌ವೆಲ್-ಸತ್ಯಜಿತ್ ಮುಂತಾದವರೊಂದಿಗೆ ಪೈಪೋಟಿಗೆ ಬೀಳಬೇಕಾಗಿ ಬಂತು. ಅಲ್ಲಾತನ ಬಲ ಕುಂದಿತು. ಆಗ ಮುತಾಲಿಕನ ಶ್ರೀರಾಮಸೇನೆ



[illegible] ಇಲ್ಲ! 2001 ರ ಹೊತ್ತಲ್ಲಿ ಈತ ಬಿಲಾಗಿಸ್ ಪ್ರದೇಶದಲ್ಲಿ [illegible] ಒಂದೊಂದು ಗುಜರಿ ವ್ಯಾಪಾರ ಮಾಡುತ್ತಿದ್ದ. ಅದು ಹಿಂದೂತ್ವದ [illegible]. ವಿದ್ಯಾರ್ಥಿ, ಈತ ಭಜರಂಗದಳ ಸೇರಿಕೊಂಡು ಕಮ್ಯುನಲ್ [illegible] ಹಿಡುವಳಿದ್ದ. 2002 ರಲ್ಲಿ, ಗೋಧ್ರಾ ಘಟನೆಯಾದಾಗ

ಸೇರಿದ. ಕಲ್ಲಡ್ಕ ಭಟ್ಟನೇ ಸ್ವತಃ ನಿಂತು ಬಿಜೆಪಿ ಸರ್ಕಾರದ ಬಲ ಬಳಸಿ ಶ್ರೀರಾಮ ಸೇನೆ ಮಂಗಳೂರಲ್ಲಿ ತಲೆ ಎತ್ತದಂತೆ ಮಾಡಿದ್ದರಿಂದ ಸುಭಾಷ್ ಪಡೀಲ್ ಆಟ ನಡೆಯಲಿಲ್ಲ. ಆದರೂ ಅದಾಗಲೇ ಆತ ಅಮ್ನೇಸಿಯಾ ಪಬ್ ಮೇಲೆ ಶ್ರೀರಾಮ ಸೇನೆ ಬ್ಯಾನರಿನಡಿ ದಾಳಿ [illegible] ಮಾಡಿದ್ದ. ಈ



ಸುಭಾಸ್ ಪಡೀಲ್, ಗಣೇಶ ಯಾನೆ ಮುನ್ನ, ಶರತ್, ಸಂದೀಪ್ ಶೆಟ್ಟಿ, ತಾರಾನಾಥ ಕಣ್ಣೂರು, ವೇಣುಗೋಪಾಲ, ತಾರಾನಾಥ ಆಳ್ವ, ರಾಜೇಶ್, ಚೇತನ್, ಶೈಲೇಶ್, ಹರೀಶ್, ಸುನಿಲ್, ಪುನಿತ್, ವರುಣ್‌ಪೂಜಾರಿ, ಕಿರಣ್‌ಪೂಜಾರಿ ಬಂಧಿತ ದಾಳಿಕೋರರು

ಕೇಸರಿ ಕಿರಾತಕರ ಕಾಮೋನ್ಮಾದ

▶11

ಈ ಮಾಯಾ ನಗರಿಯಲ್ಲೀಗ ರೆಸಾರ್ಟ್, ಹೋಮ್ ಸ್ಟೇ, ಹೋಟೆಲ್, ಬಾರ್, ಡಿಸ್ಕೋಥೆಕ್, ಚರ್ಮೋದ್ಯಮ ಯುವ ಜನಾಂಗವನ್ನೇ ಗುರಿಯಾಗಿಟ್ಟುಕೊಂಡು ತಲೆಯೆತ್ತಿವೆ. ಇದೇ ವೇಗದಲ್ಲಿ ತರಹೇವಾರಿ ಕೋರ್ಸುಗಳ ಕಾಲೇಜುಗಳು ನಾಯಿಕೊಡೆಯಂತೆ ಹುಟ್ಟಿಕೊಂಡಿವೆ. ಪ್ರತಿಷ್ಠಿತ ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ವೀಕೆಂಡ್ ಪಾರ್ಟಿ, ಬರ್ತ್‌ಡೇ ಪಾರ್ಟಿ, ಆ ಪಾರ್ಟಿ, ಈ ಪಾರ್ಟಿಯೆಂದು ಶನಿವಾರ-ರವಿವಾರದಂದು ಬಾರ್-ಪಬ್- ಹೋಟೆಲ್-ಹೋಮ್ ಸ್ಟೇಗಳಲ್ಲಿ ಜಮೆಯಾಗಿ ಮೋಜು-ಮಸ್ತಿ ನಡೆಸುವುದು ಮಾಮೂಲಾಗಿ ಹೋಗಿದೆ. ಈ "ಬದಲಾವಣೆ"ಯಿಂದಾಗಿ ಹೊಸ ಸಂಸ್ಕೃತಿ ಮತ್ತು ಸ್ಥಳೀಯ ಸಂಪ್ರದಾಯದ ನಡುವೆ ಸಂಘರ್ಷ ಏರ್ಪಟ್ಟಿದೆ. ಸಂಘ ಪರಿವಾರದ ಆರೆಸ್ಸೆಸ್, ಭಜರಂಗದಳ, ಹಿಂಜಾವೇ, ಶ್ರೀರಾಮಸೇನೆಯಂಥ ಉಂಡಾಡಿ ಗುಂಡಣ್ಣರ ಟೀಮುಗಳಿಗೆ ಈ ಸಂಸ್ಕೃತಿ ತಾಕಲಾಟ ಹೊಟ್ಟೆಯುರಿ ಮೂಡಿಸಿದೆ.



ಗಲ್ಫ್ ದುಡ್ಡಿನ ಸಾಬರ ಮಕ್ಕಳ ಅಥವಾ ಹಿಂದೂ ಉಳ್ಳವರ ಮಕ್ಕಳ ದರ್ಬಾರು-ಮಜಾ ಈ ಸಂಘಪರಿವಾರದ ತಂಡಗಳಿಗೆ ಹೊಟ್ಟೆಕಿಚ್ಚು ಮೂಡಿಸಿದೆ. ತಾತ್ವಿಕ-ವೈಚಾರಿಕ ನೆಲೆಗಟ್ಟಿನಲ್ಲಿ ನಡೆಯಬೇಕಿದ್ದ ಸಾಂಸ್ಕೃತಿಕ ಸಂಘರ್ಷವನ್ನು ಆರೆಸ್ಸೆಸ್ ಭೂಗತ ದೊರೆ ಕಲ್ಲಡ್ಕ ಭಟ್ಟ, ಹಿಂಜಾವೇಯ ರಿಂಗ್ ಮಾಸ್ಟರ್ ಜಗದೀಶ್ ಕಾರಂತರಂಥ ಪುರೋಹಿತಶಾಹಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ದಾರಿ ತಪ್ಪಿಸಿಬಿಟ್ಟಿದ್ದಾರೆ. ಸಂಸ್ಕೃತಿ-ಧರ್ಮದ ಹೆಸರಲ್ಲಿ ಹುಂಬರ ಬ್ರೈನ್‌ವಾಶ್ ಮಾಡಿ ಮಸೀದಿ-ಚರ್ಚ್-ಪಬ್-ಹೋಮ್ ಸ್ಟೇಗಳ ಮೇಲೆ ದಾಳಿ ಮಾಡಿಸಿ ಅದರ ದುರ್ಲಾಭ ಪಡೆಯುತ್ತಿದ್ದಾರೆ.


ಇದೇ ಮಂಗಳೂರಿನ ಅಥವಾ ಕರಾವಳಿಯ ನೆಮ್ಮದಿ ನಾಶವಾಗಲು ಪ್ರಮುಖ ಕಾರಣ. ಈ ಹುಸಿ ಸಂಸ್ಕೃತಿ-ಢೋಂಗಿ ಧರ್ಮದ ಸಂಘರ್ಷದ ಬೈಪ್ರಾಡಕ್ಟ್‌ಗಳಾಗಿ ಸತ್ಯಜಿತ್ ರೈ, ಶರಣ್ ಪಂಪ್‌ವೆಲ್, ಪ್ರವೀಣ್ ವಾಳ್ಕೆ, ಪ್ರಸಾದ್ ಅತ್ತಾವರ್, ಅರುಣ ಪುತ್ತಿಲ, ಸುಭಾಷ್ ಪಡೀಲ್, ಸುದತ್ತ ಜೈನ್‌ನಂಥ ಆ್ಯಂಟಿ ಸೋಷಿಯಲ್ ಎಲಿಮೆಂಟ್‌ಗಳು ಅವತರಿಸಿವೆ! ಹಿಂದೂ ಸಂಘಟನೆಗಳೆಂದರೆ ಇವರಿಗೆಲ್ಲ ಹಣ-ಹೆಸರು ಮತ್ತು ದೈಹಿಕ ತೃಷೆ ತೀರಿಸಿಕೊಳ್ಳುವ ಸಾಧನ!! ಇವರನ್ನೆಲ್ಲ ಕಲ್ಲಡ್ಕ ಭಟ್ಟ-ಜಗದೀಶ ಕಾರಂತರಂಥ ಡಾನ್‌ಗಳು ಮತಾಂಧರಾಗಿ ಪಳಗಿಸಿ ಫೀಲ್ಡಿಗೆ ಬಿಟ್ಟಿದ್ದಾರೆ. ಈ ಉಂಡಾಡಿ ಗುಂಡಣ್ಣಗಳಿಗೆ ನಿಶ್ಚಿತ ಉದ್ಯೋಗ-ಜೀವನ ನಿರ್ವಹಣೆಗೆ ನೌಕರಿ ಎಂಬುದಿಲ್ಲ. ಹೀಗಾಗಿ ಬಾರ್-ಪಬ್-ಹೋಮ್ ಸ್ಟೇ- ಮಾಲ್‌ಗಳಿಂದ ಹಫ್ತಾ ವಸೂಲಿ ಮಾಡೋದು; ಬಿಲ್ಡರ್ಸ್, ಲ್ಯಾಂಡ್ ಮಾಫಿಯಾ-ಅಂಡರ್‌ವರ್ಲ್ಡ್‌ನವರ ವ್ಯವಹಾರದಲ್ಲಿ ಕೈಹಾಕಿ ಕಮಿಷನ್ ಹೊಡೆಯೋದು; ಜಾನುವಾರ ಸಾಗಾಣಿಕೆದಾರರ, ಅಂತರ್ಧರ್ಮೀಯ ಪ್ರೇಮಿಗಳ ಬ್ಲಾಕ್‌ಮೇಲ್ ಮಾಡೋದೇ ಜೀವನೋಪಾಯ ದಂಧೆಯಾಗಿ ಹೋಗಿವೆ.

ದಾಳಿಯ ದುರುದ್ದೇಶವೇನು?

ಇತ್ತೀಚೆಗೆ ಈ ಹಿಂದೂ ಪುಂಡರ ನಡುವೆಯೇ ತಿಕ್ಕಾಟ ಆರಂಭವಾಗಿದೆ. ಹಿಂಜಾವೇ ಕಂಡರೆ ಭಜರಂಗ ದಳಕ್ಕೆ ಆಗದು. ಭಜರಂಗದಳ ಎಂದರೆ ಶ್ರೀರಾಮ ಸೇನೆಗೆ ಅಸಹನೆ. ಇವರಿಗೆಲ್ಲ ಆರೆಸ್ಸೆಸ್ ಮೂಲ ಮಠ. ಮೊದಲು ಹಿಂಜಾವೇ ಮಂಗಳೂರಲ್ಲಿ ನೆಲೆ ನಿಲ್ಲಿಸಿದ್ದು ಪ್ರವೀಣ್ ವಾಳ್ಕೆ ಎಂಬ ನಟೋರಿಯಸ್ ಹಿಂದೂವಾದಿಯ ನೇತೃತ್ವದಲ್ಲಿ. ಆ ಗ್ಯಾಂಗ್‌ನಲ್ಲಿ ಹಫ್ತಾ-ಹಿಂದೂ ಹೀರೋಯಿಸಮ್‌ಗಾಗಿ ಜಗಳವಾದಾಗ ಅರುಣ ಪುತ್ತಿಲ, ಪ್ರಸಾದ್ ಅತ್ತಾವರ್, ಸುಭಾಷ್ ಪಡೀಲ್, ಸುದತ್ತ ಜೈನ್ ಮುಂತಾದವರು ತಿರುಗಿಬಿದ್ದು ಶ್ರೀರಾಮಸೇನೆ ಕಟ್ಟಿಕೊಂಡರು. ಇದು ಡಾನ್ ಕಲ್ಲಡ್ಕ ಭಟ್ಟರ ಕಣ್ಣು ಕೆಂಪಾಗಿಸಿತು. ಆತ ಬಿಜೆಪಿ ಸರ್ಕಾರದಲ್ಲಿ ತನಗಿರುವ ಪ್ರಭಾವ ಬಳಸಿ ಬಂಡಾಯಗಾರರನ್ನು ಹಣಿದು ಹಾಕಿದ. ಪ್ರಸಾದ್ ಅತ್ತಾವರ್‌ಗೆ ಭೂಗತ ದೊರೆ ರವಿ ಪೂಜಾರಿ ಜೊತೆಗಿನ ಸಖ್ಯವನ್ನೇ ದೊಡ್ಡದು ಮಾಡಿ ಹಣೆಯಲಾಯ್ತು. ಅರುಣ್ ಪುತ್ತಿಲ ಪುತ್ತೂರಿಗಷ್ಟೇ ಸೀಮಿತವಾಗಿ ಹೋದ. ಅಲ್ಲಾತನಿಗೆ ಸದಾನಂದ ಗೌಡ ಕಾಡಿ ಕಂಗೆಡಿಸಿಬಿಟ್ಟರು. ಸುದತ್ತ ಜೈನ್ ಕಾರ್ಮಿಕ ಸಂಘ ಕಟ್ಟಿಕೊಂಡು ಸಂಘ ಪರಿವಾರದ ಜತೆಗಿನ ಪೈಪೋಟಿ ನಿಲ್ಲಿಸಿದ. ಸುಭಾಷ್ ಪಡೀಲ್ ಮಾತ್ರ ಮೊನ್ನೆ-ಮೊನ್ನೆವರೆಗೂ ಶ್ರೀರಾಮ ಸೇನೆಯಲ್ಲೇ ಇದ್ದ. ಆದರೆ ಹಫ್ತಾ ಈ ಸಂಘಟನೆ ಬಲದಿಂದ ಸಿಗದು, ರಾಜಕೀಯ ಪ್ರಭಾವವೂ ದೊರಕದೆಂದು ಕಲ್ಲಡ್ಕ ಭಟ್ಟ ಕೃಪಾಶೀರ್ವಾದ ಇರುವ ಹಿಂಜಾವೇಗೆ ಕೆಲದಿನಗಳ ಹಿಂದಷ್ಟೇ ಸೇರಿದ್ದ.

ಭಜರಂಗದಳದ ಭೂಪ ಶರಣ್ ಪಂಪ್‌ವೆಲ್ ಮತ್ತು ಸುಭಾಷ್ ಪಡೀಲ್‌ಗೆ ಬದ್ಧ ವೈರತ್ವ! ಪಂಪ್‌ವೆಲ್-ಪಡೀಲ್ ಏರಿಯಾದಲ್ಲಿ ಭಜರಂಗದಳವೇ ಶಕ್ತಿಶಾಲಿ. ಶರಣ್‌ನ ಏಕಸ್ವಾಮ್ಯ ಮುರಿದು ಈ ಪ್ರದೇಶದಲ್ಲಿ ತಾನು ಕಿಂಗ್ ಆಗಬೇಕೆಂಬ ಹಠಕ್ಕೆ ಹಿಂಜಾವೇ ಫಂಟರ್ ಸುಭಾಷ್ ಬಿದ್ದಿದ್ದ. ಅದಕ್ಕೆಂದೇ ಆತ ಮೊನ್ನೆ-ಮೊನ್ನೆ ಹಿಂಜಾವೇ ಘಟಕ ಇಲ್ಲಿ ಕಟ್ಟಿದ್ದ. ಸುತ್ತಲಿನ ಬಾರು-ಹೋಮ್ ಸ್ಟೇ-ಮಾಲ್‌ಗಳಿಂದ ಹಫ್ತಾ ಕೂಡ ಫಿಕ್ಸ್ ಮಾಡಿಕೊಂಡಿದ್ದ. ಹಿಂಜಾವೇ ಯಜಮಾನನೆಂದು ಸುದ್ದಿಯಾಗಬೇಕು-ಎದುರಾಳಿ ಶರಣ್‌ಗೆ ಸೆಡ್ಡು ಹೊಡೆಯಬೇಕು-ಜತೆಗೆ ಕಾಸೂ ಮಾಡಬೇಕೆಂದು ಸುಭಾಷ್ ಪಡೀಲ್ "ಈಶ್ಯೂ"ಗಾಗಿ ಹವಣಿಸಹತ್ತಿದ್ದ. ಈ ಹೊರ ಮಸಲತ್ತಿನ ಒಳಗೆ ಅಡಗಿಕೊಂಡಿರುವುದು ಸುಪ್ತ ಕಾಮನೆ. ಈ ಆಸೆ ಈಡೇರಿಸಿಕೊಳ್ಳಲು ಸುಭಾಷ್ ಪಡೀಲ್‌ಗೆ ಪ್ರಶಸ್ತವಾಗಿ ಕಂಡಿದ್ದೇ ಪಡೀಲ್‌ನ ಮಾರ್ನಿಂಗ್ ಮಿಸ್ಟ್ ಹೋಮ್ ಸ್ಟೇ ಮೇಲೆ ಮುಗಿಬೀಳುವ ಕುತಂತ್ರಗಾರಿಕೆ. ಒಂದು ತಿಂಗಳಿನಿಂದ ಈ ಹೋಮ್ ಸ್ಟೇನವರು ಸುಭಾಷ್‌ಗೆ ಹಫ್ತಾ ಕೊಡುವುದು ನಿಲ್ಲಿಸಿದ್ದರು. ಅದೂ ಆತನನ್ನು ಕೆರಳಿಸಿತ್ತು.

ಕರಾವಳಿಯ ಕೇಸರಿ ರಿಪಬ್ಲಿಕ್‌ನ ಅನಭಿಷಕ್ತ ದೊರೆಯಂತಾಗಿರುವ ಕಲ್ಲಡ್ಕ ಭಟ್ಟನ ಬೆಂಬಲವಿರುವ ಹಿಂಜಾವೇ ಬ್ಯಾನರಿನಲ್ಲಿ ಹೋಮ್ ಸ್ಟೇ ಮೇಲೆ ದಾಳಿಗಿಳಿದರೆ ರಾಜಕೀಯ ರಕ್ಷಣೆ ಸಿಗುತ್ತದೆಂದು ಸುಭಾಷ್ ಲೆಕ್ಕಾಚಾರ ಹಾಕಿಕೊಂಡಿದ್ದ. ಅದು ನಿಜವೂ ಆಯ್ತು. ಆರಂಭದಲ್ಲಿ ದಾಳಿ-ಲೂಟಿ-ಲೈಂಗಿಕ ಹಾವಳಿ-ಹಿಂಸಾಚಾರಗಳನ್ನು ಆತ ನಿರಾತಂಕವಾಗೇ ಮಾಡಿಮುಗಿಸಿದ್ದ. ಆತನ ಎಲ್ಲ ತೀಟೆ ತೀರಿದ ಬಳಿಕವೇ ಕೇಸರಿ ರಿಪಬ್ಲಿಕ್‌ನ ಚಡ್ಡಿ ಪೊಲೀಸರ ಅನಿವಾರ್ಯವಾಗಿ ಬಂಧನದ ಪ್ರಹಸನ ನಡೆಸಬೇಕಾಗಿ ಬಂತು! ಹಫ್ತಾ ಕೊಡದ ಮಾರ್ನಿಂಗ್ ಮಿಸ್ಟ್ ಹೋಮ್ ಸ್ಟೇನಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತದೆಯೆಂದು ಗುಲ್ಲೆಬ್ಬಿಸಿ ದಾಳಿಗಿಳಿದ ಸುಭಾಷ್ ಒಂದೇ ಏಟಿಗೆ ಹಲವು ಸುಪ್ತ ಬಯಕೆ ಈಡೇರಿಕೆಗೆ ಹವಣಿಸಿದ್ದ.



ಈ ಸುಭಾಷ್ ಪಡೀಲ್ ಮಹಿಳೆಯರ ಮೇಲೆ ದಾಳಿ ಮಾಡಿ ಹಿತಾನುಭವ ಪಡೆಯುವುದರಲ್ಲಿ ಪಳಗಿರುವಾತ. 2009 ರ ಜನವರಿ 24 ರಂದು ನಡೆದ ಅಮ್ನೇಸಿಯಾ ಪಬ್ ದಾಳಿಯ ರೂವಾರಿಯೇ ಈ ಅನಾಹುತಕಾರಿ ಪಾಪಿ ಪಿಂಡ! ಅಂದು ಯಡ್ಡಿಯ ಚೆಡ್ಡಿ ಸರ್ಕಾರ ಪ್ರಾಮಾಣಿಕವಾಗಿ ಅಪರಾಧಿಗಳ ಮೇಲೆ ಕಾನೂನು ಬಳಸಿದ್ದರೆ ಇವತ್ತು ಸುಭಾಷ್‌ನಂಥ ಸಮಾಜಘಾತುಕ ಕ್ರಿಮಿಗಳು ಮಂಗಳೂರಲ್ಲಿ ಓಡಾಡುವುದು ಸಾಧ್ಯವಿರಲಿಲ್ಲ. ಅಂದು ಗೂಂಡಾ ಕಾಯ್ದೆಯನ್ನು ಈ ರೌಡಿ ಮೇಲೆ ಪ್ರಯೋಗಿಸಿದ್ದರೆ ಇವತ್ತು ಹೋಮ್ ಸ್ಟೇ ಮೇಲೆ ಆಕ್ರಮಣ ವಾಗುತ್ತಿರಲಿಲ್ಲ. ಮುಗ್ಧ ಮಹಿಳೆಯರ ಮಾನ-ಪ್ರಾಣಕ್ಕೆ ಕಂಟಕ ಬರುತ್ತಿರಲಿಲ್ಲ.

ಪಾತಕಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಸಿಎಂ ಜಗದೀಶ್ ಶೆಟ್ಟರ್ ಮತ್ತು ಗೃಹಮಂತ್ರಿ ಅಶೋಕ್ ವೀರಾವೇಷದಿಂದ ಹೇಳಿದ್ದಾರೆ. ಆದರಿದು ನಂಬೋದು ಕಷ್ಟ. ಏಕೆಂದರೆ ಹಿಂದೆ ಮಂಗಳೂರಿನ ಪಬ್ ಮೇಲೆ ದಾಳಿ ನಡೆದು ಹೆಂಗಸರನ್ನು ನಡುಬೀದಿಯಲ್ಲಿ ಅಟ್ಟಾಡಿಸಿ ಹಿಂಸಿಸಿದಾಗಲೂ ಅಂದು ಸಿಎಂ ಆಗಿದ್ದ ಯಡ್ಡಿ ಹೀಗೇ ಪೌರುಷ ತೋರಿಸಿ... ಆದರೆ ಆರೆಸ್ಸೆಸ್ ಸೂತ್ರಧಾರರ ತಾಳಕ್ಕೆ ತಕ್ಕಂತೆ... ಅಂದು ಕುಣಿದಾಡಿದ್ದರಿಂದಲೇ ಅದೇ ಪಬ್ ದಾಳಿ ದ... ಇವತ್ತು ಹೋಮ್ ಸ್ಟೇ ಮೇಲೆ ಆಕ್ರಮಣ ಮಾಡಿ... ಈಗ ಹೋಮ್ ಸ್ಟೇ ದಾಳಿ ಖಂಡಿಸಿ ಮಾತಾಡು... ಯಡ್ಡಿ ಬಳಗದ 'ಕಳಕಳಿ'ಗೆ ಅರ್ಥವಿದೆಯಾ?

ಈ ಬಾರಿ ಇಡೀ ದಕ್ಷಿಣ ಕನ್ನಡಕ್ಕೆ ಹಿಂದೂವಾ... ಬೂಟಾಟಿಕೆ ಅರ್ಥವಾಗಿ ಹೋಗಿದೆ. ಜನರಿಗೆ ಹಿಂ... ಹರಾಮಿಗಳು ಹುಸಿ ಧರ್ಮ-ಸಂಸ್ಕೃತಿ ನೆಪದಿಂದ ಅಮ... ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಹೊಡೆದು-ಬ... ಮಾನಹರಣ ಮಾಡಿದ್ದರ ಹಿಂದಿನ ಅಸಲಿ... ಅರ್ಥವಾಗಿದೆ. ಹೀಗಾಗಿ ಇಡೀ ಕರಾವಳಿ ಸಂಘ ಪರಿ... ಶನಿಸಂತಾನಕ್ಕೆ ಧಿಕ್ಕಾರ ಕೂಗುತ್ತಿದೆ. ಎಲ್ಲ ಕಾ... ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಕ... ಮಂದಿಯ ಈ "ಎಚ್ಚರ" ಹಾಗೇ ಇದ್ದರಷ್ಟೇ ಅ... ಪೊಲೀಸರ ಅಟ್ಟಹಾಸಕ್ಕೆ ಕಡಿವಾಣ ಬಿದ್ದ... ಆಡಳಿತಗಾರರು ಧರ್ಮ ರಕ್ಷಣೆಯ ಮುಖವಾ... ಪೋಲಿಗಳು-ಹುಲಿಗೆಕೋರರ-ರಕ್ತಪಿಪಾಸು ಪ್ರ... ಪರವಿರುವುದರಿಂದ ಕರಾವಳಿ ಮಂದಿ ತಾವೇ ... ರಕ್ಷಣೆ ಮಾಡಿಕೊಳ್ಳಬೇಕಾಗಿದೆ! ಮಾತೆ-ಮಾತೆ ಎನ... ಮಹಿಳೆಯ ಮೈಮೇಲೆ ಕೈಹಾಕಿರುವ ಸಂಘಪರಿ... ಪಾಪಿಗಳನ್ನು ಮಟ್ಟಹಾಕಬೇಕಿದೆ!

ಒಂದಂತೂ ಖರೆ. ಈ ಬಾರಿ ಕರಾವ... ಸಂಘಪರಿವಾರದ ಸೋಗಲಾಡಿಗಳು ತಮ್ಮಷ್ಟಕ್ಕೆ ... ಎಕ್ಸ್‌ಪೋಸ್ ಆಗಿದ್ದಾರೆ. ಕರಾವಳಿಗಿದು ಶುಭ... ಆದೀತಾ?

ಹೈರಾಣಾಗಿರುವ ಹುಡುಗಿಯರು



ಹೋಮ್ ಸ್ಟೇನ ಬರ್ತ್ ಡೇ ಪಾರ್ಟಿಯಲ್ಲಿದ್ದ ಐವರು ಹುಡುಗೀರು ಶಾಕ್‌ನಿಂದ ಇನ್ನೂ ಚೇತರಿಸಿಕೊಂ... ಏನೂ ತಪ್ಪು ಮಾಡದ ಹಿಂದೂ ಜಾಗರಣಾ ವೇದಿಕೆಯ ಬೀದಿ ಬಸವಗಳ ಹಲ್ಲೆಯಿಂದ ತತ್ತರಿಸಿಹೋಗಿ... ಹುಡುಗೀರು ದೈಹಿಕ ಹಲ್ಲೆ ಅಪಮಾನ, ಟಿವಿಗಳಲ್ಲಿ ಕೆಟ್ಟದಾಗಿ ತೋರಿಸುತ್ತಿರುವ ಪರಿಯಿಂದ ತೀವ್ರ ಆಘಾತಗೊಂಡಿ...

ಒಬ್ಬ ಹುಡುಗಿಗೆ ಆ ಪಾರ್ಟಿಗೆ ಹೋಗುವ ಮನಸ್ಸಿರಲಿಲ್ಲ. ಆಕೆಯ ತಾಯಿಯೇ ಒತ್ತಾಯದಿಂದ ಬಿಟ್ಟುಬಂದಿ... ಆಕೆಗಲ್ಲಿ ಆಗಿದ್ದು ಮಾನಹಾನಿ, ಹಿಂಸೆ, ಸಂಭ್ರಮದ ಬದಲಾಗಿ ಸಂಕಟ. ಮತ್ತೊಬ್ಬಳು ಮಾಧ್ಯಮದವರ ಎ... ಸಂಘಪರಿವಾರದ ರೌಡಿಯಿಂದ ಕೆನ್ನೆಗೆ ಏಟು ತಿಂದಿದ್ದಾಳೆ. ಹೆತ್ತವರೇ ಮಕ್ಕಳನ್ನು ಹೊಡೆಯುವಾಗ ಹಿಂದೆ-ಮ... ನೋಡುವಾಗ ಈ ಬೇವರ್ಸಿಗೆ ಪರಸ್ತ್ರೀ ಮೇಲೆ ಕೈಮಾಡುವ ಅಧಿಕಾರ ಹೇಗೆ ಬಂತು? ಆ ಹುಡುಗಿಯ ... ಮೇಲೆ ಕೈಬೆರಳಿನ ಅಚ್ಚು ಮೂಡಿತ್ತು. ಅಷ್ಟೇ ಅಲ್ಲ, ಆಕೆಯ ಕಿವಿ ತಮ್ಮಟೆಗೂ ಧಕ್ಕೆಯಾಗಿದೆ. ಇದು ಸರಿಹೋ... ಮೂರ್ನಾಲ್ಕು ತಿಂಗಳುಗಳೇ ಬೇಕೆಂದು ವೈದ್ಯರು ಹೇಳಿದ್ದಾರೆ. ಆ ಹುಡುಗಿಗೆ ಹೊಡೆದವನು ಈ ದಾ... ರೂವಾರಿ ಸುಭಾಷ್ ಪಡೀಲ್‌ನ ಖತರ್‌ನಾಕ್ ಬಂಟ ಕಾಟಿಯಾನೆ ಮುನ್ನ ಗಣೇಶ್. ಉಳಿದ ಹುಡುಗಿಯರೊಂ... ಕೀಚಕನಂತೆ ವರ್ತಿಸಿದವನೂ ಈತನೇ!


ಮತ್ತೊಬ್ಬಳು ಹುಡುಗಿ ಅದೆಷ್ಟು ಕಂಗಾಲಾಗಿದ್ದಾಳೆಂದರೆ ಒಂದು ಫೋನ್ ಕರೆ ಬಂದರೂ ಬೆಚ್ಚಿಬೀಳು... ಮನೆಯಿಂದ ಹೊರಗೆ ಬರದೇ ಅಪಮಾನದಿಂದ ಕುಗ್ಗಿಹೋಗಿದ್ದಾಳೆ. ಊಟ ತಿಂದಿ ಸರಿಯಾಗಿ ಮಾಡ... ಮಗಳ ಸ್ಥಿತಿ ನೋಡಿ ಹೆತ್ತವರೂ ಊಟ-ತಿಂಡಿ ಬಿಟ್ಟು ಕಣ್ಣೀರು ಸುರಿಸುತ್ತಿದ್ದಾರೆ. 20 ವರ್ಷದಿಂದ ಮಂಗಳ... ನೆಲೆಸಿರುವ ಉತ್ತರ ಭಾರತದ ಮರ್ಯಾದಸ್ಥ ಕುಟುಂಬದ ಹುಡುಗಿಯೊಬ್ಬಳು. ಹೋಮ್ ಸ್ಟೇ ದಾಳಿಯ ಸ... ಆಕೆಯನ್ನು ಹೆತ್ತವರು ಊರಿಗೆ ಕಳಿಸಿದ್ದಾರೆ. ಆಕೆ ಹೋಗುವಾಗ ಗೆಳತಿಯರಿಗೆ "ಇನ್ನು ನನ್ನನ್ನು ಸಂಪರ್ಕಿಸಬ... ಬಹುಶಃ ಈ ಫೋನ್ ನಂಬರ್ ಸಹ ಚಾಲ್ತಿಯಲ್ಲಿರದು. ಆ ಹೋಮ್ ಸ್ಟೇ ದಾಳಿಯಿಂದ ನನ್ನ ಬ... ಕತ್ತಲಾಗಿಹೋಗಿದೆ. ನ್ಯಾಯಕ್ಕಾಗಿ ಹೋರಾಡುತ್ತೇನೆ ಎಂದು ನಾನು ಹೇಳುವುದಿಲ್ಲ. ಅದು ನನ್ನಂಥ ಹುಡುಗಿ... ಸಾಧ್ಯಾನೂ ಇಲ್ಲ. ನನಗಿಂತ ಹೆಚ್ಚು ನನ್ನ ಮನೆಯವರು ನೊಂದಿದ್ದಾರೆ" ಎಂದ್ಹೇಳಿ ವಿದಾಯ ಹೇಳಿದ್ದಾಳೆ.

ಹಿಂದೂ ಹರಾಮಿಗಳ ದುರಾಚಾರದಿಂದ ಆ ಹುಡುಗಿಯ ಶೈಕ್ಷಣಿಕ ಭವಿಷ್ಯವೇ ಈಗ ಡೋಲಾಯಮಾನವಾ... ಹೇ ರಾಮ್... ಹಿಂದೂ ಪುಂಡರಿಗೆ ಮನುಷ್ಯತ್ವದ ಜಾಗರಣೆ ಮಾಡೋ...

ಯಲಬುರ್ಗಾ: ಮುಂದಿನ ಶಾಸಕ ಯಾರು?

ಯಲಬುರ್ಗಾ ತಾಲೂಕಿನ ರಾಜಕಾರಣ ರಂಗೇರ ...ದೆ. ಕಾರಣ ಇಲ್ಲಿನ ರಾಜಕೀಯ ಮುಖಂಡರುಗಳು ...ರೇ ಆದ ಗಿಮಿಕ್‌ಗಳ ಮುಖಾಂತರ ಸರ್ಕಸ್ ಶುರು ...ರುವುದು. ಈಗಾಗಲೆ ಮುಂಬರುವ ವಿಧಾನಸಭಾ ಯನ್ನು ಮತದಾದರು 2008ರಲ್ಲಿ ಹೀನಾಯವಾಗಿ ಸೋಲಿಸಿ ಬೆಂಗಳೂರಿಗೆ ಅಟ್ಟಿದ್ದರು. ಆನಂತರ ನಡೆದ ಲೋಕಸಭೆ ಚುನಾವಣೆಯಲ್ಲೂ ಸೋಲು ರಾಯರೆಡ್ಡಿಯನ್ನು ಶನಿಯಂತೆ ಕಾಡಿತ್ತು. ಮಗ ನವೀನ ರಚ್ಚೆ ಹಿಡಿದುಕೊಂಡು ಕುಂತಿದ್ದಾನೆ. ಆತನ ಆಸೆಗೆ ಹೈಕಮಾಂಡ್ ಆಸರೆಯಾಗುತ್ತಾ ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ.

ಇದೇ ಸಂದರ್ಭದಲ್ಲಿ ಹಾಲಪ್ಪ ಆಚಾರ ತಮ್ಮದೇ



...ಪ್ಪ ಆಚಾರ್ · ಸಿ.ಎಚ್.ಪಾಟೀಲ್ · ಗುಳ್ಳಣ್ಣನವರ್ · ಅಧಿಕಾರಿ · ಸಂಗಪ್ಪ · ಶಿವಪುತ್ರಪ್ಪ · ಶಿವಶಂಕರ್ ದೇಸಾಯಿ · ರಾಯರೆಡ್ಡಿ

...ವಣೆಗೆ ಕಲೆಕ್ಷನ್ ಮಾಡಿಕೊಂಡು ಮನದಲ್ಲೆ ...ನಾಗುವ ಕನಸು ಕಾಣುತ್ತಿರುವವರಿಗೆ ಇಲ್ಲಿ ಲೆಕ್ಕವಿಲ್ಲ. ...ದಲ್ಲದರಿಂದಾಗಿ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ... ಈಗಾಗಲೇ 'ಟಿಕೆಟ್ ವಾರ್' ಭರ್ಜರಿಯಾಗೇ ...ಯುತ್ತಿದೆ. ಕೆಲವರು ಹೊಸದಾಗಿ ಉದಯಿಸಲಿರುವ ...ಕ್ಷತ್ತ ತಮ್ಮ ಚಿತ್ತ ಹರಿಸಿದ್ದಾರೆ. ಹಾಗೆಯೇ ಹಲವರು ...ರರಾಗಿ ಸ್ಪರ್ಧಿಸುವ ತಯಾರಿಯಲ್ಲಿದ್ದಾರೆ. ಒಟ್ಟಿನಲ್ಲಿ ...ಪ್ಪುದಾದರೆ ಯಲಬುರ್ಗಾದಲ್ಲಿ ಚುನಾವಣಾ ಅಖಾಡ ...ಇಂತಹ ಪೈಪೋಟಿ ಈ ಹಿಂದೆ ಯಾವತ್ತೂ ಕಂಡು ...ರಲಿಲ್ಲ. ಈಗ ಈ ತುರುಸಿನ ಪೈಪೋಟಿಯನ್ನು ...ದರೆ ಚುನಾವಣೆ ಸಂದರ್ಭದಲ್ಲಿ ಯಲಬುರ್ಗಾ ...ಕಿನಲ್ಲಿ ಪೊಲಿಟಿಕಲ್ ವಾರ್ ಭಯಾನಕವಾಗಿ ...ಯುವುದರಲ್ಲಿ ಸಂದೇಹವೇ ಇಲ್ಲ ಎನ್ನುವಂತಾಗಿದೆ.

...ಸ ರಾಯರೆಡ್ಡಿಯ ಹೈಟೆಕ್ ಸರ್ಕಸ್

ಯಲಬುರ್ಗಾ ತಾಲೂಕನ್ನು 20 ವರ್ಷಗಳ ಕಾಲ ...ಮುಷ್ಟಿಯಲ್ಲಿಟ್ಟುಕೊಂಡು ಥೇಟ್ ಸರ್ವಾಧಿಕಾರಿ ... ವರ್ತಿಸುತ್ತಿದ್ದ ಬಂಡಲ್ ಬಸವರಾಜ ರಾಯರೆಡ್ಡಿ ಅಧಿಕಾರವಿಲ್ಲದೆ ಈಗ ಹತಾಶನಾಗಿರುವ ರಾಯರೆಡ್ಡಿ ಈಗ ಅಧಿಕಾರವನ್ನು ಮತ್ತೆ ಪಡೆಯಲು ತನ್ನ ಹಿಂದಿನ ಹೈಟೆಕ್ ಐಲನ್ನು ಬದಿಗಿಟ್ಟು ತಾನು ಬದಲಾವಣೆಯಾಗಿ ದ್ದೇನೆಂದು ಡಂಗುರ ಬಾರಿಸುತ್ತಿದ್ದಾನೆ. ಆದರೆ ಇದೆಲ್ಲ ಲೊಳಲೊಟ್ಟೆ ಎಂದು ಇಲ್ಲಿನ ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಬಿಜೆಪಿಯಲ್ಲಿ ಶೀತಲ ಸಮರ

ಇನ್ನು ಬಿಜೆಪಿ ತಾಲೂಕ್ ಘಟಕದಲ್ಲಿ ಎಲ್ಲವೂ ಸರಿ ಇಲ್ಲ. ಇಲ್ಲಿ ಬಿಜೆಪಿ ಟಿಕೆಟಿಗಾಗಿ ಬರೋಬ್ಬರಿ ನಾಲ್ಕು ಜನ ಘಟಾನುಘಟಿಗಳ ನಡುವೆ ಕೋಲ್ಡ್ ವಾರ್ ನಡೆದಿದೆ. ಎಮ್‌ಎಲ್‌ಸಿ ಹಾಲಪ್ಪ ಆಚಾರ, ಬಿಜೆಪಿ ಮುಖಂಡ ಶ್ರೀಪಾದಪ್ಪ ಅಧಿಕಾರಿ, ಬಿಜೆಪಿಯ ಮಾಜಿ ಜಿಲ್ಲಾಧ್ಯಕ್ಷ ಸಂಗಪ್ಪ ಒಕ್ಕಳದ, ಹಾಲಿ ಶಾಸಕ ಈಶಣ್ಣನ ಕುಲಪುತ್ರ ನವೀನಕುಮಾರ ನಡುವೆ ಬಿಜೆಪಿ ಟಿಕೆಟಿಗಾಗಿ ಶೀತಲ ಸಮರ ನಡೆದಿದೆ.

ಅನಾರೋಗ್ಯಕ್ಕೀಡಾಗಿರುವ ಹಾಲಿ ಶಾಸಕ ಈಶಣ್ಣ ಈಗ ಸಕ್ರಿಯ ರಾಜಕಾರಣಕ್ಕೆ ಗುಡ್‌ಬೈ ಹೇಳಿದ್ದಾರೆ. ಆದ್ದರಿಂದ ಪಕ್ಷದ ಟಿಕೆಟ್ ನನಗೆ ಕೊಡಿ ಎಂದು ಅವರ ತಂಡದೊಂದಿಗೆ ಬಿಜೆಪಿ ಟಿಕೆಟಿಗಾಗಿ ಟ್ರೈ ಮಾಡುತ್ತಿದ್ದಾರೆ. ಇಂದಿನ ಕಲುಷಿತ ರಾಜಕಾರಣದಲ್ಲಿ ಒಂದಿಷ್ಟು ಮೌಲ್ಯ ಮತ್ತು ಸಿದ್ಧಾಂತಗಳಿಗೆ ಬದ್ಧರಾಗಿ ನಡೆಯುವ ಮನುಷ್ಯ ಎಂಬ ಹೆಸರು ಹಾಲಪ್ಪನವರಿಗಿದೆ. ಈ ಕಾರಣಕ್ಕೆ ಅವರಿಗೆ ಬಿಜೆಪಿ ಟಿಕೆಟ್ ಸಿಕ್ಕರೆ ಆಶ್ಚರ್ಯವಿಲ್ಲ.

ಶ್ರೀಪಾದಪ್ಪ ಅಧಿಕಾರಿ ಯಲಬುರ್ಗಾ ರಾಜಕಾರಣದ ಹಳೇ ಹುಲಿ. ಇವರು ಈ ಹಿಂದೆ ಮೂರು ಬಾರಿ ಅಸೆಂಬ್ಲಿಗೆ ಸ್ಪರ್ಧಿಸಿ ಸೋತವರು. ಹೀಗಾಗಿ ಇದು ತಮ್ಮ ಜೀವನದ ಕೊನೆ ರಾಜಕೀಯ ಹೋರಾಟ ಎಂಬಂತೆ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವರು ತುದಿ ಗಾಲಿನಲ್ಲಿ ನಿಂತಿದ್ದಾರೆ. ಬಿಜೆಪಿ ಟಿಕೆಟಿಗಾಗಿ ಯಡಿಯೂರಪ್ಪನ ಆಪ್ತ ಸಚಿವರ ಮೂಲಕ ಲಾಬಿ ನಡೆಸುತ್ತಿದ್ದಾರೆ.

ಬಿಜೆಪಿಯ ಜಿಲ್ಲಾಧ್ಯಕ್ಷರಾಗಿ ಪಕ್ಷವನ್ನು ಬಲಿಷ್ಟಗೊಳಿಸಿದ್ದ ಯಲಬುರ್ಗಾ ತಾಲೂಕಿನವರಾದ ಸಂಗಪ್ಪ ಒಕ್ಕಳದ ತಾನೂ ಶಾಸಕನಾಗುವ ಕನಸು ಕಾಣುತ್ತಿದ್ದಾರೆ. ತಮ್ಮ ತಂತ್ರಗಾರಿಕೆಯಿಂದ ಟಿಕೆಟ್ ಬುಟ್ಟಿಗೆ ಹಾಕಿಕೊಳ್ಳಲು ಇನ್ನಿಲ್ಲದ ಕಸರತ್ತಿನಲ್ಲಿದ್ದಾರೆ.

ಜೆಡಿಎಸ್‌ನಲ್ಲಿ ಸಿ.ಎಚ್.ಪಾಟೀಲರ ಅರ್ಭಟ

ಕಳೆದ ಒಂದು ದಶಕದಿಂದ ಜೆಡಿಎಸ್‌ಗೆ ಆಸರೆಯಾಗಿ ನಿಂತಿರುವ ತಾಲೂಕ್ ಜೆಡಿಎಸ್ ಅಧ್ಯಕ್ಷ ಸಿ.ಎಚ್. ಪಾಟೀಲರು 2004 ರಲ್ಲಿ ಅಸೆಂಬ್ಲಿ ಚುನಾವಣೆಗೆ ನಿಂತು ಪರಾಭವಗೊಂಡಿದ್ದರು. ಈಗ ಇವರು ಮತ್ತೊಮ್ಮೆ ಚುನಾವಣಾ ಅಖಾಡಕ್ಕೆ ಧುಮುಕಲು ಸಜ್ಜಾಗಿದ್ದಾರೆ. ಕಳೆದ 10 ವರ್ಷಗಳಿಂದ ಜೆಡಿಎಸ್ ಪಕ್ಷಕ್ಕಾಗಿ ಮಣ್ಣು ಹೊತ್ತಿರುವ ಪಾಟೀಲರ ಆಸೆಗೆ ಅವರ ಪಕ್ಷ ಯಾವ ರೀತಿ ಸ್ಪಂದಿಸುತ್ತದೆ ಎಂಬುದು ಸದ್ಯದ ಕುತೂಹಲ ಪ್ರಶ್ನೆಯಾಗಿದೆ.

ಬಿಎಸ್‌ಆರ್‌ನಲ್ಲಿ ಬೆಲ್ಲದ ಕಸರತ್ತು

ಬಿಎಸ್‌ಆರ್ ಪಕ್ಷ ತಾಲೂಕಿನಲ್ಲಿ ಒಂದು ರೀತಿಯ ಸಂಚಲನ ಮೂಡಿಸುತ್ತಿದೆ. ಈ ಪಕ್ಷದ ನೇತೃತ್ವವನ್ನು ಕುಕನೂರಿನ ಟಿ.ರತ್ನಾಕರ ಹಾಗೂ ವಣಗೇರಿಯ ಶಿವಪುತ್ರಪ್ಪ ಬೆಲ್ಲದ ವಹಿಸಿಕೊಂಡಿದ್ದು ಇವರಿಬ್ಬರು ಪಕ್ಷ ಸಂಘಟನೆಗಾಗಿ ಶ್ರಮಿಸುತ್ತಿದ್ದಾರೆ. ಶಿವಪುತ್ರಪ್ಪನವರಿಗೇ ಟಿಕೆಟ್ ಸಿಗುತ್ತದೆಂದು ಕೇಳಿಬರುತ್ತಿದೆ. ಗಣಿ ಲೂಟಿಯಿಂದ ಬಂದ ಹಣದ ಮೇಲೆ ಕಟ್ಟಲಾಗುತ್ತಿರುವ ಈ ಪಕ್ಷಕ್ಕೆ ತಾಲೂಕಿನ ಜನ ಹೇಗೆ ಸ್ಪಂದಿಸುತ್ತಾರೆಂದು ಈಗಲೇ ಹೇಳಲಾಗುವುದಿಲ್ಲ.

ಶಿವಶಂಕರ ಚಿತ್ತ ಎತ್ತ?

ಪ್ರಾಮಾಣಿಕ ಮತ್ತು ದಕ್ಷ ಶಾಸಕರಾಗಿದ್ದ ದಿವಂಗತ ಲಿಂಗರಾಜ ದೇಸಾಯಿ ಅವರ ಪುತ್ರ ಶಿವಶಂಕರ ದೇಸಾಯಿ 2004ರಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಬಿರುಗಾಳಿ ಎಬ್ಬಿಸಿದ್ದರು. ಅವತ್ತು ಶಿವಶಂಕರ್ ಅವರಿಗೇ ಕಾಂಗ್ರೆಸ್ ಟಿಕೆಟ್ ಸಿಗುತ್ತದೆ ಎಂದು ನಿಶ್ಚಯವಾಗಿತ್ತು. ಆದರೆ ರಾಯರೆಡ್ಡಿ ಎಂಬ 420 ರಾಜಕಾರಣಿ ಜನತಾ ದಳದಿಂದ ಕಾಂಗ್ರೆಸ್‌ಗೆ ವಕ್ಕರಿಸಿದ್ದರಿಂದ ಆತನಿಗೇ ಟಿಕೆಟ್ ಸಿಕ್ಕಿತ್ತು. ಇದರಿಂದ ಕಟ್ಟಾ ಕಾಂಗ್ರೆಸ್ ಕುಳ ಆಗಿದ್ದ ಶಿವಶಂಕರರಿಗೆ ಅನ್ಯಾಯವಾಗಿತ್ತು. ಇಂತಹ ಶಿವಶಂಕರ ಈ ಬಾರಿ ಕಾಂಗ್ರೆಸ್ ಟಿಕೆಟ್ ಪಡೆಯಲಿದ್ದಾರೆ ಎಂಬ ನಿರೀಕ್ಷೆ ಇದೆ. ❖

ಹಿಂದಿ ಚಿತ್ರರಂಗದಲ್ಲಿ ಪಂಜಾಬಿಗಳದ್ದೇ ದರ್ಬಾರು!

ಒಂದು ಪತ್ರ

ರಾಜೇಶ್ ಖನ್ನಾ ಬಗ್ಗೆ 'ಕಂಡಹಾಗೆ' ಲೇಖನ ಓದಿದಾಗ ನನ್ನ ಕಾಲೇಜು ...ಪು ನೆನಪಾದವು. ಅದೂ ಇತ್ತೀಚೆಗೆ ಬ್ಯಾಂಕ್ ನೌಕರಿಯಿಂದ ನಿವೃತ್ತಿಯಾಗಿ ...ಹಾಗಿ ಮನೆಯಲ್ಲಿ ಕುಳಿತಿರುವಾಗ ಈ ಹಳೆಯ ನೆನಪುಗಳು ತುಂಬಾ ...ಮುಮಾನವೆನಿಸುತ್ತವೆ ನಿಜ.


...ನು 1972ರಲ್ಲಿ ಬೆಳಗಾವಿಯಲ್ಲಿ ಬಿ.ಕಾಂ. ಮುಗಿಸಿ ಮುಂಬೈಗೆ ... ಅಲ್ಲಿ ಬ್ಯಾಂಕ್‌ನಲ್ಲಿ ಕೆಲಸಕ್ಕೆ ಸೇರಿದ ಮೇಲೆ ಐದು ಮಹಡಿಗಳಿದ್ದ ... ಬ್ಯಾಂಕ್‌ನ ಮುಖ್ಯ ಕಚೇರಿಯ ಮೂರನೇಯ ಮಹಡಿಯಲ್ಲಿದ್ದ ...ಬೈಯ ಸುಪ್ರಸಿದ್ಧ ಟ್ಯಾಕ್ಸ್ ಮತ್ತು ಲಾ (law) ಫರ್ಮ್‌ಗೆ ಪ್ರಸಿದ್ಧ ... ನಾಯಕ ನಟರೆಲ್ಲಾ ಬರುತ್ತಿದ್ದರು. ಒಂದೇ ಲಿಫ್ಟ್‌ನಲ್ಲಿ ಕೆಲವೊಮ್ಮೆ ಆ ...ಂದಿಗೆ ಮೇಲಿನ ಮಹಡಿಗಳಿಗೆ ಹೋಗುತ್ತಿದ್ದ ಸಂದರ್ಭದಲ್ಲಿ ...ಮೊದಲು ರೋಮಾಂಚನವಾಗುತ್ತಿತ್ತು. ಆದರೆ ನಮ್ಮ ಮಿತ್ರರಾಗಿದ್ದ ... ಫರ್ಮ್‌ನ ಅಧಿಕಾರಿಗಳಿಂದ ಈ ಹಿಂದಿ ಸ್ಟಾರ್ ನಟರುಗಳ ಕಥೆ ...ಕೇಳಿದಾಗ, ಇವರೆಲ್ಲಾ ನಮ್ಮ ದೇಶದ ಕೋಟ್ಯಾಂತರ ಜನರ ಅಭಿಮಾನಕ್ಕೆ ... ಯೋಗ್ಯರೇ? ಎಂಬ ಪ್ರಶ್ನೆ ನನ್ನ ಮನದಲ್ಲೇಳುತ್ತಿತ್ತು. ನಟನಾಕೌಶಲ್ಯ ... ಪಂಜಾಬಿಗಳಲ್ಲಿ ಮಾತ್ರ ಇರುವುದೇ? ಬೇರೆ ರಾಜ್ಯದವರಲ್ಲಿ ಸ್ವಲ್ಪವೂ ...? ಎಂಬ ಗಹನ ಪ್ರಶ್ನೆ ಮನದಲ್ಲಿ ಹಾಯುತ್ತಿತ್ತು.

...ಲೆಗೆ ಜಾತಿ ಅಥವಾ ಭಾಷೆಯ ಮಿತಿ ಇಲ್ಲವೆನ್ನುತ್ತಾರೆ. ಆದರೆ ಹಿಂದಿ ...ಂಗದ ನಾಯಕನಟರ ಮಟ್ಟಿಗೆ ಇದೆಲ್ಲಾ ಸುಳ್ಳಾಗಿದೆ. ಪಂಜಾಬಿ 'ಖತ್ರಿ' ... ಸ್ವಲ್ಪ ಮಟ್ಟಿಗೆ 'ಅರೋರ' ಜಾತಿಗಳ ಕಪಿ ಮುಷ್ಠಿಯಲ್ಲಿ ಇರುವ ...ವುಡ್ ಇತರ ಭಾಷಿಕ ರಾಜ್ಯಗಳ ಪ್ರತಿಭೆಗಳ ಕತ್ತು ಹಿಸುಕುವುದನ್ನು ...ದು ವ್ಯವಸ್ಥಿತವಾಗಿ ಮಾಡುತ್ತಾರೆಂದರೆ ಹೊರಗಿನವರಿಗೆ ಅದು ಗೊತ್ತೇ ...ವುದಿಲ್ಲ. ಇವರ ಕೈಯಿಂದ ಪಠಾಣರು (ಖಾನ್‌ಗಳು) ಪಾರಾಗಿ ಗೆಲ್ಲಲು ... ಹಿಂದಿ ಸಿನಿಮಾದ ಒಟ್ಟು ಪ್ರೇಕ್ಷಕರಲ್ಲಿ ಮುಸ್ಲಿಮರು 30% ಇರುವುದೇ ...ಬಹುದು.

...ಮೂಲತಃ ಪಂಜಾಬ್‌ನಲ್ಲಿ 'ಲಾಲಾ'ಗಳೆಂದು ಕರೆಯಲಾಗುವ 'ಖತ್ರಿ' ... 'ಅರೋರಾ' ಜಾತಿಗಳವರು ಹಣದ ಲೇವಾದೇವಿ (ಮಹಾಜನಿ) ...ಕೊಂಡಿದ್ದವರು. ದೇಶದ ಸ್ವಾತಂತ್ರ್ಯದ ನಂತರ ಪಂಜಾಬ್‌ನ ಉದ್ಯಮ ...ರಗಳನ್ನೆಲ್ಲ ಆವರಿಸಿದರು. ಜೊತೆಗೆ ಹೊಸ ದಿಲ್ಲಿಯ ಮಧ್ಯಮ ...ದ ವ್ಯಾಪಾರಗಳನ್ನು ಬನಿಯಾ ಮತ್ತು ಜೈನರಿಂದ ಕಸಿದುಕೊಂಡು ...ರಾಗಿದ್ದಾರೆ. ಮುಂಬೈಯಲ್ಲಿ ಮಾತ್ರ ಇವರು ಬೇರೆ ಯಾವುದೇ ...ದಲ್ಲಿ ಯಶಸ್ವಿಯಾಗದಿದ್ದರೂ ಕೇವಲ ಬಾಲಿವುಡ್‌ನಲ್ಲಿ ಮಾತ್ರ ಅತ್ಯಂತ ...ಸ್ವಿಯಾಗಿದ್ದಾರೆ. ಇದಕ್ಕೆ ಕಾರಣ ಪಂಜಾಬಿಗಳ ಒಗ್ಗಟ್ಟು ಹಾಗೂ ಕೇವಲ ...ರಿಗೆ ಮಾತ್ರ ಪ್ರೋತ್ಸಾಹ ಕೊಟ್ಟು ಇತರರನ್ನು ಕಡೆಗಣಿಸುವ ಸಂಕುಚಿತ ... ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ರಾಜೇಶ್ ಖನ್ನಾ ಬ್ಯಾಚ್‌ನಲ್ಲಿದ್ದವರೆಲ್ಲಾ ...ರಿಗೆ ಬಂದಿದ್ದರೂ ಅವರ್ಯಾರೂ ಯಶಸ್ವಿಯಾಗದಿರಲು ಕಾರಣವೇನೆಂದರೆ ... ಪಂಜಾಬಿಗಳಾಗಿರಲಿಲ್ಲ!

...ನ್ನೈನಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಹಿಂದಿ ಚಿತ್ರರಂಗಕ್ಕೆ ಅಧಿಕಾಯ ...ರು ತಮಿಳರು ಹಾಗೂ ಮರಾಠಿಗರು. ಆದರೆ ಇಂದು ಅವರ ... ಹುರಾಠಿಗರು ಗಣನೆಗೆ ಇಲ್ಲದಿರಲು ಮೂಲಕಾರಣ ಪಂಜಾಬಿಗಳ ... ಹಾಗೆ ನೋಡಿದರೆ 60–80ರ ದಶಕದಲ್ಲಿ ಹಿಂದಿ ಚಿತ್ರರಂಗದ ... ಕೈಗಾರ್ಯಕರ್‌ಗಳನ್ನು ಜಂಭಗಳೇ ಆಗಿದ್ದರೂ ಚಿತ್ರದ ನಾಯಕರನ್ನಾಗಿ ಯಾವ ಸಿಂಧಿಯೂ ಬರಲಾಗಲಿಲ್ಲ. ರಾಜಸ್ತಾನ, ಹರಿಯಾಣ, ಕಾಶ್ಮೀರದವರು ಪಂಜಾಬಿಗಳಿಗಿಂತ ಹೆಚ್ಚು ಸುಂದರರೂಪಿಗಳಾಗಿದ್ದರೂ ಅವರೆಲ್ಲರಿಗೆ ನಾಯಕ ಪಟ್ಟ ಗಗನಕುಸುಮ. ರಾಜೇಶ್ ಖನ್ನಾ ಖತ್ರಿ ಆಗಿರದೇ ಯಾವುದಾದರೂ ಬೇರೆ ಜಾತಿ ಅಥವಾ ಬೇರೆ ರಾಜ್ಯದವನಾಗಿದ್ದರೆ ಅಥವಾ ಅವನು ಪಂಜಾಬಿ ದಲಿತನಾಗಿದ್ದರೆ ಅವನಿಗೆ ಎಂದಾದರೂ ಸೂಪರ್‌ಸ್ಟಾರ್ ಪಟ್ಟ ಸಿಗಲು ಸಾಧ್ಯವಿತ್ತೇ?

ಬಿಹಾರದ ದಲಿತ ರಾಜಕಾರಣಿ ರಾಮ್‌ವಿಲಾಸ್ ಪಾಸ್ವಾನ್‌ರ ಹ್ಯಾಂಡ್‌ಸಮ್ ಮಗ ಪಂಜಾಬಿಗಳಿಗಿಂತಲೂ ಹೆಚ್ಚು



ಸುಂದರಾಂಗನಾಗಿದ್ದರೂ ಅವನು ಬಾಲಿವುಡ್‌ನಲ್ಲಿ ಹೀರೋ ಆಗಲು ಪ್ರಯತ್ನಿಸಿ ಸೋತಿದ್ದಾನೆ. ಬಿಹಾರದಲ್ಲೂ ಕೇವಲ ಮೇಲ್ಜಾತಿ ಕಾಯಸ್ಥರು ಮಾತ್ರ ಚಿತ್ರರಂಗದಲ್ಲಿ ಯಶಸ್ವಿಯಾಗಿದ್ದು ಅಮಿತಾಬ್ ಬಚ್ಚನ್ ಯಶಸ್ವಿಯಾಗಲು ಕಾರಣವೂ ಅವನು ಅರೆ–ಪಂಜಾಬಿ, ಅರೆ–ಕಾಯಸ್ಥನಾಗಿರುವುದು.

ಇದಕ್ಕೆ ಹೋಲಿಸಿದರೆ ದಕ್ಷಿಣ ಭಾರತದ ಸೂಪರ್‌ಸ್ಟಾರ್‌ಗಳಲ್ಲಿ ಹಿಂದುಳಿದ ಜಾತಿಯವರೇ ಹೆಚ್ಚು. ಕನ್ನಡದಲ್ಲಿ ಒಂದೊಮ್ಮೆ ನಾಯಕನಾಗಿದ್ದ ಶಿವರಾಂ ದಲಿತನಾಗಿದ್ದರೆ ಈಗಿನ ಗಣೇಶ್ ಅರೆ–ನೇಪಾಳಿ. ಹಿಂದಿ ಚಿತ್ರರಂಗದಲ್ಲಿ ಹೀಗೆ ದಲಿತ ಅಥವಾ ನೇಪಾಳಿ ಗೂರ್ಖಾ ಎಂದಾದರೂ ಹೀರೋ ಆಗಲು ಸಾಧ್ಯವೇ? ದಕ್ಷಿಣದ ಸೂಪರ್ ಸ್ಟಾರ್ ಆಗಿರುವ ರಜನೀಕಾಂತ್ ಮರಾಠಿಗನಾಗಿದ್ದರೂ ಮಹಾರಾಷ್ಟ್ರದ ರಾಜಧಾನಿ ಮುಂಬೈಯಲ್ಲೆ ಇರುವ ಬಾಲಿವುಡ್‌ನಲ್ಲಿ ಇವರಿಗೆ ಮಾನ್ಯತೆ ಸಿಗಲಿಲ್ಲ. ಆದರೆ ಅದೇ ಸೋನೂ ಸೂದ್ ತೆಲುಗಿನಲ್ಲಿ ವಿಲನ್ ಆಗಿ ಮಿಂಚಿ ಈಗ ಹಿಂದಿಯಲ್ಲಿ ಯಶಸ್ವಿಯಾಗಲು ಕಾರಣ ಅವನು ಪಂಜಾಬಿಯಾಗಿರುವುದು. 1977–78ರಲ್ಲಿ ಕಮಲಹಾಸನ್ ಪ್ರಥಮ ಹಿಂದಿ ಚಿತ್ರ 'ಏಕ್ ದುಜೆ ಕೆ ಲಿಯೆ' ಸೂಪರ್ ಹಿಟ್‌ನೊಂದಿಗೆ ಬಿರುಗಾಳಿಯಂತೆ ಬಾಲಿವುಡ್‌ಅನ್ನು ಹೊಕ್ಕರೂ ಅಲ್ಲಿ ಪಂಜಾಬಿಗಳ ಹುನ್ನಾರದೊಂದಿಗೆ ಹೆಚ್ಚು ಕಾಲ ಉಳಿಯಲಾಗಲಿಲ್ಲ. ಹಾಗೆ ನೋಡಿದರೆ ಕಮಲಹಾಸನ್ ರಾಜೇಶ್ ಖನ್ನಾನಷ್ಟೇ ಸುಂದರರೂಪಿಯಾಗಿದ್ದು, ಖನ್ನಾಗಿಂತ ಹೆಚ್ಚು ಪ್ರತಿಭಾಶಾಲಿಯಾಗಿದ್ದರೆಂದು ಹಿಂದಿ/ಇಂಗ್ಲಿಷ್ ಮಾಧ್ಯಮಗಳೇ ಆಗ ಒಪ್ಪಿಕೊಂಡಿದ್ದವು. ಆದರೂ ಹಿಂದಿ ಚಿತ್ರರಂಗ ಅವರನ್ನು ಒಪ್ಪಿಕೊಳ್ಳಲಿಲ್ಲವೇಕೆ? ಅವರು ದಕ್ಷಿಣ ಭಾರತೀಯರೆಂದೇ?

ಬಾಲಿವುಡ್‌ನವರ ಹಾಗೂ ಉತ್ತರ ಭಾರತೀಯ ಪ್ರೇಕ್ಷಕರ 'ಆರ್ಯನ್' ಮನೋಸ್ಥಿತಿಯೇ ದಕ್ಷಿಣಾತ್ಯರನ್ನು ತಮ್ಮ ಹೀರೋ ಹಾಗೂ ತಮ್ಮ ರೋಲ್ ಮಾಡೆಲ್ ಎಂದು ಒಪ್ಪಿಕೊಳ್ಳದಂತೆ ಒಂದು ಮಾನಸಿಕ ತಡೆಗೋಡೆ (ಮೆಂಟಲ್ ಬ್ಲಾಕ್) ಸೃಷ್ಟಿಸಿದೆ. (ಬ್ರಿಟಿಷರು ಇದೇ ತಪ್ಪು ಮಾಡಿದ್ದರು. ಉತ್ತರ ಭಾರತದಲ್ಲಿ ಹಲವಾರು ಜನಾಂಗಗಳನ್ನು "ಮಾರ್ಷಲ್ ರೇಸ್" ಅರ್ಥಾತ್ ಯೋಧ ಜನಾಂಗವೆಂದು ಹೆಸರಿಸಿದ್ದರೆ, ಇಡೀ ದಕ್ಷಿಣ ಭಾರತದಲ್ಲಿ ನಮ್ಮ ರಾಜ್ಯದ 'ಕೊಡವರನ್ನು' ಹೊರತುಪಡಿಸಿ ಬೇರೆ ಯಾವುದೇ ಜನಾಂಗವನ್ನು ಮಾರ್ಷಲ್ ರೇಸ್ ಎಂದು ವರ್ಗೀಕರಿಸಲಿಲ್ಲ!) 60ರ ದಶಕದಲ್ಲಿ ಹಿಂದಿ ಚಿತ್ರರಂಗದಲ್ಲಿ ಹೀರೋ ಆಗಿದ್ದ ಗುರುದತ್‌ರು ದಕ್ಷಿಣ ಭಾರತೀಯರಾಗಿದ್ದರೂ ಅವರನ್ನು ಹಿಂದಿಯವರು ಒಪ್ಪಿಕೊಂಡಿದ್ದು ಅವರು ಬಂಗಾಳಿ ಎಂದು ತಪ್ಪಾಗಿ ತಿಳಿದಿದ್ದರಿಂದ. ಕಾರಣ ಗುರುದತ್ತರ ಹಿರಿಯರು ಕರ್ನಾಟಕದವರಾದರೂ ಅವರು ಹುಟ್ಟಿ ಬೆಳೆದಿದ್ದು ಕೊಲ್ಕತ್ತದಲ್ಲಿ. ಇದೇ ತಿಂಗಳು ತೆಲುಗು ಚಿತ್ರ 'ಈಗ' ಭಾರತದಾದ್ಯಂತ ಜಯಭೇರಿ ಬಾರಿಸಿತು. ಆದರೆ ಸುದೀಪನನ್ನು 'ಸೋಲೋ ಹೀರೋ' ಆಗಿ ಯಾವುದಾದರೂ ದೊಡ್ಡ ಬ್ಯಾನರ್‌ನ ಪಂಜಾಬಿ ನಿರ್ಮಾಪಕರು/ನಿರ್ದೇಶಕರು ತಮ್ಮ ಹಿಂದಿ ಚಿತ್ರದಲ್ಲಿ ಎಂದಾದರೂ ತೆಗೆದುಕೊಳ್ಳಲು ಸಾಧ್ಯವೇ? ಅವರ ಆರ್ಯನ್ ಮನೋಸ್ಥಿತಿ ಇದಕ್ಕೆ ಎಂದೂ ಒಪ್ಪಲಾರದು.

ರಾಜೇಶ್ ಖನ್ನಾ ತನ್ನ ಸಹನಟರ ರೋಲ್‌ಗಳನ್ನು ಕಿರಿದುಗೊಳಿಸಿ ತನ್ನ ಪ್ರಾಮುಖ್ಯತೆಯನ್ನು ಚಿತ್ರಕಥೆಯಲ್ಲಿ ಹೆಚ್ಚಿಸಿಕೊಳ್ಳುವುದರಲ್ಲಿ ಕುಖ್ಯಾತಿ ಹೊಂದಿದ್ದನು. ಈಗ ಅವನ ಅಳಿಯ ಅಕ್ಷಯ್ ಕುಮಾರ್ ಸಹ ಅದನ್ನೇ ಅನುಕರಿಸುತ್ತಿದ್ದಾನೆ. ಇತರ ರಾಜ್ಯದ ಹತ್ತು ಪ್ರತಿಭೆಗಳನ್ನು ಕೊಂದು ಒಬ್ಬ ಪಂಜಾಬಿ ಮೇಲೆ ಬರುತ್ತಾನೆ ಎನ್ನುವ ವ್ಯಾಖ್ಯೆ ಹಿಂದಿ ಚಿತ್ರರಂಗದಲ್ಲಿ ಪ್ರಚಲಿತ. ದಿಲ್ಲಿಯಲ್ಲಿ ಸರಕಾರಿ ಆಫೀಸ್‌ಗಳಲ್ಲಿ ಕೆಲಸ ಮಾಡುವವರದೂ ಇದೇ ಅಭಿಪ್ರಾಯ. ಪಂಜಾಬಿಗಳಿದ್ದಲ್ಲಿ ಗುಂಪುಗಾರಿಕೆ ಇರಲೇಬೇಕು. ಈ ವಿಷಯದಲ್ಲಿ ಅವರು ತಮಿಳರನ್ನೂ ಹಿಂದಿಕ್ಕುತ್ತಾರೆ.

ಬಾಲಿವುಡ್‌ನಲ್ಲಿ ಹಿರೋಯಿನ್‌ಗಳಾಗಿ ಮಾತ್ರ ಪಂಜಾಬಿಗಳಿಗಿಂತ ಹೆಚ್ಚಾಗಿ ಇತರೆ ಪ್ರದೇಶದವರೇ ಯಶಸ್ವಿಯಾಗಲು ಕಾರಣವಿದೆ. ಚೆನ್ನಾಗಿ ತಿಂದುಣ್ಣುವ ಪಂಜಾಬಿ ಹುಡುಗಿಯರು ದಪ್ಪ ಎಲುಬುಳ್ಳ ಹೆಣ್ಣುವೇಷದ ಗಂಡಿನಂತೆ ಕಾಣುವುದೇ ಹೆಚ್ಚು. ಅವರ ದಢೂತಿ ಮೈಕಟ್ಟಿನಂತೆ ಅವರ ಸ್ವರವೂ ಗಡಸಾಗಿ ಇರುತ್ತದೆ. ಹಾಗಾಗಿ ಗತ್ಯಂತರವಿಲ್ಲದೇ ಇತರ ಪ್ರದೇಶದ ಹಿರೋಯಿನ್ ಗಳಿಗೆ ಬಾಲಿವುಡ್‌ನಲ್ಲಿ ಅವಕಾಶ ಕೊಡುವುದು ಅನಿವಾರ್ಯವಾಗಿದೆ.

ಇನ್ನು ಹಿಂದಿ ಚಿತ್ರಕಥೆಗಳ ನಾಯಕರ ಪಾತ್ರದ ಹೆಸರುಗಳಿರುವುದು ಯಾವಾಗಲೂ ಮೇಲ್ಜಾತಿ ಕುಲನಾಮಗಳೇ. ಪಂಜಾಬಿ ಖತ್ರಿ ಜಾತಿಯ ಕುಲನಾಮಗಳಾದ – ರಾಜ್ ಮಲ್ಹೋತ್ರಾ, ಖನ್ನಾ, ಕಪೂರ್, ಪುರಿ, ಅರೋರಾ; ಅಥವಾ ಕಾಯಸ್ಥ ಜಾತಿಯ ಕುಲನಾಮಗಳಾದ – ಶ್ರೀವಾಸ್ತವಾ, ಸಿನ್ಹಾ, ಸಕ್ಸೇನಾ, ನಿಗಮ್, ಮಾಥೂರ್; ಅಥವಾ ರಜಪೂತ್ ಕುಲನಾಮಗಳಾದ – ಚವ್ಹಾಣ್, ರಾಥೋಡ್, ಚೌಧರಿ, ಸಿಂಗ್, ಠಾಕೂರ್, ಶೇಖಾವತ್; ಅಥವಾ ಬ್ರಾಹ್ಮಣ ಕುಲನಾಮಗಳಾದ – ಶರ್ಮಾ, ಮಿಶ್ರಾ, ಶುಕ್ಲಾ, ಪಾಂಡೆ, ಚತುರ್ವೇದಿ ಇತ್ಯಾದಿ. ಉತ್ತರ ಭಾರತೀಯ ಬಹುಸಂಖ್ಯಾತ ಹಿಂದುಳಿದ ಜಾತಿಗಳ ಕುಲನಾಮಗಳು ಹೀರೋ ಪಾತ್ರಗಳಿಗೆ ಇದುವರೆಗೂ ... ಬಗ್ಗೆ ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಲಿ.

ಮೋಹನ್ ಎಚ್ ಶೆಟ್ಟಿ, ...

ಲಿಂಗಣ್ಣ ಸತ್ಯಂಪೇಟೆ ನಿಗೂಢ ಕೊಲೆಯ ಹಿಂದೆ ಕಾಣದ ಕೈಗಳು



ಹೈದರಾಬಾದ್ ಕರ್ನಾಟಕದ ಹಿರಿಯ ಶರಣ ಸಾಹಿತಿ, ಪತ್ರಕರ್ತ ಲಿಂಗಣ್ಣ ಸತ್ಯಂಪೇಟೆ ಕಳೆದ ಬುಧವಾರ ಸಾವನ್ನಪ್ಪಿದ್ದಾರೆ. ಆದರೆ ಇದು ಸಹಜ ಸಾವಲ್ಲ; ಒಂದು ನಿಗೂಢ ಸಾವು ಅರ್ಥಾತ್ ಕೊಲೆ. ಈ ಸಾವಿನ ಸನ್ನಿವೇಶವನ್ನು ಗಮನಿಸಿದ ಯಾರಿಗೇ ಆಗಲಿ ಇದು ಕೊಲೆ ಎಂದು ಮೇಲ್ನೋಟಕ್ಕೇ ಗೋಚರಿಸುತ್ತದೆ. ಈ ಕೊಲೆಯ ಹಿಂದೆ ಬಲಾಢ್ಯ ಕೈಗಳು ಕೆಲಸ ಮಾಡಿರುವ ಗುಮಾನಿ ಹೈದರಾಬಾದ್ ಕರ್ನಾಟಕದಾದ್ಯಂತ ದಟ್ಟವಾಗಿ ಹರಡುತ್ತಿದೆ. ಆದರೆ ಗುಲ್ಬರ್ಗ ಪೊಲೀಸರ ಅಭಿಪ್ರಾಯ ಮಾತ್ರ ಇದಕ್ಕೆ ತದ್ವಿರುದ್ಧವಾಗಿದೆ. ಪೊಲೀಸರು ಒಂದು ಚಂದಮಾಮ ಕತೆಯನ್ನು ಹೆಣೆದಿದ್ದಾರೆ. ಆದರೆ ಅದನ್ನು ಶಾಲಾಬಾಲಕರೂ ನಂಬುವ ಸ್ಥಿತಿಯಲ್ಲಿಲ್ಲ.

ಶರಣಬಸವೇಶ್ವರ ಸೈನ್ಸ್ ಕಾಲೇಜಿನ ಲೆಕ್ಚರರ್ ಒಬ್ಬರು ಲಿಂಗಣ್ಣನವರಿಗೆ ಕರೆ ಮಾಡಿ 'ಎಲ್ಲಿದ್ದೀರಿ? ನಿಮ್ಮನ್ನು ಕಾರಿನಲ್ಲಿ ಕರೆದುಕೊಂಡು ಹೋಗುತ್ತೇನೆ' ಎಂದು ಹೇಳಿದರು. ಅದಕ್ಕೆ ಉತ್ತರಿಸಿದ ಲಿಂಗಣ್ಣ ತಾನು ಇಲ್ಲೇ ಹತ್ತಿರದಲ್ಲೇ ಇರುವುದಾಗಿಯೂ, ಇನ್ನು ಐದೇ ನಿಮಿಷದಲ್ಲಿ ಕಾರ್ಯಕ್ರಮದ ಸ್ಥಳಕ್ಕೆ ಹಾಜರಾಗುವುದಾಗಿಯೂ ತಿಳಿಸಿದರು. ಆದರೆ ಲಿಂಗಣ್ಣ 10-15 ನಿಮಿಷವಾದರೂ ಅಲ್ಲಿಗೆ ತಲುಪಲಿಲ್ಲ, ಫೋನ್ ಕರೆಗಳನ್ನೂ ಸ್ವೀಕರಿಸಲಿಲ್ಲ.


ಹೀಗಾಗಿ ಆ ಲೆಕ್ಚರರ್ ಗುಲ್ಬರ್ಗದಲ್ಲಿ ಪ್ರಜಾವಾಣಿಯ ವರದಿಗಾರರಾಗಿರುವ ಲಿಂಗಣ್ಣರ ಮಗ ಶಿವರಂಜನ್ ಅವರಿಗೆ ಫೋನಾಯಿಸಿ ವಿಷಯ ತಿಳಿಸಿದರು. ಶಿವರಂಜನ್ ತಮ್ಮ ಸೋದರರಾದ ಸಂತೋಷ್ ಮತ್ತು ವಿಶ್ವಾರಾಧ್ಯರಿಗೆ ಫೋನ್


ಗಾಬರಿಗೊಂಡು ಶಿವರಂಜನ್ ಕೂಡಲೇ ಬಸವೇಶ್ವರ ದೇವಸ್ಥಾನಕ್ಕೆ ಧಾವಿಸಿದರು. ಅವರ ಆತಂಕಕ್ಕೆ ಕಾರಣ ಲಿಂಗಣ್ಣನವರಿಗೆ 68 ವರ್ಷ ವಯಸ್ಸಾಗಿತ್ತು ಮತ್ತು ಅವರಿಗೆ ಹೃದಯದ ಸಮಸ್ಯೆಯಿತ್ತು, ಆದ್ದರಿಂದ ಏನಾದರೂ ಅನಾರೋಗ್ಯದ ಸಮಸ್ಯೆಯಾಗಿರಬಹುದು ಎಂಬುದು ಅವರ ಆತಂಕವಾಗಿತ್ತು, ಆದರೆ ಆದದ್ದೇ ಬೇರೆ.

ಶಿವರಂಜನ್, ಸಂತೋಷ್ ಮತ್ತು ವಿಶ್ವಾರಾಧ್ಯ ಹಾಗೂ ಇತರ ಬಂಧುಗಳೂ ಸೇರಿ ಬಸವೇಶ್ವರ ದೇವಸ್ಥಾನದ ಆಸುಪಾಸು, ಸುತ್ತಮುತ್ತಲ ರಸ್ತೆಗಳನ್ನೆಲ್ಲಾ ಜಾಲಾಡಿದರು.

ಮತ್ತೇ ಅದೇ ಉತ್ತರ. ಶರಣಬಸವೇಶ್ವರ ಸ... ವಿವಿಧೋದ್ದೇಶ ಸಂಘದ ಬಳಿಯಲ್ಲೇ ಮೊಬ... ಇರುವುದಾಗಿ ತಿಳಿದುಬಂದಿತು. ಆಗ ಸಮಯ 8.30.

ನಂತರ ಜಿಲ್ಲಾ ಉಸ್ತುವಾರಿ ಮಂತ್ರಿ ರಾಜೂ ಗೌಡ... ಗುಲಬರ್ಗ ಐಜಿಪಿ ವಜೀರ್ ಅಹಮದ್ ಅ... ವಿಶ್ವಾರಾಧ್ಯ ಫೋನ್ ಮಾಡಿಸಿ, ಸಹಾಯ ಬೇಡಿ ಪೊ... ಕಚೇರಿಗೆ ಹೋದರು. ಆಗ ಕಚೇರಿಯಲ್ಲಿ ಐಜಿ...





ಲಿಂಗಣ್ಣ ಸತ್ಯಂಪೇಟೆ

ಕೊಲೆಯ ಹಿಂದಿನ ರಹಸ್ಯವೇನು

ಲಿಂಗಣ್ಣ ಸತ್ಯಂಪೇಟೆಯವರು ಪಿ.ಲಂಕೇಶರ ಕಾಲದಲ್ಲಿ ನಮ್ಮ ಪತ್ರಿಕೆಯ ವರದಿಗಾರರಾಗಿದ್ದವರು. ... ಹತ್ತಾರು ವರ್ಷಗಳಿಂದ 'ಬಸವ ಮಾರ್ಗ' ಮತ್ತು 'ಅಗ್ನಿ ಅಂಕುರ' ಎಂಬ ಎರಡು ಮಾಸ ಪತ್ರಿಕೆಗ... ಹೊರತರುತ್ತಿದ್ದರು. ಇದರಲ್ಲಿ ಶರಣರ ನಿಜವಾದ ತತ್ವಗಳ ಬಗ್ಗೆ ಲೇಖನಗಳನ್ನು ಬರೆದು, ಶರಣರ ಸೋಗಿನಲ್ಲಿ... ಇಂದಿನ ಮಠಾಧೀಶರ ನಡವಳಿಕೆಯನ್ನು ಖಂಡತುಂಡವಾಗಿ ಖಂಡಿಸುತ್ತಿದ್ದರು. ಅಲ್ಲದೆ 'ಮನೆಯಲ್ಲಿ ಮಹಾ... ಎಂಬ ವಿಶಿಷ್ಟ ಕಾರ್ಯಕ್ರಮದ ಮೂಲಕ ಬಸವ ತತ್ವಗಳನ್ನು ಜಾತಿಮತಗಳ ಗಡಿಮೀರಿ ಜನಮಾನಸ... ಬಿತ್ತುವ ಕಾರ್ಯ ಕೈಗೊಂಡಿದ್ದರು. ದಿನೇದಿನೇ ಅವರ ವಿಚಾರಗಳು ಜನಪ್ರಿಯಗೊಳ್ಳುತ್ತಿದ್ದಂತೆ ಕೆಲವು ಪಟ್ಟ... ಶಕ್ತಿಗಳಿಂದ ಬೆದರಿಕೆ ಕರೆಗಳು ಬರತೊಡಗಿದ್ದವು. ಈ ಕೊಲೆಯನ್ನು ಈ ಎಲ್ಲಾ ಹಿನ್ನೆಲೆಯಲ್ಲಿ ಪರಿಶೀಲಿಸಬೇ... ಅಗತ್ಯವಿದೆ. ಲಿಂಗಣ್ಣನವರ ನಿಗೂಢ ಸಾವಿನ ಸುದ್ದಿ ಹರಡುತ್ತಿದ್ದಂತೆ ಉತ್ತರ ಕರ್ನಾಟಕದ ನಾನಾ ಗಣ್ಯರು ... ತನಿಖೆಗೆ ಒಕ್ಕೊರಲಿನಿಂದ ಒತ್ತಾಯಿಸಿದ್ದಾರೆ. ಮಾಜಿ ಸಚಿವ ಎಸ್.ಕೆ.ಕಾಂತಾ, ಸುಲಫಲ ಮಠದ ಮಹ... ಶಿವಾಚಾರ್ಯ, ಪ್ರಜ್ಞಾವಂತ ನಾಗರಿಕ ವೇದಿಕೆಯ ಡಾ.ಮೀನಾಕ್ಷಿ ಬಾಳಿ, ದಲಿತ ನಾಯಕ ವಿಠಲ ದೊಡ್ಡ... ರವೀಂದ್ರ ಶಾಬಾದಿ, ಕಬೀರಾನಂದ ಸ್ವಾಮೀಜಿ, ಜಿಲ್ಲಾ ಕಸಾಪ ಅಧ್ಯಕ್ಷ ಮಹಿಪಾಲ ರೆಡ್ಡಿ, ರಾಯಚೂರು ಕ... ಅಧ್ಯಕ್ಷ ರಂಗಣ್ಣ ಪಾಟೀಲ ಅಳ್ಳುಂಡಿ ಹಾಗೂ ಹಲವು ಸಂಘಸಂಸ್ಥೆಗಳ ಮುಖಂಡರು ಜಿಲ್ಲಾಧಿಕಾರಿಯ ಮೇಲೆ ಒ... ಹಾಕಿದ್ದಾರೆ.

ಮೊನ್ನೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜ... ಬಸವ ಪ್ರಶಸ್ತಿ ಪುರಸ್ಕಾರ ಸಮಾರಂಭದಲ್ಲಿ ಗದುಗಿನ ತೋಂಟದ ಸಿದ್ದಲಿಂಗ ಸ್ವಾಮಿಯವರು "ಲಿಂಗಣ್ಣ ಸತ್ಯಂಪೇಟೆಯ... ಸತ್ಯ ನಿಷ್ಠುರರಾಗಿದ್ದ ಕಾರಣಕ್ಕೆ ಅವರನ್ನು ಹತ್ಯೆ ಮಾಡಲಾಗಿದೆ; ಆದ್ದರಿಂದ ಮುಖ್ಯಮಂತ್ರಿ ಈ ಪ್ರಕರಣವನ್ನು ಸಿಬ... ವಹಿಸಬೇಕು" ಎಂದು ಒತ್ತಾಯಿಸಿದ್ದಾರೆ. ಡಾ.ಪಾಟೀಲ ಪುಟ್ಟಪ್ಪನವರು ನಿಜವಾದ ಕೊಲೆಗಾರರನ್ನು ಪತ್ತೆಹಚ್ಚಿ ... ಶಿಕ್ಷೆ ವಿಧಿಸಬೇಕೆಂದು ಮುಖ್ಯಮಂತ್ರಿ ಶೆಟ್ಟರ್‌ರನ್ನು ಒತ್ತಾಯಿಸಿದ್ದಾರೆ.


ಇವರೆಲ್ಲರ ಆಗ್ರಹ ಒಂದೇ. ನಿಜವಾದ ಬಸವ ತತ್ವದ ಪ್ರಚಾರವನ್ನು ಸಹಿಸದ ಕೆಲವು ಪಟ್ಟಭದ್ರ ಶಕ್ತಿಗಳು... ದುಷ್ಕೃತ್ಯದ ಹಿಂದಿದ್ದಾರೆ. ಆದ್ದರಿಂದ ಕೊಲೆಯ ರಹಸ್ಯವನ್ನು ಬಯಲಿಗೆಳೆದು ಅದರ ಹಿಂದಿರುವ ಬಲಾಢ್ಯ ಕೈ... ಕೋಳ ತೊಡಿಸಬೇಕು ಎಂಬುದು ಎಲ್ಲರ ಒಕ್ಕೊರಲಿನ ಆಗ್ರಹ. ಆದರೆ ಕಾವಿಧಾರಿಗಳ ಜೋಳಿಗೆಯಲ್ಲಿ ಲೀನವಾಗಿ... ಈ ಸರ್ಕಾರದಿಂದ ನ್ಯಾಯವನ್ನು ನಿರೀಕ್ಷಿಸಬಹುದೆ?

ಅವತ್ತು ನಡೆದದ್ದೇನು?

ಗುಲ್ಬರ್ಗ ನಗರದ ಶರಣ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಪ್ರತಿವರ್ಷ ಶ್ರಾವಣಮಾಸದಲ್ಲಿ ಶರಣರ ಬಗ್ಗೆ ಉಪನ್ಯಾಸ ಏರ್ಪಡಿಸುವುದು ವಾಡಿಕೆ. ಅದರಂತೆ ಜುಲೈ 25 ರಂದು ಒಂದು ಉಪನ್ಯಾಸ ಕಾರ್ಯಕ್ರಮ ಏರ್ಪಾಟಾಗಿತ್ತು, ಬಸವ ತತ್ವ ಪ್ರಚಾರಕರೆಂದು ಗುರುತಿಸಿಕೊಂಡಿದ್ದ ಲಿಂಗಣ್ಣ ಸಂಘಟಕರ ಆಮಂತ್ರಣದ ಮೇರೆಗೆ ಆ ಸಭೆಯಲ್ಲಿ ಉಪನ್ಯಾಸ ಮಾಡಲು ಒಪ್ಪಿಕೊಂಡಿದ್ದರು. ಅದರಂತೆ ಆ ದಿನ ಸಂಜೆ ತಮ್ಮ ವಾಸಸ್ಥಳ ಶಹಪುರದಿಂದ ಸಂಜೆ 4 ರ ವೇಳೆಗೆ ಬಸ್ ಏರಿ ಹೊರಟರು. ಅಲ್ಲಿಂದ ಗುಲ್ಬರ್ಗಕ್ಕೆ 2 ತಾಸುಗಳ ಪ್ರಯಾಣ. ಸಂಜೆ 6.00 ಗಂಟೆ ಸುಮಾರಿಗೆ

ಮಾಡಿ ತಂದೆಯ ಬಗ್ಗೆ ವಿಚಾರಿಸಿದರು. ತಂದೆಯನ್ನು ಬಸ್ ಹತ್ತಿಸಿ ಕಳಿಸಿದ್ದ ಸಂತೋಷ್ ಅವರ ಎರಡು ಮೊಬೈಲ್‌ಗಳಿಗೆ ಫೋನ್ ಮಾಡಿದಾಗ ಒಂದು ಫೋನ್ ಸ್ವಿಚ್ ಆಫ್ ಆಗಿತ್ತು, ಮತ್ತೊಂದು ಫೋನ್ ಎಂಗೇಜ್ ಆಗಿತ್ತು, ಮತ್ತೆ ಮತ್ತೆ ಕರೆ ಮಾಡಿದಾಗ ಯಾರೋ ಫೋನ್ ರಿಸೀವ್ ಮಾಡಿದರು ಆದರೆ ಮಾತನಾಡಲಿಲ್ಲ, ಯಾರೋ ಇಬ್ಬರು ಗುಸುಗುಸು ಮಾತಾಡುತ್ತಿರುವುದು, ದೇವಸ್ಥಾನದ ಗಂಟೆ ಹಾಗೂ ಮಂತ್ರದ ಶಬ್ದಗಳು ಕೇಳಿಸಿತು. ಸ್ವಲ್ಪ ಹೊತ್ತಿನ ನಂತರ ಆಟೋದ ಶಬ್ದ ಕೇಳಿಸಿತು. ಆನಂತರ ಫೋನ್ ಕಟ್ ಆಯಿತು. ಆಮೇಲೆ ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗಿಲ್ಲ.

ಲಿಂಗಣ್ಣ ಸತ್ಯಂಪೇಟೆಗೆ ನಮನ




ಶಿವನಾಮಿ ತಾಯಿಯ
ಉದರದಲಿ ಹುಟ್ಟಿ
ಲಿಂಗದ ಹೆಸರಿಟ್ಟುಕೊಂಡು
ಸತ್ಯದ ಹೆಸರಿನ ಊರು
ಸತ್ಯಂಪೇಟೆಯಲಿ
ಬಾಳಿಬದುಕಿದ ಕಾಯಕಯೋಗಿ
ಲಿಂಗಣ್ಣ ನಿಮ್ಮನ್ನೇಕೆ
ಬೀದಿಯ ಹೆಣ ಮಾಡಿದರು?
ಈ ಜನ, ಈ ಸಾವು ನ್ಯಾಯವೇ?

ಲಿಂಗಣ್ಣ ನೀ ಸತ್ತಾಗ
ನಿಮ್ಮ ಬಳಿ ಇರಲಿಲ್ಲ
ಮಣ ಬಂಗಾರ
ಇದ್ದುದೊಂದು ಜೋಳಿಗೆ
ಅದರಲ್ಲೊಂದು
ಬಸವಮಾರ್ಗ ಪುಸ್ತಕ,
ಎರಡು ಮೊಬೈಲು,
ನೂರಿನ್ನೂರು ರೂಪಾಯಿ
ಇಷ್ಟರಾಸೆಗೆ ಕಾಯಕಯೋಗಿಯ
ಬೀದಿಯ ಹೆಣ ಮಾಡಿದರೇ?

ಇವರೆಂತಹ ಜನ
ಈ ಸಾವು ನ್ಯಾಯವೇ?

ಶ್ರಾವಣ ಮಾಸದ ಜ್ಞಾನ
ದಾಸೋಹ ಸೇವೆಗೆ ಬಂದ
ನಿಮ್ಮನ್ನ ಮನುಷ್ಯತ್ವವ ಮರೆತು
ತೃಣದಾಸೆಗಾಗಿ ಶರಣ ಬಸವನ
ಸಾಕ್ಷಿ ಇಟ್ಟು ಕೊಂದರೆ ಈ ಜನ
ಈ ಸಾವು ನ್ಯಾಯವೇ?

ಬಸವ ತತ್ವವ ನಂಬಿ
ಬಸವ ಮಾರ್ಗದಿ ನಡೆದ
ಕಾಯಕಯೋಗಿ ಲಿಂಗಣ್ಣ
ನಿಮಗಿದೋ ನನ್ನ
ಅಂತಿಮ ನಮನ



ಡಾ.ಡಿ.ಸಿ.ರಾಜಪ್ಪ
ಎಸ್‌ಪಿ, ಬಿಜಾಪುರ

ಆದರೆ ಎಲ್ಲಿಯೂ ಲಿಂಗಣ್ಣನವರು ಪತ್ತೆಯಾಗಲಿಲ್ಲ. ಇದೆಲ್ಲ ನಡೆದದ್ದು ರಾತ್ರಿ 8.15ರಿಂದ 10 ಗಂಟೆಯ ವೇಳೆಯಲ್ಲಿ.

ಇಲ್ಲಿ ಮತ್ತೊಂದು ಪ್ರಮುಖವಾದ ಅಂಶವನ್ನು ಹೇಳಲೇಬೇಕು. ವಿಶ್ವಾರಾಧ್ಯ ಅವರಿಗೆ ತಮ್ಮ ತಂದೆ ನಾಪತ್ತೆಯಾದ ವಿಷಯ ತಿಳಿದಕೂಡಲೇ ಅವರು ಪರಿಚಿತರಾದ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರಿಗೆ ಫೋನ್ ಮಾಡಿ ತಮ್ಮ ತಂದೆಯ ಫೋನ್ ನಂಬರ್‌ಗಳನ್ನು ನೀಡಿ ಅದರ ಲೊಕೇಷನ್ ಪತ್ತೆ ಮಾಡಿ ತಿಳಿಸುವಂತೆ ವಿನಂತಿಸಿದರು. ಸ್ವಲ್ಪ ಹೊತ್ತಿನಲ್ಲೇ ಫೋನ್ ಮಾಡಿದ ಇನ್ಸ್‌ಪೆಕ್ಟರ್ ಗುಡಿಯ ಆಜುಬಾಜಿನ ಸಂಗಮೇಶ್ವರ ನಗರದಲ್ಲೇ ಲಿಂಗಣ್ಣ ಅವರ ಮೊಬೈಲ್ ಇರುವುದಾಗಿ ಕನ್‌ಫರ್ಮ್ ಮಾಡಿದರು. ಆಗ ಕುಟುಂಬದವರಿಗೆ ಇದ್ದ ಆತಂಕ ಲಿಂಗಣ್ಣನವರಿಗೆ ತೀವ್ರವಾದ ಆರೋಗ್ಯ ಸಮಸ್ಯೆ ಏನಾದರೂ ಸಂಭವಿಸಿರಬಹುದು ಎಂಬುದಷ್ಟೆ ಆಗಿತ್ತು.

ರಾತ್ರಿಯಿಡೀ ಹುಡುಕಾಡಿದರೂ ಪ್ರಯೋಜನವಾಗದಿದ್ದಾಗ ವಿಶ್ವಾರಾಧ್ಯ ಬೆಳಗಿನ ಜಾವ ಸುಮಾರು 4.30 ರ ವೇಳೆಗೆ ಶರಣ ಬಸವೇಶ್ವರ ಸಂಸ್ಥೆಯ ಅಧಿಪತಿ ಶರಣ ಬಸಪ್ಪ ಅಪ್ಪನವರಿಗೆ ಫೋನ್ ಮಾಡಿ ತಮ್ಮ ತಂದೆ ನಾಪತ್ತೆಯಾಗಿರುವ ಬಗ್ಗೆ ತಿಳಿಸಿದರು. ಇದಕ್ಕೆ "ಹೌದಾ?" ಎಂದಷ್ಟೇ ಕೇಳಿದ ಅಪ್ಪನವರಿಂದ ಬೇರಾವ ಪ್ರತಿಕ್ರಿಯೆಯೂ ಬರಲಿಲ್ಲ, "ಒಂದು ಮಿಸ್ಸಿಂಗ್ ಕಂಪ್ಲೈಂಟ್ ಕೊಟ್ಟರೆ ಹೇಗೆ?" ಎಂದು ವಿಶ್ವಾರಾಧ್ಯ ಕೇಳಿದಾಗ ಅಪ್ಪನವರು "ನೋಡಪ್ಪಾ, ಯೋಚನೆ ಮಾಡು, ಅವರು ದೊಡ್ಡ ಸಾಹಿತಿಯಾಗಿದ್ದವರು, ದೊಡ್ಡ ಹೆಸರಿದೆ. ಮಿಸ್ಸಿಂಗ್ ಅಂತಾ ಕಂಪ್ಲೈಂಟ್ ಕೊಡೋದು ಹೇಗೆ ಅಂತಾ ಇನ್ನೊಮ್ಮೆ ಯೋಚಿಸು" ಎಂದಷ್ಟೇ ಹೇಳಿ ಕೈ ತೊಳೆದುಕೊಂಡರು.

26 ರ ಬೆಳಗ್ಗೆ ಪಾಟೀಲ ಪುಟ್ಟಪ್ಪನವರಿಗೆ ಫೋನ್ ಮಾಡಿ ವಿಷಯ ತಿಳಿಸಿದರು. ಪಾಪುರವರು ಪೊಲೀಸ್ ಕಮೀಷನರ್‌ಗೆ ಫೋನ್ ಮಾಡಿ ಲಿಂಗಣ್ಣನವರ ಮೊಬೈಲ್ ನಂಬರ್ ಇರುವ ಲೊಕೇಷನ್ ಪತ್ತೆ ಹಚ್ಚಲು ಕೇಳಿದರು.

ಜೊತೆ ಎಸ್‌ಪಿ ಪ್ರವೀಣ್ ಪವಾರ್, ಅಡಿಷನಲ್ ... ಭೂಷಣ್ ಬೋರ್ಸೆ ಕೂಡಾ ಇದ್ದರು. ಮೇಲಧಿಕಾ... ಸಲಹೆಯ ಮೇರೆಗೆ ಆತಂಕದಲ್ಲಿದ್ದ ಕುಟುಂಬದ... ಬ್ರಹ್ಮಪುರ ಠಾಣೆಗೆ ಹೋಗಿ ಲಿಖಿತ ದೂರು ಕೊ... ಆದರೆ ಬ್ರಹ್ಮಪುರ ಠಾಣೆಯ ಸಿಬ್ಬಂದಿ ಈ ಥರಾ ಕಂಪ್... ಸರಿಯಾಗೋದಿಲ್ಲ ಅಂತಾ ಹೇಳಿ ಬೇರೊಂದು ರೀತಿ... ಕಂಪ್ಲೈಂಟ್ ಬರೆಸಿಕೊಂಡಿದ್ದೂ ಆಯಿತು.



ಲಿಂಗಣ್ಣ ಸತ್ಯಂಪೇಟೆಯವರ ಕೆಲವು ಕೃತಿಗಳು.....

ಇದಾದ ಸ್ವಲ್ಪ ಸಮಯದ ನಂತರ ಇಡೀ ಪ್ರಕರ... ಒಂದು ಕುತೂಹಲಕಾರಿ ತಿರುವು ಪಡೆದುಕೊಂ... ಶಿವರಂಜನ್ ಅವರಿಗೆ ಬ್ರಹ್ಮಪುರ ಇನ್ಸ್‌ಪೆಕ್ಟರ್ ಫೋ... ಮಾಡಿ ಅದೇ ಬಸವೇಶ್ವರ ಗುಡಿಯ ಆವರಣಕ್ಕೆ ಬರ... ಹೇಳಿದರು. ಅಲ್ಲಿಗೆ ಧಾವಿಸಿದ ಕುಟುಂಬದ... "ಯಾವುದೋ ಅಪರಿಚಿತ ಶವವೊಂದು ಪತ್ತೆಯ... ಅದು ನಿಮ್ಮ ತಂದೆಯದಾ ಅಂತಾ ನೋಡಿ?" ... ತಮ್ಮ ಮೊಬೈಲ್‌ನಲ್ಲಿದ್ದ ಶವದ ಫೋಟೋ ತೋರಿ... ತಂದೆಯ ಸಾವನ್ನು ತಿಳಿದು ದುಃಖಿತರಾದ ಮಕ್ಕಳು... ಇರುವಲ್ಲಿಗೆ ಹೊರಡಲು ಸಿದ್ಧರಾದರು. ಆದರೆ ಅ... ಇದ್ದದ್ದು ಬೇರೆಲ್ಲೋ ಅಲ್ಲ, ಗುಡಿಯ ಮುಂದುಗ... ಗಟಾರದಲ್ಲಿ.

ಗೇಟಿನ ಬದಿಯಲ್ಲೇ ಇದ್ದ ಗೂಡಂಗಡಿಯ ಅ...


...ಕ್ಕರ್ ಮತ್ತು ಮಾಲತಜ್ಞಯವರೊಂದಿಗೆ ಕಾರ್ಯಕ್ರಮವೊಂದರಲ್ಲಿ...

ದಲ್ಲಿ ಶವವನ್ನು ತುರುಕಲಾಗಿತ್ತು. ಶವದ ಮೈಮೇಲೆ ...ತ್ತು ಬನಿಯನ್ ಬಿಟ್ಟರೆ ಬೇರೆ ದಿರಿಸುಗಳಿರಲಿಲ್ಲ. ...ಲ್ಲಿ ರಟ್ಟಿನ ಡಬ್ಬಿಯೊಂದರಲ್ಲಿ ಅವರ ಬೂಟುಗಳನ್ನು ...ಲಾಗಿತ್ತು. ಮತ್ತೊಂದು ಬದಿಯಲ್ಲಿ ಅವರ ಶರ್ಟು ... ಪಂಚೆಗಳನ್ನು ಎಸೆಯಲಾಗಿತ್ತು.


... ವಿವರಗಳು ಒಂದಕ್ಕೊಂದು ಸಂಬಂಧವಿಲ್ಲದೆ ತೀರಾ ...ಸ್ಪದವಾಗಿ ಕಾಣುತ್ತಿದೆಯಲ್ಲವೆ?

...ಂತರ ಪದ್ಧತಿಯ ಪ್ರಕಾರ ಶ್ವಾನದಳವನ್ನು ...ಯಿತು. ಪ್ರತ್ಯಕ್ಷದರ್ಶಿಗಳ ಪ್ರಕಾರ ಶವವನ್ನು ಮೂಸಿ ...ದ ಪೊಲೀಸ್ ನಾಯಿ ಗುಡಿಯ ಆವರಣದೊಳಗೆ ... ಅಲ್ಲಿಂದ ಮುಂದುವರೆದು ಸೀದಾ ಶರಣಬಸಪ್ಪ ...ರು ವಾಸ ಮಾಡುವ ಮನೆಯ ಹೆಬ್ಬಾಗಿಲನ್ನು ... ಅಲ್ಲಿಂದ ಪಕ್ಕದಲ್ಲೇ ಇರುವ ದಾಸೋಹ ...ಳಗೆ ಒಂದು ಸುತ್ತು ಹಾಕಿ, ನಂತರ ಗುಡಿಯ ... ದಿಕ್ಕಿಗಿರುವ ಮುಕ್ತಾಂಬಿಕಾ ಮಹಿಳಾ ಕಾಲೇಜು ...ದಲ್ಲಿ ಸುತ್ತಾಡಿತು. ಅಲ್ಲಿಂದ ಹಾಗೇ... ಮತ್ತೆಲ್ಲಿಗೋ ...ವುದಿತ್ತು. ಅಷ್ಟರಲ್ಲಿ ಪೊಲೀಸರೇ ಆ ನಾಯಿಯನ್ನು ...ತಂದು ವಾಪಸ್ ಜೀಪಿಗೆ ಹಾಕಿಬಿಟ್ಟರು! ಕಾರಣ?

...ಯಿ ಅಪ್ಪನವರ ಮನೆ ಪ್ರವೇಶಿಸುತ್ತಿದ್ದಂತೆ ...ಸಲು ಶುರುಮಾಡಿದ ಮಫ್ತಿಯಲ್ಲಿದ್ದ ಪೊಲೀಸರು ... ಯಾರಿಗೋ ಫೋನಾಯಿಸಿದರು. ನಂತರ ಅದೇನು ... ಬಂತೋ ಏನೋ ಬಸವೇಶ್ವರನೇ ಬಲ್ಲ. ಕೇವಲ ...ನಿಮಿಷದಲ್ಲಿ ಆ ನಾಯಿ ಮತ್ತೆ ಜೀಪಲ್ಲಿ ತೆಪ್ಪಗೆ ...ಕಾಯ್ತು. ಇಲ್ಲಿಗೆ ಈ ಪ್ರಕರಣದ ಮತ್ತೊಂದು ...ಮುಗಿದಂತಾಯ್ತು.

...ಮುಂದಿನ ಭಾಗ ಮತ್ತಷ್ಟು ನಾಟಕೀಯವಾಗಿದೆ. ... ಪೊಲೀಸರು ಕಂಡುಹಿಡಿದಿರುವ ಈ ಸ್ಟೋರಿ ...ದೋ ಡಬ್ಬಾ ಕನ್ನಡ ಸಿನಿಮಾಗೆ ಹೇಳಿಮಾಡಿಸಿದಂತಿದೆ. ... ಈ ಸ್ಟೋರಿಯನ್ನು ನಾವು ನಂಬಲೇಬೇಕೆಂದು ... ಕಷ್ಟಪಟ್ಟರೂ ನಂಬಲಾಗುತ್ತಿಲ್ಲ; ಅದೇ ಸಮಸ್ಯೆ.


...ಲೀಸರ ಪ್ರಕಾರ ಅಂದು ಸಂಜೆ ತನ್ನ ಆಟೋದಲ್ಲಿ ... ಮಾಡಿಕೊಂಡ ವ್ಯಕ್ತಿಯೊಬ್ಬನನ್ನು ಅದರ ಡ್ರೈವರ್ ... ಗೇಟಿನ ಬಳಿ ದೂಡಿ ಹೋಗಿಬಿಟ್ಟನಂತೆ. ಆಗ ... ಇದ್ದ ವಾಚ್‌ಮೆನ್‌ಗಳು ಈತ ಯಾರೋ ...ನಿರಬಹುದು ಎಂದು ಭಾವಿಸಿ ಆತನನ್ನು ಅಲ್ಲಿಂದ ...ಲು ಪ್ರಯತ್ನಿಸಿದರಂತೆ. ಅಷ್ಟರಲ್ಲಿ ದಾಸೋಹದ ಬಳಿ


...ರಂಗ ಸಭೆಯಲ್ಲಿ ಲಂಕೇಶ್ ಮತ್ತು ರಾಮದಾಸ್ ಜೊತೆ...

... ಕುಡುಕ ಬಂದನೆಂದು ಮತ್ತೆ ಅಲ್ಲಿಗೆ ಓಡಿದರಂತೆ. ...ದು 8.30 ರಿಂದ 10.30ರವರೆಗೆ ಶವ ಅಲ್ಲೇ ...ತೆ. ಅಲ್ಲಿಂದ ವಾಪಸ್ ಬಂದರೂ ಈ ವ್ಯಕ್ತಿ ಇಲ್ಲೇ ... ಕಂಡು ಆತನನ್ನು ಕಡ್ಡಿಯಿಂದ ಗಟಾರಕ್ಕೆ ...ಬಿಟ್ಟನಂತೆ. ಮತ್ತೆ ಏನಾದರೂ ಹಣ ಸಿಗಬಹುದೆಂದು ... ಅಂಗಿ ಮತ್ತು ಪಂಚೆ ಬಿಚ್ಚಿದರಂತೆ. ಹೀಗೆ ಅಂತೆ ...ಗಳ ಕೊನೆಮೊದಲಿಲ್ಲದ ಕತೆ ಇನ್ನೂ ...ಮುಂದುವರೆಯುತ್ತಲೇ ಇದೆ.

...ಲ್ಲಿ ಸಹಜವಾಗಿ ಕೆಲವು ಪ್ರಶ್ನೆಗಳು ಎದುರಾಗುತ್ತವೆ. ...ಸಿದಾಗಿ ಲಿಂಗಣ್ಣ ಶೋಕೀದಾರಿಗಾಗಿ ಡ್ರೆಸ್ ...ತ್ತಿದ್ದ ವ್ಯಕ್ತಿ. ಬಿಳಿ ಅಂಗಿ, ಬಿಳಿ ದೋತಿ, ಕಣ್ಣಿಗೆ ... ಅವರ ಗೆಟಪ್ ನೋಡಿ ಕುಡುಕ ಅಂತಾ ಗಟಾರಕ್ಕೆ ... ಎಂಬುದನ್ನು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ... ಅದೇ ಗುಡಿಯ ಆವರಣದಲ್ಲಿ ಭಾಷಣ ಮಾಡಲು ...! ಹೋಗಲಿ, ಅದೇ ರಾತ್ರಿ ಸುಮಾರು 8 ... ಹಲವು ಬಾರಿ ರಾತ್ರಿಯಿಡೀ ಹುಡುಕಾಡಿದ

ಮನೆಯವರ ಕಣ್ಣಿಗೆ ಹತ್ತಾರು ಬಾರಿ ಇದೇ ಸ್ಥಳದಲ್ಲಿ ಸುತ್ತಾಡಿದರೂ ಈ ಶವ ಬೀಳಲಿಲ್ಲ. ಅದೂ ಸಹ ಎರಡು ತಾಸು ರಸ್ತೆಯಲ್ಲೇ ಬಿದ್ದಿದ್ದರೂ ಕೂಡ. ಏಕೆ? ವಾಂತಿ ಮತ್ತು ಕಕ್ಕಸು ಮಾಡಿಕೊಂಡ ವ್ಯಕ್ತಿಯನ್ನು ಆಟೋದವನು ದೂಡಿದ್ದನಲ್ಲಾ, ಆದರೆ ಅಂಗಿಯ ಮೇಲಾಗಲಿ, ಇತರೆ ದಿರಿಸುಗಳ ಮೇಲಾಗಲಿ ಅಂಥಾ ಯಾವ ಗಲೀಜಾಗಲಿ, ವಾಸನೆಯಾಗಲಿ ಇರಲೇ ಇಲ್ಲ. ಹಾಗಾದರೆ ಆಟೋದವನು ದೂಡಿದ ಎಂಬುದೇ ಕಟ್ಟುಕತೆಯಲ್ಲವೆ? ಅಂಗಿಯ ಮೇಲೆ ಅಂಟಿದ್ದ ಒಂದೇ ಕಲೆಯೆಂದರೆ ಅಡುಗೆ ಮನೆಯಲ್ಲಿ ಅಂಟಬಹುದಾದ ಮಸಿ ಮಾತ್ರ. ಆ ಮಸಿ ಕಲೆ ಎಲ್ಲಿಂದ ಬಂತು? ಆ ರಸ್ತೆಯಲ್ಲಿ ಸದಾ ವಾಹನ ಹಾಗೂ ಜನಸಂದಣಿ ಇದ್ದೇ ಇರುತ್ತದೆ. ಮೇಲಾಗಿ ಗುಡಿಯಲ್ಲೇ ಕಾರ್ಯಕ್ರಮವಿತ್ತು. ಆದರೂ ಇದೆಲ್ಲಾ ಯಾರ ಕಣ್ಣಿಗೂ ಬೀಳಲಿಲ್ಲವೆಂದರೆ ನಂಬಲು ಸಾಧ್ಯವೆ? ಹೋಗಲಿ, ಲಿಂಗಣ್ಣರ ಶವವನ್ನೇ ಮೋರಿಗೆ ತಳ್ಳಿದವರೆಂದು ಹೇಳಲಾದ ಗೇಟ್‌ಕೀಪರ್‌ಗಳು ಬೂಟುಗಳನ್ನು ಅಚ್ಚುಕಟ್ಟಾಗಿ ರಟ್ಟಿನ ಡಬ್ಬಿಯಲ್ಲಿ


ಎಂ.ಎಂ.ಕಲ್ಬುರ್ಗಿಯವರ ಜೊತೆ...

ಜೋಡಿಸಿಡಲು ಅವರಿಗೆ ಹುಚ್ಚು ಹಿಡಿದಿತ್ತೆ? ಮೂಸುತ್ತಾ ಹೊರಟಿದ್ದ ಪೊಲೀಸ್ ನಾಯಿಯನ್ನು ಸ್ವತಂತ್ರವಾಗಿ ಬಿಡದೆ ಹತ್ತೇ ನಿಮಿಷದಲ್ಲಿ ಜೀಪಿನಲ್ಲಿ ಕೂಡಿಹಾಕಲು ಏನು ಕಾರಣ? ಅದನ್ನು ಹಾಗೆ ಬಿಟ್ಟಿದ್ದರೆ ಅದು ಎಲ್ಲಿಗೆ ಹೋಗುತ್ತಿತ್ತು?

ಇಷ್ಟಕ್ಕೂ ಆ ವಾಚ್‌ಮೆನ್‌ಗಳು ದೋಚಿದ ವಸ್ತುಗಳ ಪಟ್ಟಿ ನೋಡಿ: ಒಂದು ಮೊಬೈಲ್ ಫೋನನ್ನು ಶವದಲ್ಲೇ ಉಳಿಸಿ, ಒಂದನ್ನು ಮಾತ್ರ ದೋಚಿದರಂತೆ. ಹಾಗೆ ಅವರು ದೋಚಿದ ಮೊತ್ತ 150 ರೂಪಾಯಿ ಮಾತ್ರ. ಆದರೆ ಕೈಚೀಲದಲ್ಲಿ ಹಾಗೇ ಉಳಿದಿದ್ದ ಮೊತ್ತ 1800 ರೂಪಾಯಿ! ಇದರ ಜೊತೆಗೆ 'ಬಸವ ಮಾರ್ಗ' ಪತ್ರಿಕೆಯ ಕೆಲವು ಪ್ರತಿಗಳನ್ನೂ ತೆಗೆದುಕೊಂಡರಂತೆ. ಹೇಳೋರು ಮೂರ್ಖರಾದರೆ ಕೇಳೋರು ಕೂಡ ಮೂರ್ಖರಾಗಿರಲೇಬೇಕು ಅಂತಾ ಸದ್ಯ ನಮ್ಮಲ್ಲಿ ಯಾವ ಕಾನೂನು ಇಲ್ಲ ಬಿಡಿ.

ಇಲ್ಲಿ ಮತ್ತೊಂದು ಕುತೂಹಲಕಾರಿ ಅಂಶವಿದೆ. ಏನೆಂದರೆ ತಮ್ಮ ತಂದೆಯ ಶವ ಪತ್ತೆಯಾದ ಕೂಡಲೇ ವಿಶ್ವಾರಾಧ್ಯ ಅವರು ಶರಣ ಬಸಪ್ಪಾ ಅಪ್ಪನವರನ್ನು ಭೇಟಿಯಾಗಿ ವಿಷಯ ತಿಳಿಸಿದರು. ಆಗ ಅಪ್ಪನವರ ಪ್ರತಿಕ್ರಿಯೆ ಏನು ಗೊತ್ತೆ? "ನಮಗೂ ನಿಮಗೂ ಯಾರೋ ತಂದಿಟ್ಟುಬಿಟ್ಟರಲ್ಲಾ?" ಅಂತ.


ಆ ಬಡಪಾಯಿ ಗೇಟ್‌ಕೀಪರ್‌ಗಳನ್ನು ಹಿಡಿದ ಪೊಲೀಸರಿಗೆ ಮೇಲಧಿಕಾರಿಗಳು 25 ಸಾವಿರ ಬಹುಮಾನ ಘೋಷಿಸಿದ್ದಾರೆ. ಲಿಂಗಣ್ಣ ಹಾರ್ಟ್ ಅಟಾಕ್‌ಆಗಿ ಸತ್ತಿದ್ದಾರೆ; ಇದು ಕೊಲೆಯೇ ಅಲ್ಲ ಎಂದು ಪೊಲೀಸರು ಫರ್ಮಾನು ಹೊರಡಿಸಿಬಿಟ್ಟಿದ್ದಾರೆ. ಆದರೆ ನೆನಪಿಡಿ; ಬಳ್ಳಾರಿಯ ಲ್ಯಾಬ್‌ನಿಂದ ಇನ್ನೂ ಪೋಸ್ಟ್‌ಮಾರ್ಟಂ ರಿಪೋರ್ಟ್ ಬಂದೇ ಇಲ್ಲ. ಸಾವಿಗೆ ನಿಖರವಾದ ಕಾರಣ ಪತ್ತೆಯಾಗುವ ಮುನ್ನವೇ, ತರಾತುರಿಯಲ್ಲಿ ಈ ಪ್ರಕರಣವನ್ನು ಗೇಟ್‌ಕೀಪರ್‌ಗಳ ತಲೆಗೆ ಕಟ್ಟಲು ಕಾರಣವಾದರೂ ಏನು?

ಲಿಂಗಣ್ಣನವರ ನಿಗೂಢ ಸಾವು ವಿಧಾನಸಭೆಯಲ್ಲೂ ಚರ್ಚೆಗೆ ಬಂದಿದೆ. ಗೃಹ ಸಚಿವ ಅಶೋಕ್ ಶವದ ಮೇಲೆ ಕೆಲವು ಗಾಯಗಳಿದ್ದುದನ್ನು ಸ್ವತಃ ಒಪ್ಪಿಕೊಂಡಿದ್ದಾರೆ. ತನಿಖೆಗಾಗಿ 5 ವಿಶೇಷ ತಂಡ ರಚಿಸಿರುವುದಾಗಿ ಹೇಳಿದ್ದಾರೆ. ಆದರೆ ಗುಲ್ಬರ್ಗ ಪೊಲೀಸರು ತನಿಖೆಗೆ ಎಳ್ಳುನೀರು ಬಿಟ್ಟು ಬಹುಮಾನ ಘೋಷಿಸಿರುವಾಗ ವಿಶೇಷ ತಂಡದ ಮಾತು ಕೇವಲ ಕಣ್ಣೊರೆಸುವ ತಂತ್ರವಾಗುತ್ತದೆ.

ಲಿಂಗಣ್ಣ ಸ್ವತಃ ಪತ್ರಕರ್ತ ಹಾಗೂ ಸಾಹಿತಿಯೆಂದು ಗುರುತಿಸಿಕೊಂಡಿದ್ದವರು. ಸಮಾಜದ ಗಣ್ಯರೊಡನೆ ಒಡನಾಟ ಹೊಂದಿದ್ದವರು. ಅವರ ಮಕ್ಕಳು ಕೂಡ ಪತ್ರಕರ್ತರಾಗಿದ್ದಾರೆ. ಇಂಥವರಿಗೇ ಹೀಗಾದರೆ ಇನ್ನೂ ಜನಸಾಮಾನ್ಯರಿಗೆ ಎಂಥಾ ನ್ಯಾಯ ಸಿಗಬಹುದು?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಭೀಮಾತೀರ ರಾಜಪ್ಪ ಬಲೆಗೆ ಬಿದ್ದ ಗನ್ ಗ್ಯಾಂಗ್



ಭೀಮಾತೀರ ಇನ್ನೂ ಶಾಂತವಾಗಿಲ್ಲ. ಅಲ್ಲಿನ ಜನಸಾಮಾನ್ಯರಲ್ಲಿ ಮನೆ ಮಾಡಿರುವ ಆತಂಕ ಇನ್ನೂ ದೂರವಾಗಿಲ್ಲ. ಮಲ್ಲಿಕಾರ್ಜುನ ಚಡಚಣ, ಪುತ್ರಪ್ಪ ಭೈರಗೊಂಡ, ಚಂದಪ್ಪ ಹರಿಜನ, ಕೇಸಪ್ಪ ತಾವರಖೇಡ ಮುಂತಾದ ಭಯಾನಕ ಪಾತಕಿಗಳು ಹುಟ್ಟು ಹಾಕಿದ ಪಾತಕಲೋಕದ ಬೇರುಗಳು ಅವರುಗಳ ಸಾವಿನ ನಂತರವೂ ಇನ್ನೂ ಹಾಗೇ ಉಳಿದುಕೊಂಡಿವೆ.


ಪೊಲೀಸರು ಎಷ್ಟೇ ಪ್ರಯತ್ನಪಟ್ಟರೂ ಇಲ್ಲಿನ ಪಾತಕಿಗಳನ್ನು, ಶಸ್ತ್ರಾಸ್ತ್ರಗಳ ಹರಿದಾಟವನ್ನು ಸಂಪೂರ್ಣವಾಗಿ ತೊಡೆದು ಹಾಕಲಾಗಿಲ್ಲ. ಅದಕ್ಕೆ ತಾಜಾ ಉದಾಹರಣೆ ಎಂದರೆ ಮೊನ್ನೆ ಜುಲೈ 23ರ ಬೆಳಗ್ಗೆ ಸುಮಾರು ಎಂಟು ಗಂಟೆಗೆ ಮಹಲ ಐನಾಪುರ ಗ್ರಾಮದಲ್ಲಿ ಸುಪಾರಿ ಕಿಲ್ಲರ್‌ಗಳಿಂದ ಸುಮಾರು 12 ಪಿಸ್ತೂಲು, ಒಂದು



ರಿವಾಲ್ವರ್, 35 ಗುಂಡುಗಳನ್ನು ವಶಪಡಿಸಿಕೊಂಡಿರುವುದು.

ಇಷ್ಟು ಪ್ರಮಾಣದ ಶಸ್ತ್ರಾಸ್ತ್ರಗಳು ಹೀಗೆ ಏಕಕಾಲದಲ್ಲಿ ದೊರೆತಿರುವುದು ಇಲ್ಲಿ ಇನ್ನೂ ಜೀವಂತವಾಗಿರುವ, ಹೆಡೆ ಬಿಚ್ಚಿಕೊಳ್ಳಲು ಯತ್ನಿಸುತ್ತಿರುವ ಪಾತಕಲೋಕದ ಚಟುವಟಿಕೆಗಳಿಗೆ ತಾಜಾ ಉದಾಹರಣೆಯಂತಿದೆ.

ಮಹಾರಾಷ್ಟ್ರದ ಜತ್ತ ತಾಲೂಕು, ದಕ್ಷಿಣ ಸೊಲಾಪುರದಿಂದ ಹಿಡಿದು ಕರ್ನಾಟಕದ ಚಡಚಣ, ಜಳಕಿ, ಇಂಡಿ, ಆಲಮೇಲ, ಅಫ್ಜಲಪುರ, ಬಿಜಾಪುರವರೆಗೂ ಹರಡಿರುವ ಪಾತಕ ಚಟುವಟಿಕೆಗಳು ನಿನ್ನೆ ಮೊನ್ನೆಯದಲ್ಲ. ಇಲ್ಲಿ ಅಕ್ರಮ ಶಸ್ತ್ರಾಸ್ತ್ರಗಳ ಬಳಕೆ, ಸಾಗಾಣಿಕೆ ಹೊಸದೂ ಅಲ್ಲ. 2010ರಲ್ಲಿ ಇದೇ ಭಾಗದಲ್ಲಿ ಸಿಕ್ಕಿದ್ದ ಶಸ್ತ್ರಾಸ್ತ್ರಗಳ



ಮೊತ್ತ ಈ ಭಾಗದ ಜನರನ್ನೇ ದಂಗುಬಡಿಸಿದ್ದವು. ಆಗ 49 ಪಿಸ್ತೂಲುಗಳು, ಏಳು ರಿವಾಲ್ವರ್‌ಗಳು, ಒಂದು ಬಂದೂಕು, 100ಕ್ಕೂ ಹೆಚ್ಚು ಗುಂಡುಗಳು, ಒಂದು ಗನ್ನು, 3 ಕಾಡತೂಸುಗಳು ದೊರೆತಿದ್ದವು.

ಇಷ್ಟೆಲ್ಲ ಶಸ್ತ್ರಾಸ್ತ್ರಗಳು ಪೊಲೀಸ್ ವಶವಾದ ಮೇಲೆ ಇಲ್ಲಿನ ಪಾತಕ ಚಟುವಟಿಕೆಗಳು ನಿಯಂತ್ರಣಕ್ಕೆ ಬರಬಹುದೆಂದು ಜನ ಭಾವಿಸಿದ್ದರು. ಆದರೆ ಅದರ ಮರು ವರ್ಷವೇ ಅಂದರೆ 2011ರಲ್ಲಿ ಮತ್ತೆ 13 ಪಿಸ್ತೂಲುಗಳು, 35 ಗುಂಡುಗಳು ಪೊಲೀಸರ ವಶವಾಗಿದ್ದವು.

ಆ ಘಟನೆಯ ನೆನಪು ಮಾಸುವ ಮುನ್ನವೇ ಮತ್ತೀಗ ಶಸ್ತ್ರಾಸ್ತ್ರಗಳು ಭಾರೀ ಪ್ರಮಾಣದಲ್ಲಿ ಸರಬರಾಜು ಆಗುತ್ತಿರುವುದು ಕಂಡುಬಂದಿದೆ.

ಜುಲೈ 23ರ ಮುಂಜಾನೆ ಮಹಲ ಐನಾಪುರ ಗ್ರಾಮದಲ್ಲಿ ಸನ್ನಿ ನಾಯಕ ಹಾಗೂ ದಶರಥ ಸೊನ್ನ

ಎಂಬ ದೇವಣಗಾಂವದ ಯುವಕರು ಪಿಸ್ತೂಲುಗಳನ್ನು ಹಿಡಿದು ತಿರುಗಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿದ್ದೇ ತಡ ಇನ್ಸ್‌ಪೆಕ್ಟರ್ ಸಿದ್ದೇಶ್ವರ, ಸಿಪಿಐ ನಂದರೆಡ್ಡಿ, ಪಿಎಸ್ಐ ಅಂಬಿಗೇರ್ ಮುಂತಾದವರ ತಂಡ ದಾಳಿ ಮಾಡಿ ಅವರಿಬ್ಬರನ್ನು ಹಿಡಿದು ಪೊಲೀಸ್ ಠಾಣೆಗೆ ಕರೆತಂದು ಸರಿಯಾಗಿ ಟ್ರೀಟ್‌ಮೆಂಟ್ ಕೊಟ್ಟು ವಿಚಾರಣೆ ನಡೆಸಿದಾಗ ಮತ್ತೊಂದು ಆಘಾತಕಾರಿ ವಿಷಯ ಹೊರಬಿದ್ದಿದೆ.

ಅದು ದಿನಸಿ ಅಂಗಡಿಯಲ್ಲಿ ಮನೆ ಸಾಮಾನು ಸಿಗುವಷ್ಟೇ ಸಲೀಸಾಗಿ ಈ ಪ್ರದೇಶದಲ್ಲಿ ಬರೀ 500 ರೂ.ಗೆ ಪಿಸ್ತೂಲು ದೊರೆಯುತ್ತದೆ ಎಂಬ ಮಾಹಿತಿ. ಆಗ ಅಲರ್ಟ್ ಆದ ಬಿಜಾಪುರದ ಎಸ್‌ಪಿ ಡಿ.ಸಿ.ರಾಜಪ್ಪನವರು

ಸನ್ನಿ ನಾಯಕ ಹಾಗೂ ದಶರಥ ಸೊನ್ನರನ್ನು ಇಟ್ಟುಕೊಂಡು ಇಡೀ ಶಸ್ತ್ರಾಸ್ತ್ರ ಮಾರಾಟದ ಗ್ಯಾಂಗನ್ನೇ ಟ್ರ್ಯಾಪ್ ಮಾಡಲು ಸ್ಕೆಚ್ ಹಾಕಿದರು. ಆ ಟ್ರ್ಯಾಪ್ ಪ್ರಕಾರ ಸನ್ನಿ ನಾಯಕನಿಂದಲೇ ಅವನ ಮೊಬೈಲ್‌ನಿಂದ ಫೋನ್ ಮಾಡಿಸಿ 'ಪಿಸ್ತೂಲುಗಳು ಬೇಕಾಗಿವೆ. ಹಣ ರೆಡಿ ಇದೆ' ಎಂದು ಹೇಳಿಸಿದರು. ಆಮೇಲೆ ವ್ಯವಹಾರ ಕುದುರಿಸಲು ಆಲಮಟ್ಟಿ ನ್ಯಾಷನಲ್ ಹೈವೇಯಲ್ಲಿರುವ ಹಿಟ್ನಳ್ಳಿ ಟೋಲ್ ನಾಕಾ ಹತ್ತಿರ ಪಿಸ್ತೂಲುಗಳ ಸಮೇತ ಬರುವಂತೆ ತಿಳಿಸಿದರು. ಸಂಜೆ ಸನ್ನಿ ನಾಯಕನನ್ನು ಟೋಲ್ ನಾಕಾ ಹತ್ತಿರ ನಿಲ್ಲಿಸಿದ ಪೊಲೀಸರು ಹತ್ತಿರದಲ್ಲೇ ಅಡಗಿ ಕುಳಿತರು. ಪೊಲೀಸರೂ ಅಲ್ಲೇ ಇರಬಹುದೆಂದು ಸಂಶಯ ಪಡದ ಗ್ಯಾಂಗ್ ಕೆಎ 36 ಎಂ-5546 ನಂಬರ್‌ನ ಬೊಲೇರೋ ಗಾಡಿಯಲ್ಲಿ ಪಿಸ್ತೂಲುಗಳ ಸಮೇತ ಬಂದಿಳಿದರು.

ರವಿಕಾಂತ ಬೈರಾಮಣಗಿ, ಭೀಮಾಶಂಕರ ಗುಡೂರ, ರಾಜೇಶ ಭಂಡಾರಿ, ಕೃಷ್ಣ ತಳವಾರ ಮುಂತಾದವರು ಇದ್ದ ಗ್ಯಾಂಗ್ ಇನ್ನೇನು ಸನ್ನಿ ನಾಯಕನೊಂದಿಗೆ ವ್ಯವಹಾರ ಕ್ಕಳಿಯಬೇಕು ಎನ್ನುವಷ್ಟರಲ್ಲಿ ಪೊಲೀಸರು ಸುತ್ತುವರೆದರು.

ಪೊಲೀಸರನ್ನು ಕಂಡಿದ್ದೇ ತಡ ಈ ಗ್ಯಾಂಗ್ ತನ್ನೊಂದಿಗೆ ವ್ಯವಹಾರಕ್ಕೆಂದು ತಂದಿದ್ದ ಪಿಸ್ತೂಲುಗಳನ್ನೇ ಪೊಲೀಸರತ್ತ ತಿರುಗಿಸಿತು. ಅಷ್ಟುಹೊತ್ತಿಗೆ ಅಲರ್ಟ್ ಆಗಿದ್ದ ಪೊಲೀಸರು ತಮ್ಮ ತಮ್ಮ ರಿವಾಲ್ವರ್‌ಗಳನ್ನು ಪಾತಕಿಗಳ ತಲೆಗೆ ಇಟ್ಟರು.

ಇದರಿಂದ ಕಂಗೆಟ್ಟ ರವಿ ಬೈರಾಮಣಗಿ ನೇತೃತ್ವದ ಗ್ಯಾಂಗ್ ವಿಧಿ ಇಲ್ಲದೆ ತಣ್ಣಗೆ ಜೀಪು ಹತ್ತಿತು. ಈ ಘಟನೆಗೆ ಸಂಬಂಧಿಸಿದಂತೆ ಒಟ್ಟು 6 ಆರೋಪಿಗಳ ಮೇಲೆ ಸಿಸಿ ನಂಬರ್ 177/2012 ಕಲಂ 353 ರನ್ವಯ ಐಪಿಸಿ 34, 25, 27 ಸೆಕ್ಷನ್ ಅಡಿಯಲ್ಲಿ ಕೇಸು ದಾಖಲಿಸಿ ಜೈಲಿಗಟ್ಟಲಾಗಿದೆ.

ಆದರೆ ಇಷ್ಟಕ್ಕೆ ಪೊಲೀಸರು ಮೈ ಮರೆಯುವಂತಿಲ್ಲ. ಏಕೆಂದರೆ ಈ ಭಾಗದ ಹಲವಾರು ಗ್ರಾಮಗಳಲ್ಲಿ ಶಸ್ತ್ರಾಸ್ತ್ರ ಮಾರಾಟ ಒಂದು ಸಹಜ ಕಸುಬಾಗಿದೆ. ಆಗಾಗ ಸಣ್ಣಪುಟ್ಟ ಘಟನೆಗಳು ನಡೆಯುತ್ತಲೇ ಇರುತ್ತವೆ. ಇಲ್ಲಿನ ಪಾತಕಲೋಕ ತಣ್ಣಗಾಗಿಲ್ಲ, ಹೊಗೆ ಮುಚ್ಚಿದ ಕೆಂಡದಂತಿದೆ. ಪ್ರತಿ ಸಾರಿ ಪಾತಕಿಗಳನ್ನು ಬಂಧಿಸಿ ಶಸ್ತ್ರಾಸ್ತ್ರ ವಶಪಡಿಸಿಕೊಂಡಾಗಲೂ ಇಲ್ಲಿನ ಎಸ್ಪಿ ರಾಜಪ್ಪನವರ ಜವಾಬ್ದಾರಿ ಹೆಚ್ಚುತ್ತಲೇ ಇದೆ.

● ಮಹಾಲಿಂಗಪ್ಪ ಆಲಬಾಳ

ಐಸ್‌ಕ್ರೀಂ ಕೋನ್

ಓ.ಟಿ.ರವೀಂದ್ರನ್ ಹಾಸ್ಯ ಪ್ರಸಂಗ 8

"ಇನ್ನೇನು ಇಂಟರ್‌ವೆಲ್ ಆಗುತ್ತೆ ಅನ್ನುವಾಗ ನಿಮ್ಮಿ ಕುಳ್ಳಪ ಬಾಯ್‌ಫ್ರೆಂಡ್‌ನ ಕೈಯನ್ನು ಅತ್ತ ತಳ್ಳಿ ಆವನಿಂದ ದೂರವಾದಳು. ಆ ಹುಡುಗ ಬಾಯಲ್ಲಿ ಬೆರಳಿಟ್ಟರೆ ಕಚ್ಚಲು ಬರುವುದಿಲ್ಲವೇನೋ ಎನ್ನುವ ಮುಗ್ಧ ಮುಖ ಮಾಡಿಕೊಂಡು ಖಾಲಿ ಪರದೆಯನ್ನು ದಿಟ್ಟಿಸಲಾರಂಭಿಸಿದ.

ಸಿನಿಮಾ ಚೋರು ಹೊಡೆಯುತ್ತಿತ್ತು, ನಿಮ್ಮಿ ಅತ್ತಿತ್ತ ಕಣ್ಣು ಹಾಯಿಸಿ ಇದ್ದಕ್ಕಿದ್ದ ಹಾಗೆ ಸ್ತಂಭೀಭೂತಳಾದಳು. ನಾಲ್ಕು ಸಾಲುಗಳ ಹಿಂದೆ ಮಿಸೆಸ್ ಗ್ಲಾಡಿಯೊಲಿ ಥಾಂಸನ್ ಹಾಗೂ ಅವರ ಗಾರ್ಮೆಂಟ್ ಎಕ್ಸ್‌ಪೋರ್ಟ್ ಕಂಪೆನಿಯ ಮ್ಯಾನೇಜರ್ ಅಕ್ಕಪಕ್ಕ ಕುಳಿತು ಒಂದೇ ಐಸ್‌ಕ್ರೀಮ್ ಕೋನನ್ನು ತಿನ್ನುತ್ತಿದ್ದರು.


"ಗ್ಲಾಡಿಯೊಲಿ ಆಂಟಿ!" ನಿಮ್ಮಿ ಭಯದಿಂದ ಬಾಯ್‌ಫ್ರೆಂಡ್ ಕಿವಿಯಲ್ಲಿ ಪಿಸುಗುಟ್ಟಿದಳು. ಹುಡುಗ ಕತ್ತನ್ನು ನೀಳವಾಗಿಸಿ ಹಿಂತಿರುಗಿ ನೋಡಿದ. ಹಾಗೆಲ್ಲಾ ನೋಡಬೇಡ ಎಂದು ನಿಮ್ಮಿ ಗದರಿಸಿದಳು.

ಸಿನಿಮಾ ಮುಗಿಯುವುದಕ್ಕೆ ಮುಂಚೆಯೇ ನಿಮ್ಮಿ ಮತ್ತು ಬಾಯ್‌ಫ್ರೆಂಡ್ ಥಿಯೇಟರ್‌ನಿಂದ ಹೊರಕ್ಕೆ ಬಂದುಬಿಟ್ಟರು. ಬಾಯ್‌ಫ್ರೆಂಡ್‌ನ್ನು ಅವನ ಪಾಡಿಗೆ ಹೋಗಲು ಬಿಟ್ಟ ನಿಮ್ಮಿ ತರಾತುರಿಯಲ್ಲಿ ಬಸ್ಸು ಹಿಡಿದು ಮಿಸೆಸ್ ಪದ್ಮಾ ಕೃಷ್ಣಸ್ವಾಮಿ ಮನೆ ತಲುಪಿದಳು ಮತ್ತು ಉದ್ವೇಗ ಭರಿತಳಾಗಿ ಪದ್ಮಾಗೆ ಮಿಸೆಸ್ ಗ್ಲಾಡಿಯೊಲಿ ಮತ್ತು ಅವರ ಕಂಪನಿ ಮ್ಯಾನೇಜರ್, ಐಸ್‌ಕ್ರೀಮ್ ಬಗ್ಗೆ ವರದಿ ಕೊಟ್ಟಳು.

ಬರಿದುಹೋಗುವ ಕುತೂಹಲದಿಂದ ಪದ್ಮಾ ಹುಡುಗಿಗೆ ಚಾಕೊಲೇಟ್ ಐಸ್ ಕ್ರೀಮ್ ಕೊಟ್ಟು ತಿನ್ನಿಸುತ್ತ ತಲೆಸವರಿ ಪುನಃಪುನಃ ಅದೇ ನೋಡಿದ್ದನ್ನ ಹೇಳುವಂತೆ ಮಾಡಿದಳು. ಪದ್ಮಾ ಬಹಳ ದಿನಗಳಿಂದ ಗ್ಲಾಡಿಯೊಲಿ ಬಗ್ಗೆ ಒಳಗೇ ಮತ್ಸರದಿಂದ ಕುದಿಯುತ್ತಿದ್ದಳು. ಒಂದು ಸಲ ಪದ್ಮಾ ಮಿ. ಥಾಂಸನ್‌ನ ಸ್ಕೂಟರ್‌ನಲ್ಲಿ ಅವನ ಹಿಂದೆ ಕುಳಿತು ಕ್ಲಬ್ಬಿಗೆ ಬಂದಿದ್ದಳು. ಮಾರನೆ ದಿನ ಗ್ಲಾಡಿಯೊಲಿ ಕ್ಲಬ್ಬಿನಲ್ಲಿ ಅನೇಕ ಸ್ನೇಹಿತೆಯರ ಎದುರಿಗೆ ಪದ್ಮಾಳ ಗ್ರಾಚಾರ ಬಿಡಿಸಿದ್ದಳು. ಈಗ ಪದ್ಮಾಗೆ ಸೇಡು ತೀರಿಸಿಕೊಳ್ಳುವ ಅವಕಾಶ ಸಿಕ್ಕಿದೆ. ಅವಳು ಮಿ. ಥಾಂಸನ್‌ನ ಪ್ರೈವೆಟ್ ಸೆಕ್ರೆಟರಿ ಐವಿಗೆ ಫೋನ್ ಮಾಡಿದಳು.

ಐವಿ ಒಂದು ವರ್ಷದಿಂದ ಮಿ. ಥಾಂಸನ್‌ಗೆ ಪ್ರೈವೇಟ್ ಸೆಕ್ರೆಟರಿಯಾಗಿ ಕೆಲಸ ಮಾಡುತ್ತಿದ್ದಳು. ಈ ಕೆಲಸವನ್ನು ಪದ್ಮಾನೆ ಐವಿಗೆ ಕೊಡಿಸಿದ್ದಳು. ಐವಿಯನ್ನು ಬಹಳ ನೈಸಾಗಿ ಮಾತಾಡಿಸಿ ಅವಳು ಗ್ಲಾಡಿಯೊಲಿ ಮತ್ತು ಕಂಪೆನಿ ಮ್ಯಾನೇಜರ್‌ನ ಸಿನಿಮಾ ಘಟನೆ ಬಗ್ಗೆ ಥಾಂಸನ್‌ಗೆ ಹೇಳುವಂತೆ ನಯವಾಗಿ ಒಪ್ಪಿಸಿದಳು.

ಐವಿಯು ಒಪ್ಪಿದರೂ ಸ್ವಲ್ಪ ಕಾಲಾವಕಾಶ ಕೇಳಿದಳು. ಏಕೆಂದರೆ ಮಿ. ಥಾಂಸನ್ ಸ್ವಭಾವ ಕ್ಷಣ ಚಿತ್ತ ಕ್ಷಣ ಪಿತ್ತ. ಕುದುರೆರೇಸಿನಲ್ಲಿ ಬೆಟ್ ಗೆದ್ದ ದಿನ ಮಾತ್ರ ಅವನು



ನಗುತ್ತ ಇರುತ್ತಿದ್ದ, ಆದ್ದರಿಂದ ಐವಿ ಅವನ ಮುಗುಳ್ನಗೆಯ ದಿನವನ್ನು ಕಾಯುತ್ತಿದ್ದಳು.

*****

ನಂಗೊತ್ತು ಈ ಕಥೆ ಕೇಳಿದ್ರೆ ಮಿ. ಥಾಂಸನ್ ತಲೆ ಕೆಟ್ಟುಹೋಗುತ್ತೆ ಎಂದು ಪದ್ಮಾ ಕ್ಲಬ್ಬಿನ ಹೊಸ ಸದಸ್ಯೆ ಮಿಸೆಸ್ ಆಸ್ಟರ್ ಹಲ್ವಾವಾಲಳಿಗೆ ಹೇಳಿದಳು. ಆಸ್ಟರ್ 'ಹೌದೌದು. ಅವನು ಮಾಜಿ ಕ್ರಿಕೆಟಿಗ, ಸರಿಯಾದ ಹೊಡೆತ ಹೊಡಿಬಹುದು!' ಎಂದು ತಾಳ ಹಾಕಿದಳು. ಪದ್ಮಾ ಕ್ಲಬ್ಬಿನ ಸ್ನೇಹಿತೆಯರಿಗೆಲ್ಲಾ ಗ್ಲಾಡಿಯೊಲಿ ಮತ್ತು ಅವಳ ಕಂಪೆನಿ ಮ್ಯಾನೇಜರ್‌ನ ಐಸ್‌ಕ್ರೀಮ್ ಕಥೆ ಹೇಳಿ, ಯಾರಿಗೂ ಹೇಳುವುದಿಲ್ಲವೆಂದು ಅವರಿಂದ ಭಾಷೆ ತೆಗೆದುಕೊಂಡಳು.

ಐವಿ ಕಣ್ಣು ಹೊಡೆದಳು. ಅವಳು ತಾನೆ ಮಿ. ಥಾಂಸನ್‌ಗೆ ವಿಷಯ ಹೇಳಬೇಕಾಗಿರುವವಳು?

*****

ಒಂದು ಸೋಮವಾರ ಮಿಸ್ಟರ್ ಥಾಂಸನ್ ಕಳೆಕಳೆಯಾಗಿ ಆಫೀಸಿಗೆ ಬಂದ. ಹಿಂದಿನ ದಿನ ರೇಸ್‌ನಲ್ಲಿ ಅವನ ಕುದುರೆ ಗೆದ್ದಿತ್ತು. ಐವಿ ಸಮಯ ಸಾಧಿಸಿ ಅವನಿಗೆ ಗ್ಲಾಡಿಯೊಲಿ ಮತ್ತು ಕಂಪೆನಿ ಮ್ಯಾನೇಜರ್ ಬಗ್ಗೆ ಹೇಳಿದಳು.

ನಿರೀಕ್ಷಿಸಿದಂತೆ ಮಿ. ಥಾಂಸನ್‌ನ ಪಿತ್ತ ನೆತ್ತಿಗೇರಿತು. ಇನ್ನೊಂದು ಸಲ ಇಂಥ ಮಾತನ್ನು ಕೇಳಿದ್ರೆ ನಿಮಗೆಲ್ಲಾ ಸರಿಯಾಗಿ ಮಾಡ್ತೀನಿ ಎಂದು ರೇಗಿದ. ಐವಿ ರೂಮಿನಿಂದ ಆಚೆ ಓಡಿಹೋದಳು.

ಐವಿ ಪದ್ಮಾಗೆ ಫೋನ್ ಮಾಡಿ ಆಫೀಸ್‌ನಲ್ಲಿ ನಡೆದದ್ದನ್ನು ತಿಳಿಸಿದಳು. ಮಿ. ಥಾಂಸನ್ ಸೀರಿಯಸ್ಸಾಗಿ ಏನಾದರೂ ಮಾಡಬಹುದೆಂಬ ನಿರೀಕ್ಷೆಯಲ್ಲಿದ್ದಳು ಐವಿ.

ಮಿ. ಥಾಂಸನ್ ಗ್ಲಾಡಿಯೊಲಿಗೆ ಡೈವೋರ್ಸ್ ಕೊಡಬಹುದೆ ಎಂದು ಪದ್ಮಾ ಐವಿಯನ್ನು ಕೇಳಿದಾಗ ಅದು ಆದರೂ ಆಗಬಹುದು ಎಂದಳು ಐವಿ.

ಎಂಥ ನಾಚಿಕೆಗೇಡಿನ ವಿಷಯ. ಮಿ. ಥಾಂಸನ್ ಅವಳಿಗೆ ಚೆನ್ನಾಗಿ ನಾಲ್ಕು ಬಾರಿಸಿದರೆ ಸಾಕು ಎಂದುಕೊಂಡಳು ಪದ್ಮಾ.

*****

ಒಂದು ವಾರ ಕಳೆಯಿತು ಐವಿಯಿಂದ ಯಾವ ಸಿಹಿ ಸುದ್ದಿಯೂ ಬರಲಿಲ್ಲ, ತಡೆಯಲಾರದೆ ಪದ್ಮಾ ತಾನೆ ಫೋನ್ ಮಾಡಿದಾಗ ಐವಿ ಅದರ ಸುದ್ದಿನೇ ಇಲ್ಲ ಎಂದಳು. "ಏನೂ ಸುದ್ದಿಯೇ ಇಲ್ಲ" ಎನ್ನುವುದು ಪದ್ಮಾಳಿಗೆ ಕೆಟ್ಟ ಸುದ್ದಿಯಾಗಿತ್ತು! ಆದ್ದರಿಂದ ಅವಳು ಐವಿಗೆ ಪುನಃ ಫೋನ್ ಮಾಡಿ ಥಾಂಸನ್‌ಗೆ ಮ್ಯಾನೇಜರ್ ಮತ್ತು ಗ್ಲಾಡಿಯೊಲಿ ಒಂದೇ ಐಸ್‌ಕ್ರೀಮ್ ಕೋನ್ ತಿನ್ನುತ್ತಿದ್ದರು ಎಂದು ಹೇಳು ಆಗ ಪಟಾಕಿ ಹತ್ತಿಕೊಳ್ಳುತ್ತೆ ಎಂದು ಒತ್ತಾಯಮಾಡಿದ[...]. ಐವಿಯೂ ಹಾಗೇ ಆಗಲೆಂದು ಒಪ್ಪಿಕೊಂಡಳು.

ಒಂದು ಬೆಳಗ್ಗೆ ಪದ್ಮಾ ಶಾಪಿಂಗ್ ಹೋಗ[...] ಸಿದ್ಧಳಾಗುತ್ತಿದ್ದಾಗ ಬಿರಬಿರನೆ ಬಂದ ಐವಿ "ಎಂಥಾ [...] ಆಯ್ತು ಗೊತ್ತಾ?" ಎಂದು ಉದ್ವೇಗದಿಂದ ಹೇಳಿದ[...]

'ಪದ್ಮಾ ಕೇಳಿದಳು" ಏನಾಯ್ತು? ಮಿ. ಥಾಂ[...] ಗ್ಲಾಡಿಯೊಲಿಗೆ ಡೈವೋರ್ಸ್ ಕೊಟ್ಟನೆ?

"ಇಲ್ಲಾ!"

"ಥಾಂಸನ್ ಹೆಂಡತಿಗೆ ಹೊಡೆದನೆ?"

"ಇಲ್ಲಾ!"

ಉದ್ವೇಗದಿಂದ ಚಡಪಡಿಸುತ್ತಿದ್ದ ಐವಿಯ[...] ಬಲವಂತವಾಗಿ ಕೂರಿಸಿ, ಸಮಾಧಾನಪಡಿಸುವಂತೆ ಪ[...] ಐವಿಯ ತಲೆಯನ್ನು ಪ್ರೀತಿಯಿಂದ ನೇವರಿಸಲಾರಂಭಿಸಿ[...]

"ಆಂಟಿ ಅಯ್ಯೋ! ಎಂಥಾ ಪ್ರಮಾದವಾಯ್ತು. ನ[...] ಆ ವಿಷಯ ಮಿ. ಥಾಂಸನ್‌ಗೆ ಹೇಳದಿದ್ದರೆ ಚೆನ್ನಾಗಿ[...] ಎಂದು ಹೇಳುತ್ತ ಐವಿ ಕರ್ಚೀಫಿನಿಂದ ಕಣ್ಣು ಮು[...] ಒರೆಸಿಕೊಂಡಳು.

"ಏನಾಯ್ತು ಹೇಳೇ ಹುಡುಗಿ" ಎಂದು ಪ[...] ಐವಿಯನ್ನು ಪುಸಲಾಯಿಸಿದಳು.


"ಐಸ್‌ಕ್ರೀಮ್ ಕೋನ್ ವಿಷಯವನ್ನು ನ[...] ಹೇಳುತ್ತಿದ್ದಂತೆಯೇ ಬಾಸ್ ಸಿಡಿದು ಬಿದ್ದು ಪ[...] ಆಗಬೇಕಾಗಿತ್ತೊ ಅದನ್ನ ಮಾಡೇಬಿಟ್ಟರು."

"ಏನು ಮಾಡಿದರು?" ಎಂದು ಪದ್ಮಾ ಬ[...] ನಿರೀಕ್ಷೆಯಿಂದ ಕೇಳಲಾಗಿ ಐವಿ ಹೇಳಿದಳು "ಬಾಸ್ ನ[...] ಬಾಯ್ಮುಚ್ಚಿಕೊಂಡು ಸುಮ್ಮನಿರೊದನ್ನ ಮೊದಲು [...] ಎಂದು ಹೇಳಿ ನನ್ನ ಮನೆಗೆ ಕಳಿಸಿದರು."

ಇಂಗ್ಲಿಷ್ ಮೂಲ: ಓ.ಟಿ.ರವೀಂದ್ರ[...]

ಕನ್ನಡಕ್ಕೆ : ಪದ್ಮ ಶ್ರೀರಾ[...]

ರೂಪಕ ಸಾಮ್ರಾಜ್ಯದ ಚಕ್ರವರ್ತಿಗಳು



ನಾವು ಕವಿಗಳು ಕುಮಾರವ್ಯಾಸನ ಹಾಗೆ
ರೂಪಕ ಸಾಮ್ರಾಜ್ಯದ ಚಕ್ರವರ್ತಿಗಳಾಗುತ್ತಿದ್ದೇವೆ
ಯಾಕೆಂದರೆ
ಜಗತ್ತು ಮತ್ತೆ ಮಧ್ಯ ಯುಗದ ಕಡೆಗೆ ಹಿಮ್ಮೆಟ್ಟಿದೆ

ಪ್ರಭುತ್ವದ ಶಸ್ತ್ರಾಸ್ತ್ರಗಳ ಕುತಂತ್ರಾಸ್ತ್ರಗಳ
ಸಂಪೂರ್ಣ ಪರಿಚಯವಾಗಿದೆ ನಮಗೆ
ಜಾಗೃತ ಸುಪ್ತ ಸುಷುಪ್ತಿಗಳಲ್ಲಿ
ನಮ್ಮ ಎದೆಗಳು ನಡುಗುತ್ತಿವೆ
ಸತ್ಯ ಹೇಳುವದು ಅಸಾಧ್ಯವಾದಾಗ
ಹುಡುಕಲೇಬೇಕಾಗುತ್ತದೆ ರೂಪಕ ಪ್ರತಿಮೆಗಳ

ಮುಂಬರುವ ದಿನಗಳಲ್ಲಿ ನಾವು
ಬರೆಯಲೇಬೇಕೆಂದಿದ್ದರೆ ಪಂಪ ರನ್ನರ ಹಾಗೆ
ಮಹಾಕಾವ್ಯಗಳನ್ನು ಬರೆಯಬೇಕಾಗುತ್ತದೆ
'ಮನಮೋಹನವಿಜಯಂ', 'ಜನಾರ್ಧನವಿಜಯಂ'
'ಮಾಯಾವತಿ ಕಲ್ಯಾಣಂ', 'ಸೋನಿಯಾ ಮಹಾತ್ಮೆ'
'ಬಸುದೇವಚರಿತೆ', 'ಮೋದಿರಾಜಕಥನಂ' ದಂಥ
ಲೌಕಿಕ ಮಾರ್ಗ ಕಾವ್ಯಗಳ ಬರೆಯಬೇಕಾಗುತ್ತದೆ

'ರವಿಶಂಕರ ಮಹಾತ್ಮೆ', 'ನಿತ್ಯಾನಂದ ಪುರಾಣ'
'ರಾಘವೇಶ್ವರ ಮಹಿಮೆ', 'ಪೇಜಾವರ ಮಹಾತ್ಮೆ'
ಯಂಥ ಆಗಮಿಕ ಕಾವ್ಯಗಳ ಬರೆಯಬೇಕಾಗುತ್ತದೆ

ಪ್ರಭುಗಳೂ ಗುರುಗಳೂ ದಯಪಾಲಿಸಿದ
'ಕವಿಚಕ್ರವರ್ತಿ'ಗಳೆಂಬ ಬಿರುದನ್ನು ಧರಿಸಲೇಬೇಕಾಗುತ್ತದೆ

ಚಿಂತೆ ಬೇಡ,
ಸಾವಿರ ವರುಷಗಳ ಮೇಲೆ
ವಿಮರ್ಶಕರು ರೂಪಕಗಳ ಒಡೆದು
ಬಂಡಾಯದ ಬೀಜಗಳ ಹೊರತೆಗೆಯುತ್ತಾರೆ.

ಡಾ. ಎಂ.ಡಿ.ಒಕ್ಕುಂದ

ಅಪರೂಪದ ಫೋಟೋ



ಈ ಫೋಟೊ ತೆಗೆದದ್ದು ಸುಮಾರು 150 ವರ್ಷಗಳ ಹಿಂದೆ. 1866ರಲ್ಲಿ ಬೆಂಗಳೂರ[...] ಹೈಸ್ಕೂಲ್ (ಆನಂತರ ಅದು ಸೆಂಟ್ರಲ್ ಕಾಲೇಜ್ ಆಯಿತು) ವಿದ್ಯಾರ್ಥಿಗಳು ಪಾಸ[...] ಆದಾಗ ಅವರೆಲ್ಲ ತಮ್ಮ ಅಂದಿನ ಪ್ರಿನ್ಸಿಪಾಲರೊಂದಿಗೆ ತೆಗೆಸಿಕೊಂಡ ಚಿತ್ರವಿದು[...]

ರಾಮುಲು ದುಡ್ಡಲ್ಲಿ ಬದುಕೋದು ಒಂದು ಬಾಳೆ


"ಮುಂಗಾರು ಕತೆ ಮುಗೀತು ಅಂದ್ರೆ ಮುಂದೆ
ನಿಸಿ ಕತಿಯೇನೊ. ಎಳ್ಳು, ಜ್ವಾಳ, ಕಡ್ಲಿಕಾಳು,
ಕಾಳ ಕೊಳ್ಳಕ್ಯಾದತೇನ್ಲ?" ಎಂದು ಕಾಳಮಾವ
ನನ್ನು ಕೇಳುತ್ತಿರುವಾಗ ಉಗ್ರಿ ಮತ್ತು ಜುಮ್ಮಿ
ಕೊಂಡರು. ಆಗ ಕಾಳಮಾವ,
"ಅದೇನ್ಲ ಉಗ್ರಿ ಮಂಗಳೂರು ಗಲಾಟಿ?" ಎಂದ.
"ಮಂಗಳೂರು ಗಲಾಟಿ ಯಾವತ್ತೂ ಇದ್ದದ್ದೆಯ
ಮಾವ. ಅವುರೇನು ನಿನ್ನಂಗೆ ಮಳೆ ಬ್ಯಳೆ
ಕಂಡು ಬದುಕೊ ಜನವೇ?" ಎಂದ.
"ಯಾವೊ ಹುಡುಗ್ರು ಹುಟ್ಟಿದಬ್ಬ ಮಾಡಿಕಂಡು
ತ ಕುಂತಿದ್ದವಂತೆ ಕಣಮಾವ. ಅಲ್ಲಿಗೆ ನುಗ್ಗಿ
ವೊ ವಡದಾಟ ಮಾಡಿದ್ದವಂತೆ" ಎಂದಳು
ಮ್ಮಿ.

ಯಲುಸೀಮೆ

ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಅವುರ ಕರದಿರಲಿಲ್ಲವೇನೊ."
"ಏ ಕರಿಯಕ್ಕೆ ಅದೇನು ಮದುವೆ ಊಟನೊ,
ಊಟನೋ ಮಾವ. ಅದಂಗಲ್ಲ ಕಣಮಾವ.
ಗಳೂರಲ್ಲಿ ಬಿಜೆಪಿಗಳ ಹಾದರಕ್ಹುಟ್ಟಿದ ಜನಗಳ
ಳಿ ಜಾಸ್ತಿಯಂತೆ. ಅಂಗಾಗಿ ಒಂದಲ್ಲಾ ಒಂದು
ದಾಟ ನ್ಯಡಿತಲೇ ಇರತದೆ."
"ಬಿಜೆಪಿಗಳ ಹಾದರಕುಟ್ಟಿದೋರ್‍ಯಾರು?"
"ಈ ಭಜರಂಗಿಗಳು, ವಿಶ್ವ ಹಿಂದೂಗಳು,
ಮೂ ಜಾಗರಣೆ ಅಂತ ಹೇಳಕಂಡು ದಾನ್ನಿ
ಡೋರನ್ಯಲ್ಲ ವಾಟಿಸ್ಸೆಯಂಥೋರು ಬಿಜೆಪಿಗಳ
ರಕುಟ್ಟಿದ ಜನ ಅಂತ ತಮಾಸಿ ಮಾಡ್ತರೆ.
ಕಪ್ಪ ಅಂದ್ರೆ ಆ ನನ ಮಕ್ಕಳು ಮಾಡೋ ಕ್ಯಲಸ್ಯಲ್ಲ
ೇ ಇರತದೆ."
"ಅದೇನಂತ ಕ್ಯಲಸ ಮಾಡ್ಯರೂ?"
"ಈ ಸಾಬರುಡುಗಿರು ಮೈತುಂಬಾ ಭುರುಕಾ
ಕ್ಕಂಡು ಕಾಲೇಜಿಗೋದರಂತೆ. ಅದ್ಕೆ ಬುರ್ಕ
ಅಂತ ಗಲಾಟಿ ಮಾಡ್ಯವಂತೆ."
"ಸರಿಯಪ್ಪ, ಸಾಬರ ಜಾತಿಯೋರು ಬುರುಕಾ
ದ್ರೆ ಈ ನನ ಮಕ್ಕಳಿಗೇನಂತೆ? ಆದವುರಾಚರಣೆ."
"ಅವುರಿಷ್ಟ ಬಂದಂಗೆ ಬಟ್ಟೆ ಹಾಯ್ಕಂಡು
ರಿರಬವ್ರುದು ಅಂತ ಸಂವಿಧಾನನೆ ಹೇಳಿರುವಾಗ,
ರು ಹೋಗಿ ಅಂಗಂತ ಗಲಾಟೆ ಮಾಡ್ತರೆ. ಈ
ಬಂದ್ರೆ ಹಿಂದೂ ಹುಡುಗಿರು ಮೈತುಂಬಾ
ಹಾಕಿಲ್ಲ ಅಂತ ಹಿಡಕಂಡು ಹ್ವಡಿಯಕ್ಯೊಯ್ತರೆ.
ನನ ಮಕ್ಕಳಿಗೆ ಸರಿಯಾಗಿ ಬಲಿ ಹಾಕೋರೆ
ಇಲ್ಲ."
"ಅಂಗರದೆ ಗಲಾಟಿ ಅನ್ನು."
"ಗಲಾಟಿಯಾಗಿರದು ಅದಕ್ಕಲ್ಲ, ಯಾವುದೊ ಹುಡುಗ ಹುಟ್ಟಿದಬ್ಬ ಮಾಡಿಕಂಡು ತನಿಗೆ ಬೇಕಾದೋರ ಕರದು ಕ್ವಕ್ಕಕೋಲ, ಬೀರು ಕೊಟ್ಟ. ಅವುರ್‍ಯಲ್ಲ ಕುಡಕಂಡು ತಮಾಸಿ ಮಾಡಿಕೊಂಡು ಕುಂತಿದ್ರಂತೆ. ಆಗ ಬಿಜೆಪಿ ಪೋಲಿ ಬಡ್ಡೆತ್ತವು ಏಕದಂ ನುಗ್ಗಿ ಹೆಣ್ಣುಮಕ್ಕಳ ಬಟ್ಟೆ ಹರಿದು, ಮಲೆ ಹಿಸಗಿ, ಕ್ಯನ್ನಿಗೆ ಹ್ವಡದು, ದಾನ್ನಿ ಮಾಡಿಬುಟ್ಟವುರೆ. ಅದೇ ಗಲಾಟ."
"ಆ ನನ ಮಕ್ಕಳ ಸುಮ್ಮನೆ ಬುಟ್ಟದ್ದೇಳು."
"ಅವುರಿಗೆ ಅಂಥಾ ಧೈರ್ಯ ಯಂಗೆ ಬತ್ತು?" ಎಂದ ಸೀರ.
"ಅವುರದೇ ಸರಕಾರ ಇರುವಾಗ ಅಂತಾ ಧೈರ್ಯ ಬಂದೇ ಬತ್ತದೆ ಚಿಗಪ್ಪ" ಎಂದುಕೊಂಡು ವಾಟಿಸ್ಸೆ ಬಂದ.
"ಅಂಗಾರೆ ಸರಕಾರದಲ್ಲಿರೋರ ಮಕ್ಕಳೇನ್ಲ ಅವುರು."
"ನಿಜ ದೊಡಪ್ಪ, ಆ ತರ ದಾಳಿ ಮಾಡಿದೋರಿಗೆ ಇಲ್ಲೊಂದು ಸರಕಾರ ಅದೆ. ಅದರಲ್ಲಿ ಹೋಂಮಿನಿಷ್ಟ್ರ ಅಂತ ಅವುನೆ, ಅವುನ ಕೈ ಕೆಳಗಡೆ ಡಿ.ಜಿ, ಐ.ಜಿ, ಎಸ್ಪಿ ಪೊಲೀಸನೋರಿದ್ದು, ನಾವೇನಾದ್ರು ತಪ್ಪು ಮಾಡಿದ್ರೆ ಅವುರು ಸರಿಯಾಗಿ ಗೂಸಾ ಕೊಟ್ಟು ಹಾಕಬಾರದ ಕೇಸಾಕ್ತಾರೆ ಅನ್ನೊ ಭಯನೇ ಇಲ್ಲ ಅಂದ್ರೆ ಅಪರಾಧಿಗಳು ಆಳೊ ಪಕ್ಷದೋರ ಮಕ್ಕಳು ಅನ್ನಬೇಕಾಯ್ತದೆ."
"ಅಂಗರೆ ಸರಕಾರನೂ ತೆಪ್ಪು ಮಾಡಿದೋರ ಪರ ಅದೆ ಅನ್ನು."
"ಅದೆ ಅಂತ ಅಪರಾಧಿಗಳು ತಿಳಕಂಡಿದ್ರು. ಶೆಟ್ರು ಮರಿಯಾದಿ ಪುಶ್ನೆಯಾದ್ರಿಂದ ಅವುರನ್ಯಲ್ಲ ಅರೆಸ್ಟು ಮಾಡಿಸಿ ಹಾಕಬಾರದ ಕೇಸನ್ಯಲ್ಲ ಹಾಕಿ ವಳಗಾಕಿದ್ದರಂತೆ."
"ಅದರಿಂದ ಆ ನನ ಮಕ್ಕಳೇನೂ ಹೆದರಿಲ್ಲ ಕಣೊ ವಾಟಿಸ್ಸೆ. ಏನೋ ಮಾಡಬಾರ್ದ ಸಾಹಸ ಮಾಡಿದ್ವಿವಿ ಅಂತ ಬೆನ್ನ ತಟ್ಟಿಗತ್ತರೆ. ಅಂತ ಕೇಡಿ ನನ್ನ ಮಕ್ಕಳು."
"ಅವುರಿಗ್ಯಲ್ಲ ಸರಿಯಾಗಿ ನ್ಯೆಯ್ಯೊರಿದ್ರೆ ಯಾಕ್ಲ ಅಂಗೆ ಹೆಚ್ಚಗಂಡರು. ಅರೆಸ್ಟು ಮಾಡಿ ವಳಗಾಕದಲ್ಲ, ಅವುರಿಗ್ಯಲ್ಲ ಮೈನವ್ನ ತಗದು ಜೈಲಿಗಾಕಬೇಕು."
"ಅಲ್ಲಾ, ಉಣ್ಣತಾಯಿದ್ದೋರಿಗೆ ವಡದು, ಮಾನಭಂಗಮಾಡಿ ಬುಟ್ಟುವುರಲ್ಲಾ, ನನ್ನ ಕೈಗೆ ಸಿಕ್ಕಿದ್ರೆ ಆ ಮುಂಡೆ ಮಕ್ಕಳ ಹಿಡಕಂಡು ಮಕ್ಕುಗದು, ಹಳೆ ಯಕ್ಕಡದಲ್ಲಿ ವಡಿತಿನಿ ಕಂಡ್ಯ" ಎಂದಳು ಜುಮ್ಮಿ.
"ನೀನಂಗಂತಿ ಕಣಕ್ಕ. ನೀನು ಸೂಕುಶ್ಮೆ ಮನಸಿನ ಹೆಂಗಸು ಅಂಗಂತಿ. ನಮ್ಮ ಪ್ರಮೀಳಾ ನೇಸರ್ಗಿ ಏನಂದವುಳೆ ಗೊತ್ತೆ? ಹುಡುಗಿರು ಅಂಗ್ಯಲ್ಲ ಹೋಗಿ ಕ್ವಕ್ಕಕೋಲ ಕುಡಿಬಾರ್ದು ಅಂದವುಳೆ ಗೊತ್ತೆ."
"ಇನ್ನೇನು ಕುಡಿಬೇಕಂತೆ? ಅದ್ಯಾಕ್ಲ ಅಂಗೆ ಮಾತಾಡ್ತಳವುಳು?"
"ಯಾಕೆ ಅಂದ್ರೆ ಅವುಳ ಬಾಯಿ ಇರದೆ ಅಂಗೆ ಕಣಕ್ಕ. ಅವುಳ ಬಾಯಿ ನೋಡಿದ್ದಿಯಾ ನೀನು?"
"ನಾನ್ಯಾಕ್ ನೋಡಕ್ಯೋಗಲಿ ಅವುಳ ಹಾಳ ಬಾಯ."
"ಅಂಗೆ ಹೆಮ್ಮಿಗನೂರ ಹ್ಯಾಪವ್ವನ ಬಾಯಿದ್ದಂಗದೆ. ಅದ್ಕೆ ರೇಣುಕಾಚಾರಿ ಲವ್ವರ್ ಜಯಲಕ್ಷ್ಮಿನೆ ಬೈತಳೆ. ಈಗ್ಲೂ ಮಂಗಳೂರಲ್ಲಿ ದಾನ್ನಿ ಮಾಡಿದೋರ ಪರ ಮಾತಾಡ್ತಳೆ."
"ಸುಮ್ಮನಿರಕ್ಕೇನಾಗ್ಯದೆ ಅವುಳಿಗೆ?"
"ಸುಮ್ಮನಿರಕ್ಕೆ ಅವುಳೇನು ಬಿಎಸ್ಸಾರ್ ಪಾರ್ಟಿ ಲೀಡರೇನೊ ಉಗ್ರಿ?"
"ಅದ್ಯಾಕಪ್ಪ ಅಂಗಂತಿ?"
"ಬಿಎಸ್ಸಾರ್ ಪಾರ್ಟಿ ರಾಮುಲುಗಾರು ಕಾರವಾರದಿಂದ ರಾಮನಗರದವರೆಗೂ ಸಭೆ ಮಾಡ್ತ ಕುಂತವುನೆ. ಅವುನು ಅಪ್ಪಿತಪ್ಪಿ ಮಂಗಳೂರು ಇನ್ಸಿಡೆಂಟ್ ಬಗ್ಗೆ ಬಾಯಿಬುಟ್ಟಿದ್ದೇಳ್ರಿ."
"ಅವುನ್ಯಾಕೆ ಬಾಯಿಬುಡಬೇಕಾಗಿತ್ತ?"
"ಮುಂದಿನ ಮುಖ್ಯಮಂತ್ರಿ ಅವುನೆಯಂತೆ. ಅವುನ ಸಭೇಲಿ ಭಾಷಣ ಮಾಡೋರ್‍ಯಲ್ಲ ಮದ್ಲು ಹೇಳೋ ಮಾತು ಅದೆಯ."
"ಅಂಗರವುನು ಮುಖ್ಯಮಂತ್ರಿಯಾದನೆ?"
"ಯಾಕಾಗಬಾರದು ದೊಡಪ್ಪ? ಯಂತ್ಯಂಥೋರೊ ಆಗಿರುವಾಗ ಅವುನ್ಯಾಕಾಗಬಾರ್ದು ಅಂತ ಅವುನಿಂದ ಕಾಸು ತಗೊಂಡೋವ್ಯಲ್ಲ ಕುಣೇತಾ ಅವೆ."




"ಅವುನೇನೊ ಆರೇಳು ಕೋಟಿ ರೂಪಾಯಿ ಬಸ್ಸಲ್ಲಿ ಓಡಾಡ್ತ ಇದ್ದನಂತೆ. ಆ ಬಸ್ಸು ನೋಡಬೇಕು ಕಂಡ್ಲ" ಎಂದ ಸೀರ.
"ಇಲ್ಲಿಗೆ ಕರಸನ ಇರು ಚಿಗಪ್ಪ."
"ಅವುನ್ನ ಕರಸಬೇಕಾದ್ರೆ ನೀನು ಅವುನ ಪಾರ್ಟಿ ಸೇರಬೇಕಾಯ್ತದೆ ಕಣೊ" ಎಂದ ಉಗ್ರಿ.
"ಅವುನ ಪಾರ್ಟಿ ಸೇರದೇನು ಅಂತ ಅವುಮಾನಲ್ಲ ಕಣೊ ಉಗ್ರಿ. ಲಂಕೇಶ್ ಪತ್ರಿಕೆಲಿದ್ದುಕೊಂಡು ಸರಕಾರನೆ ಅಲ್ಲಾಡುಸ್ತಯಿದ್ದ ನನ್ನ ಕ್ಲೋಸ್ ಫ್ರೆಂಡ್ಸ್ ರವೀಂದ್ರ ರೇಷ್ಮೆ ದ್ವಾರಕನಾಥ ಅನ್ನೊರೆ ಹೋಗಿ ಸೇರಿಕಂಡವುರೆ. ಅವುರಿಗೆ ನಾನೊಂದು ಸೂಚನೆ ಕೊಟ್ರೆ ಈಗ್ಲೆ ಮನೆತಕ್ಕೆ ರಾಮುಲು ಕಾರು ಕಳುಸ್ತರೆ ಗೊತ್ತೆ."
"ಅಂಗರೆ ಸೇರಿಕಂಡು ವಸಿ ದುಡ್ಡು ಮಾಡಿಕಳೋ ಅತ್ತಗೆ."
"ಅಂಗರೆ ದುಡ್ಡಲ್ಲಿ ಕಾಲ ಮಾಡಿದ್ರೆ ಜನ ಏನಂತರೊ ಉಗ್ರಿ. ಈ ವಾಟಿಸ್ಸೆಗಿರೊ ವಳ್ಳೆ ಹೆಸರುಳಿತದಾ, ಸಮಾಜದಲ್ಲಿ ಮುಖ ಎತ್ತಿಕೊಂಡು ತಿರಗಕ್ಯಾಯ್ತದಾ, ಎಲ್ಲಾರ ದನಿ ಎತ್ತಿ ಮಾತಾಡಕ್ಯಾಯ್ತದಾ. ಅದೂ ಒಂದು ಬಾಳೆ, ಥೂ!!"
"!?"

ಎಲ್ಲಿ ಸೇರಿ ಸ್ಫೂರ್ತಿ ▶▶▶

ಏನನ್ನಾದರೂ ಮಾಡುವುದಕ್ಕೆ ಸಮಯ ಸಿಕ್ಕದಿದ್ದರೆ, ಬಿಡುವಾಗದಿದ್ದರೆ ಗ್ರಾಮಸ್ಥರು 'ನನಗೆ ಕೂಡಲಿಲ್ಲ'
ನ್ನುತ್ತಾರೆ. ಹೇಗೆ ಅದು 'ಕೂಡಲಿಲ್ಲ' ಆಗುತ್ತದೆ. ಇದು ವೇಳೆಯ ಬಗ್ಗೆ, ಕೆಲಸದ ಬಗ್ಗೆ, ಮಾನಸಿಕ ಸ್ಥಿತಿಯ ಬಗ್ಗೆ
ಳುತ್ತದೆ ಎಂದು ನನಗನ್ನಿಸುತ್ತದೆ. ನಿನಗೆ ಬೇಕಾದಷ್ಟು ವೇಳೆ ಇರುತ್ತದೆ. ಆದರೆ ಮನಸ್ಸು ತಲ್ಲಣಗೊಂಡಿರುತ್ತದೆ;
ನಸ್ಸು ಶಾಂತವಾಗಿರುತ್ತದೆ, ಆದರೆ ಬೇರೆ ಕೆಲಸಗಳು ಬೇಕಾದಷ್ಟಿರುತ್ತವೆ. ಮನಸ್ಸು, ವಿರಾಮ-ಎಲ್ಲ ಇದ್ದರೂ
ವಿಶಿಷ್ಟ ಕೆಲಸಕ್ಕೆ ಬೇಕಾದ ಸ್ಫೂರ್ತಿ ಇರುವುದಿಲ್ಲ. ದೈವಭಕ್ತನಿಗೆ ಲೌಕಿಕ ವಿಷಯ, ಜೂಜುಕೋರನಿಗೆ
ಸಾರದ ವಿಷಯ, ಕ್ರಾಂತಿಕಾರನಿಗೆ ದಿನನಿತ್ಯದ ಸಾಮಾನ್ಯ ವಿಷಯ ಸ್ಫೂರ್ತಿಯನ್ನೇ ಕೊಡುವುದಿಲ್ಲ.
ದ್ದರಿಂದ ಅದನ್ನೆಲ್ಲ ಮಾಡಲು ವ್ಯಕ್ತಿಗೆ 'ಕೂಡಲಿಲ್ಲ'. ಇದನ್ನು ನಾನು ಸುಮ್ಮನೇ ಬರೆದಿದ್ದೇನೆ. ನಮ್ಮಲ್ಲಿರುವ
ನೇಕ ವಿಶಿಷ್ಟ ನುಡಿಕಟ್ಟುಗಳು ಹೇಗೆ ಮಾಯವಾಗುತ್ತವೆ ಎಂದು ಅಚ್ಚರಿಯಾದ್ದರಿಂದ ಹೇಳಿದ್ದೇನೆ.

ಮನುಷ್ಯ ಕಟ್ಟಿದ್ದು

ಮನುಷ್ಯರ ದೃಷ್ಟಿಯಿಂದ ನೋಡಿದಾಗ ಎಲ್ಲವೂ ಕ್ರಿಯಾಶೀಲತೆಯಂತೆ, ಪ್ರತಿಭೆಯ
ಧನೆಯಂತೆ ಕಾಣುತ್ತದೆ; ಪ್ರಕೃತಿಗೆ ಆಗುತ್ತಿರುವುದನ್ನು ನೋಡಿದರೆ ವ್ಯಸನವಾಗುತ್ತದೆ.
ಂದು ರೀತಿಯಲ್ಲಿ ಯೂರೋಪ್ ಇಡಿಯ ಮನುಷ್ಯ ಸೃಷ್ಟಿಸಿದ ಮಹಾನ್ ನಾಗರಿಕತೆ;
ಲ್ಲಿರುವ ಮನೆಗಳು, ಬ್ಯಾಂಕ್‌ಗಳು, ಫ್ಲ್ಯಾಟ್‌ಗಳು, ಕಚೇರಿಗಳು, ಶಾಲೆ ಕಾಲೇಜುಗಳು
ನಸ. ಇತಿಹಾಸ ಎಂದೂ ಕಂಡರಿಯದಂಥವು. ಇಲ್ಲಿ ಗಗನಚುಂಬಿಗಳೇ
ನುಷ್ಯಸಾಧನೆಯ ಬೃಹತ್ ಸಾಕ್ಷಿಗಳಂತಿವೆ; ಯೂರೋಪಿನ ಚರ್ಚುಗಳು
ನೂರಾರು ವರ್ಷದಿಂದ ನೀಲಿ ಆಕಾಶಕ್ಕೆ ತಲೆಯೆತ್ತಿ ನಿಂತಿವೆ. ಚರ್ಚ್ ಬಗ್ಗೆ
ಸ ಹೇಳುತ್ತಿರುವಾಗಲೇ ಒಂದು ಅಂಶ ನೆನಪಾಗುತ್ತಿದೆ. ವಿಲಿಯಂ
ಗೋಲ್ಡಿಂಗ್ ಎಂಬ ಪ್ರಖ್ಯಾತ ಕಾದಂಬರಿಕಾರ 'ಸ್ಪೈರ್' ಎಂಬ ತನ್ನ
ಕಾದಂಬರಿಯಲ್ಲಿ ಚರ್ಚಿನ ಗೋಪುರವನ್ನು ಬೆಳೆಸುತ್ತ ಹೋದ ಬಗ್ಗೆ
ರೆದ. ಮನುಷ್ಯನ ದೈವಭಕ್ತಿ ಕೂಡ ಅತಿರೇಕಕ್ಕೆ ಹೋಗಬಲ್ಲದು.
ವ, ಭಕ್ತಿಯೇ ಆತನ ಅಹಂಕಾರವಾಗಬಲ್ಲದು; ಆತ ತನ್ನ ಭಕ್ತಿಯ



ಅಹಂಕಾರದಲ್ಲಿ ಚರ್ಚಿನ ಗೋಪುರವನ್ನು ಕಟ್ಟುತ್ತ ಹೋಗಿ ಜನಕ್ಕೆ ಬಿಸಿಲು, ಗಾಳಿ ಬಾರದೆ ಇರುವುದಕ್ಕೆ ಕಾರಣನಾಗುತ್ತಾನೆ. ಭಕ್ತನಾದ ವಾಸ್ತುಶಿಲ್ಪಿಯ ದೃಷ್ಟಿಯಲ್ಲಿ ಅದು ಕ್ರಿಯಾಶೀಲತೆ, ತನ್ನ ಭಕ್ತಿಯ ಪ್ರತೀಕ. ಆದರೆ ಬಿಸಿಲು, ಗಾಳಿ ಬಯಸುವ ಜನರ ದೃಷ್ಟಿಯಲ್ಲಿ ಅದು ಮಾನವ ದ್ರೋಹ, ಜೀವದ್ರೋಹ.


ಇದನ್ನರಿಯದ ಯೂರೋಪಿನ ನೂರಾರು ಜನ ವಾಸ್ತುಶಿಲ್ಪಿಗಳು ಅಸಂಖ್ಯಾತ ಮನೆಗಳನ್ನು, ಆಫೀಸುಗಳನ್ನು, ನಗರಗಳನ್ನು, ಮ್ಯೂಸಿಯಂಗಳನ್ನು, ಆಪೆರಾ ಭವನಗಳನ್ನು ಕಟ್ಟಿದ್ದಾರೆ. ಫ್ರಾನ್ಸ್‌ನ ನಾಯಕರು ಈ ಅವಿವೇಕಕ್ಕೆ ಪ್ರಖ್ಯಾತರು. ದೊರೆ ಹದಿನಾಲ್ಕನೆ ಲೂಯಿಯ ಕಲಾವಿದರು ಹಿಮಾಲಯದಂಥ ಕಟ್ಟಡಗಳನ್ನು ಕಟ್ಟಿದರು; ವಾರ್ಸೈಲ್ಸ್‌ನಲ್ಲಿರುವ ಕಟ್ಟಡಗಳು ಅವರ ಭ್ರಮೆಯನ್ನು ತೋರುತ್ತವೆ. ಹಾಗೆಯೇ ಈ ಶತಮಾನದಲ್ಲಿ ಪಾಂಪಿಡೋ ಎಂಬ ನಾಯಕ ಪ್ಯಾರೀಸ್‌ನಲ್ಲಿ ಪ್ರಚಂಡ ಕಟ್ಟಡಗಳನ್ನು ಕಟ್ಟಿದ; ಆತನನ್ನು ಮೀರಿಸುವುದಕ್ಕಾಗಿ ಮೊನ್ನೆ ತೀರಿಕೊಂಡ ಅಧ್ಯಕ್ಷ ಮಿತೆರಾ ತನ್ನ ಹೆಸರನ್ನು ಅಮರಗೊಳಿಸಬಲ್ಲ ಸರ್ಕಾರಿ ಭವನಗಳನ್ನು ಕಟ್ಟಿಸಿದ.

ಇಡೀ ಯುರೋಪ್ ಈ ಬಗೆಯ ಭ್ರಾಮಕಗಳಿಂದ ತುಂಬಿದೆ; ವಾಸ್ತುಶಿಲ್ಪಿಗಳ, ಕಲಾವಿದರ, ಲೇಖಕರ ಧಿಮಾಕಿನ ಅಭಿವ್ಯಕ್ತಿಯಾಗಿ ಲೈಬ್ರರಿಗಳು, ಮ್ಯೂಸಿಯಂಗಳು ನಿಂತಿವೆ. ಕಲಾವಿದನಾದವನು ಕಟ್ಟುವ ಕಟ್ಟಡದಲ್ಲಿ ಮುಗ್ಧತೆ ಇರಬೇಕು; ಮನುಷ್ಯನ ಸೃಷ್ಟಿ ಪ್ರಕೃತಿಯ ಕ್ರಿಯೆಗಳಿಗೆ ಪೂರಕ ಎನ್ನುವುದು ಅವನಿಗೆ ಗೊತ್ತಿರಬೇಕು. ಇಲ್ಲದಿದ್ದರೆ ದೂರದಿಂದ ನೋಡಿದರೆ ಹುತ್ತದಂತೆ ಕಾಣುವ ಒಂದು ನಗರ, ಹತ್ತಿರದಿಂದ ನೋಡಿದರೆ ವಿಕೃತ ಗೊಂಡಾರಣ್ಯವಾಗುತ್ತದೆ; ಎಲ್ಲರಲ್ಲೂ ಭಯ ಹುಟ್ಟಿಸುವ ಸೃಷ್ಟಿಯಾಗುತ್ತದೆ.

ಮನುಷ್ಯ ಮುಲಭೂತವಾಗಿ ಕಟ್ಟುವನು, ಈವಿಲ್. ಈತನನ್ನು ಒಂದು ಪಾರ್ಕಿಗೆ ಬಿಟ್ಟರೆ ಅದನ್ನು ನಾಶಮಾಡಿ ಅಲ್ಲಿ ಕಟ್ಟಡಗಳನ್ನೋ ಕಂಬಗಳನ್ನೋ ನೆಟ್ಟು ಬಿಡುತ್ತಾನೆ. ಅದು ತನ್ನ ಕಲಾಸೃಷ್ಟಿ ಎಂದು ತಿಳಿಯುತ್ತಾನೆ.

ಇಡೀ ಯುರೋಪ್ ಘನೀಭೂತ ಈವಿಲ್ ಅನ್ನಿಸಿದರೆ ಆಶ್ಚರ್ಯವೇನು?

-ಜುಲೈ 30, 1997



ಮರೆಯುವ ಮುನ್ನ

▸ ಬಿ.ಲಂಕೇಶ್

ಪೊಲೀಸ್ ಪವರ್ರ ಔಟ್‌ಸೋರ್ಸ್ ಮಾಡವ್ರಂತೆ!

ಹಿಂದೂ ಜಾಗರಣಾ ವೇದಿಕೆ ಅಂದ್ರೆ ಎಲ್ರೋ ತಲ್ಲೆ ಬಡ್ಕೊಳ್ರು. ಮಾಡೋಕೆ ಕೆಲಸ ಇಲ್ದೆ ಗೂಂಡಾಗಿರಿ ಮಾಡ್ತಾ ಇರ್ತವೆ ಅಂದುಕೊಂಡಿದ್ರೆ ಪಾಪ ಅವರು ಅಂತೋರಲ್ಲವಂತೆ. ಬುರುಕಾ ಹಾಕ್ಕೊಳ್ತಾರಲ್ಲ ಅದ್ಕೆ' ಅಂತಾ ಓಟ ಕೀಳ್ತಾವಂತೆ!

ಇಂತಹ ಅರಿವುಗೆಟ್ಟವರ ಮಾತ ಬಿಸಾಕಿ. ಹಿಂದೂ ಸಂಸ್ಕೃತಿಯ ಲಕ್ಷಣಗಳನ್ನೆಲ್ಲ ಎಲ್ಲರೂ (ಅಂದರೆ ಎಲ್ಲರೂ




ಹಿಂದೂ ಸಂಸ್ಕೃತಿ ಉಳಿಸಲು ಹೋರಾಡುತ್ತಿರುವ ಕಟ್ಟಾಳುಗಳಂತೆ. ಹೇಗೆ ಉಳಿಸ್ತಾರಂತೆ ಅಂದ್ರೆ ದಾರಿ ತಪ್ಪಿದ ಮಕ್ಕಳಿಗೆ ತಂದೆತಾಯಿಗಳು ಹೊಡೆದು ಬಡಿದು ಬುದ್ಧಿ ಮಾತು ಹೇಳಲ್ವ ಹಂಗೇ ಅಂತೆ!

ಹಿಂದೂ ಸಂಸ್ಕೃತಿ ಅನ್ನೋದು ಹುಡುಗೀರ ಡ್ರೆಸ್ಸಲ್ಲದೆ ಅಂತ ಸಂಶೋಧನೆ ಮಾಡಿದ್ದಾರಂತೆ. ಅದಕ್ಕೇ ತುಂಡುಡುಗೆ ತೊಡೋರ ಕಂಡರೆ ಅವರ ಕಣ್ಣು ಕೆಂಪಗಾಯ್ತದಂತೆ. ಯಾಕೆ ಅಂದ್ರೆ ಮೈತುಂಬಾ ಬಟ್ಟೆ ಹಾಕ್ಕೊಳೋದು ಹಿಂದೂ ಸಂಸ್ಕೃತಿ ಅಲ್ವ ಅದಕ್ಕಂತೆ. ಹಂಗಂತ ಇವರು ಅಂದ್ರೆ 'ಹಂಗಾದ್ರೆ ಮುಸಲ್ಮಾನ ಸಂಸ್ಕೃತಿ ಹಿಂದೂ ಸಂಸ್ಕೃತೀಗಿಂತ ಮೇಲು' ಅಂತ ಕೆಲವು ಅರಿವುಗೆಟ್ಟೋವು ತಕರಾರು ಎತ್ತವಂತೆ. 'ಅದೆಂಗ್ರೀ' ಅಂತ ಅವರ ಮೇಲೆ ಇವರು ಎಗರಿಬಿದ್ರೆ 'ಅವರ ಹೆಂಗಸರು ತಲೆಯಿಂದ ಪಾದದತನಕ ಅಲ್ಲ, ಹಿಂದೂ ಯುವತಿಯರು) ಕಡ್ಡಾಯವಾಗಿ ಪರಿಪಾಲಿಸಲೇಬೇಕಂತೆ. ಹಿಂಗಂತ ಹಿಂದೂ ಜಾಗರಣ ವೇದಿಕೆಯವರು ಸಾರಿ ಸಾರಿ ಹೇಳ್ತಿದಾರಂತೆ. ಇದನ್ನ ಮೀರಿದ ನಡವಳಿಕೆಗೆ ಕಠಿಣ ಶಿಕ್ಷೆ ನೀಡ್ತೀವಿ ಅಂತಾನೂ ಪ್ರಚಾರ ಮಾಡವ್ರಂತೆ. ಇದೇನು ಗುಮ್ಮನ ಗುಸಗುಸಂತೆ ಒಳೊಳಗೆ ಮಾಡಿದ್ದಲ್ಲ ರಾಜಾರೋಷವಾಗಿ ಹೇಳ್ತಿದಾರಂತೆ. ಯಾಕೇಂದ್ರೆ ಅವರು ರಣಹೇಡಿಗಳಲ್ಲ, ನೈತಿಕತೆ ರಕ್ಷಣೆಗೆ ನಿಂತಿರುವ ಧೀರರಲ್ವಾ ಅದ್ಕೆ. ಹೀಗೆ ಹೇಳಿದ ಮೇಲೂ ನಾವು ಮೀರೇ ಮೀರ್ತೀವಿ ಅನ್ನೊ ಹಂಗೆ ನಡೆದುಕೊಳ್ಳೋವ್ರ ಧಿಮಾಕಿನೋವು ಅಂತಾನೆ ಅರ್ಥ ಅಲ್ವಾ. ಅಂತಹವಕ್ಕೆ ಸರಿಯಾಗಿ ಬುದ್ಧಿ ಕಲಿಸಬೇಕಾಯ್ತದೆ. ಯಾಕೆಂದರೆ ಹಿಂದೂ ಸಂಸ್ಕೃತಿ ಮುಖ್ಯನೋಡಿ ಅದಕ್ಕೆ!

ಮಂಗಳೂರು ಇದೆಯಲ್ಲ ಅದು ಬುದ್ಧಿವಂತರ ಜಿಲ್ಲೆ ಅಂತಾರೆ. ಆದರೆ ಅಲ್ಲೇನಾಗದಂತೆ ಈ ಸಾಬರು, ಕಿರಿಸ್ತಾನದೋರು ಸೇರಿಕೊಂಡು ಹಿಂದೂ ಸಂಸ್ಕೃತಿ ನಾಶಕ್ಕೆ ಸಂಚು ಮಾಡ್ತಾನೆ ಅವ್ರಂತೆ. ಇವರ ನಡೇನ ಗುಮಾನಿಯಿಂದ ನೋಡ್ತಾ ಇರ್ತಾರಂತೆ. ಅದ್ಕೇ ಇವರು ಅವರಿಗೆ ಗೊತ್ತಿಲ್ಲದಂಗೆ ಗುಪ್ತಚರ ವಿಭಾಗಾನೇ ತೆರೆದಿದ್ದಾರಂತೆ. ಒಂದು ಕಡೆ ಸಾಬರು, ಇನ್ನೊಂದು ಕಡೆ ಇವರು ತಮ್ಮ ಚಲನವಲನಗಳ ಬಗ್ಗೆ ಹದ್ದಿನಕಣ್ಣು ಬಿಟ್ಟಿರುತ್ತಾರೆ ಅಂತ ಗೊತ್ತಿದ್ರೂ ಪಡ್ಡೆ ಹೈಕ್ಳು ಇರ್ತಾವಲ್ಲ ಅವೇನು ಮಾಡ್ತಾವಂತೆ ಅಂದ್ರೆ ಯಾವುಯಾವುದೋ ನೆಪದಲ್ಲಿ ರೇವ್‌ಪಾರ್ಟಿ ಮಾಡ್ಕೊಂಡು ಮೋಜುಮಸ್ತಿ ಮಾಡ್ತಾವಂತೆ. ಊರುತುಂಬಾ ಗುಪ್ತಚಾರರೇ ಇರುವಾಗ ಇದು ನೈತಿಕ ಪೊಲೀಸರಿಗೆ ತಿಳಿದೇ ಇರುತ್ತಾ, ಹಿಂಗಿಂಗೆ ಯುವಕ ಯುವತಿಯರು ರೇವ್ ಪಾರ್ಟಿ ಮಾಡ್ತಾ ಅವ್ರೆ ಅಂತ ಸುದ್ದಿ ಕಿವೀಗೆ ಬೀಳ್ತಿದ್ದಂಗ ಧೀರಪಡೆ ಅಲ್ಲಿಗೆ ನುಗ್ಗುತ್ತಂತೆ. ಅಲ್ಲಿರೋರ್ನೆಲ್ಲಾ ಹಿಗ್ಗಾಮುಗ್ಗಾ ಬಡೀತಾರಂತೆ. ಆ ಹೊಡೆತ ಹೆಂಗಿರುತ್ತೆ ಅಂದ್ರೆ 'ಹೊನ್ನಾಳಿ ಹೊಡೆತ' ಅಂತಾರಲ್ಲ ಇದರ ಮುಂದೆ ಅದು ಏನೇನೂ ಅಲ್ಲವಂತೆ. ಅದ ತಿಂದೋರು ಸಾಯೋತನಕ ಮರೀಬಾರದು ಹಂಗೆ ಇರುತ್ತಂತೆ. ಎಷ್ಟೇ ಆಗ್ಲಿ ಇಂತಹ ಕೆಲಸಕ್ಕೆ ಅಂತ್ಲೆ ಸಾಕಿರೋ ದೇಹ ಅಲ್ವಾ ಅದು!

ಇತ್ತೀಚೆಗೆ ಏನಾಗದೆ ಆ ಊರಲ್ಲಿ ಪಡೀಲು ಅಂತ ಒಂದು ಏರಿಯಾ ಇದ್ದತ್ತಂತೆ. ಅಲ್ಲಿ ಹೋಂಸ್ಟೇ ಅಂತಾವ ಒಂದು ಇತ್ತಂತೆ. ಹಿಂದೂ ಜಾಗರಣ ವೇದಿಕೆಗೆ ಗೊತ್ತಿಲ್ವ ಇವುಗಳ ಬೇಳೆ ಕಾಳು ಏನೂ ಅಂತ. ಅವೆಲ್ಲ ವೇಶ್ಯಾವಾಟಿಕೆಗಳು ಅಂತ ಪತ್ತೆ ಹಚ್ಚಿದ್ದರಂತೆ. ಹಿಂದೂ ಸಂಸ್ಕೃತಿ ಅಲ್ಲಿ ನಾಶ ಆಗುತ್ತಿದೆ ಎಂಬುದನ್ನು ಪತ್ತೆ ಮಾಡಿದ್ದರಂತೆ. ಸೆಕ್ಸ್ ಟೂರಿಸಂಗೆ ಪೂರಕವಾಗಿರುವ ಇಂತಹವುಗಳನ್ನು ಮುಚ್ಚಿಸಬೇಕು ಅಂತ ಯೋಚಿಸುತ್ತಿದ್ದರಂತೆ. ಅಂತಹ ಸುವರ್ಣ ಅವಕಾಶ ಸಿಕ್ಕಿತಂತೆ. ಯಾವ್ರೋ ಪಡ್ಡೆ ಹೈಕಳು ಬರ್ತ್‌ಡೇ ಪಾರ್ಟಿ ಅಲ್ಲಿ ಮಾಡ್ತಿರೋದು ತಿಳೀತಂತೆ. ಪೊಲೀಸ್ನೋರುವೆ ಅದು ರೇವ್ ಪಾರ್ಟಿ ಅಲ್ಲ ಬರ್ತ್‌ಡೇ ಪಾರ್ಟಿನೆ ಅಂದವ್ರೆ. ಅವರ ಮಾತಿಗೆ ಕಿಲುಬುಕಾಸಿನ ಬೆಲೆಯೂ ಇಲ್ಲ ಬಿಡಿ. ಅಲ್ಲಿನ ಜನರಿಗಿಂತ ಅವರಿಗೆ ಏನು ಗೊತ್ತಿರುತ್ತೆ? ಅದು ರೇವ್ ಪಾರ್ಟಿನೆ ಹೌದು ಅಂತಾವಾ ಹಿಂದೂ ಜಾಗರಣ ವೇದಿಕೆಯವರು ತೀರ್ಮಾನಿಸಿದರಂತೆ. ಅವರು ಸ್ಥಳೀಯರೇ ಅಲ್ಲವಾ. ಅದಕ್ಕೆ ಆ ತೀರ್ಮಾನಕ್ಕೆ ಬಂದರಂತೆ. ವಿಷಯ ತಿಳಿದ ತಕ್ಷಣ ಹಿಂದೂ ಧರ್ಮ ರಕ್ಷಕ ಧೀರರೂ ಅಲ್ಲಿಗೆ ನುಗ್ಗಿದರಂತೆ. ಅಂತೆ



ಎಚ್. ಎಲ್. ಕೇಶವಮೂರ್ತಿ

ಅಣಕ

ಏನು ಬಂತು. ನುಗ್ಗಿದರು ಅಂತಾನೆ ಹೇಳಬ… ಯಾಕೆಂದರೆ ಅದು ಎಲ್ಲ ಟಿವಿ ಚಾನೆಲ್‌ಗಳಲ್ಲೂ ಪದೆ… ಬಿತ್ತರಗೊಂಡಿತ್ತು, ಹಿಂದೂ ಸಂಸ್ಕೃತಿ ರಕ್ಷಕರು ಹೆಣ್ಣು ಗಂಡುಗಳನ್ನು ಹಿಗ್ಗಾಮುಗ್ಗಾ ಥಳಿಸಿದರು. ಸಿನಿಮಾಗಳಲ್ಲಿ ಮೊದಮೊದಲು ನ್ಯಾಯವಾಗಿ ಮಾಡೋರಿಗೆ ವಿಲನ್‌ಗಳು ಹೊಡೆದುಬಡಿದು ಮಾ… ಹಂಗಿತ್ತು ಆ ಸೀನು. ಏನೋ ಎಂತೋ ಅಂತೂ ಹಿ… ಧರ್ಮ ರಕ್ಷಣೆ ಆಯಿತು!

ನಮ್ಮ ಜನಕ್ಕೆ ಏನಾಗಿದೆಯೋ ಕಾಣೆ. ಅವಕ್ಕೆ ಹಿ… ಸಂಸ್ಕೃತಿ ಉಳಿಯೋದೇ ಬ್ಯಾಡವಾ ಅಂತೀನಿ. … ನಮ್ ಕೈಲಿ ಅದು ಉಳಿಸೋಕೆ ಆಗ್ತಾ ಇಲ್ಲ, ಇವರ… ಅದರ ರಕ್ಷಣೆಗೆ ಕಟಿಬದ್ಧರಾಗಿದ್ದಾರಲ್ಲ ಅಂತ ಸಂತೋ… ಆ ಶೂರರನ್ನ ತಾರೀಫು ಮಾಡಬೇಕಾಗಿತ್ತಲ್ಲವಾ. ಉ… ರಾಜ್ಯದಾದ್ಯಂತ ಪ್ರತಿಭಟನೆ ಮಾಡ್ತಾ ಕುಂತವ್ರೆ. ವಿಕೃತ ಕಾಮಿಗಳು. ಅಮಾಯಕ ಹೆಣ್ಣು ಮ… ಹಿಂದಿನಿಂದ ತಬ್ಬಿಕೊಂಡಿದ್ದರು' ಅಂತಾರೆ. ಈ… ಏನು ಮಾಡಿದರೂ ತಪ್ಪು ಕಣ್ರೀ. ಹಿಂದಿನಿಂದ ಹಿಡ… ಅಂತಾ ಆರೋಪ ಮಾಡ್ತಿದಾರೆ. ಇನ್ನೇನು ಮುಂದಿ… ತಬ್ಬಿಕೊಳ್ಳಬೇಕಾಗಿತ್ತಾ ಅಂತೀನಿ. ಹಂಗೆ ಮಾಡಿದ್ರೆ… ಒಂದು ಕತೆ ಕಟ್ತಿದ್ರು. ಇದು ಸಾಲದು ಅಂತ ಯಾವ… ತಲೆಹಿಡುಕ ಶಾಸಕ ರೇವ್ ಪಾರ್ಟಿ ಮಾಡಿದ್ರು; ಇನ… ಸದನದಲ್ಲಿ ಬ್ಲೂ ಫಿಲಂ ನೋಡಿದ್ರು; ಇನ್ಯಾವುನೋ… ಸ್ನೇಹಿತನ ಹೆಂಡತೀನೆ ಹಿಡ್ಕೊಳೋಕೆ ಹೋ… ಮತ್ತ್ಯಾವುದೋ ಕಾಮುಕ ಶಾಸಕ ನರ್ಸ್ ಮಡಿಕ್ಕ… ಇಂತಹವೆಲ್ಲ ಬಯಲಾಯಿತಲ್ಲ ಆಗ ಎಲ್ಲಿಹೋಗಿತ್ತು… ಹಿಂದೂ ಸಂಸ್ಕೃತಿ ರಕ್ಷಣಾ ಪಡೆ ಅಂತೆಲ್ಲ ಓಬೀರ… ಕಾಲದ ಕತೇನೆಲ್ಲ ಹೇಳ್ತಾಬಿದ್ದವೆ. ಆಗೇನೋ ರಕ್ಷಣೆ ನಿ… ಸಾಧ್ಯ ಆಗಿರಲಿಲ್ಲ, ಹಂಗಂತ ಈಗಲೂ ತೆಪ್ಪಗಿರಬ… ಅನ್ನೋದು ಯಾವ ನ್ಯಾಯ ಅಂತೀನಿ!


ಇವರು ಹಾಳಾಗಲಿ. ಸಾಣೇಹಳ್ಳಿ ಪಂಡಿತಾರಾ… ಏನು ಬಂತು ಕೇಡು ಅಂತೀನಿ. ಯಾವುದು ಹಿ… ಸಂಸ್ಕೃತಿ? ಹಿಂದೂ ಧರ್ಮ ಅನ್ನುವುದೇ ಇಲ್ಲ…

ದಾಳಿಯ ಹಿಂದೆ ಬಂಟರ ಮೇಲಿನ ದ್ವೇಷ?

ಮಂಗಳೂರಿನಲ್ಲಿ ಬರ್ತ್ ಡೇ ಪಾರ್ಟಿ ಮೇಲಾದ ದಾಳಿಗೆ ಮೂಲಕಾರಣ ಬಿಜೆಪಿ ಮತ್ತು ಆರೆಸ್ಸೆಸ್ ನಡುವೆ ಮೇಲಧಿಕಾರಕ್ಕೆ ನಡೆಯುತ್ತಿರುವ ಗುದ್ದಾಟ. ಹಾಲಾಡಿ ಶ್ರೀನಿವಾಸ ಶೆಟ್ಟಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ



ಕೊಟ್ಟದ್ದಾರಲ್ಲದೆ ನಾಗರಾಜ ಶೆಟ್ಟಿ ಕೂಡ ತಮ್ಮ ಬಿಜೆಪಿ ಸದಸ್ಯತ್ವಕ್ಕೆ ಮತ್ತು ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇವರುಗಳ ರಾಜೀನಾಮೆಯಿಂದಾಗಿ ಆರೆಸ್ಸೆಸ್ ಮತ್ತು ಬಿಜೆಪಿಯ ಜನಪ್ರಿಯತೆ ಕುಗ್ಗಿದೆ. ಅದಕ್ಕಿಂತ ಮಿಗಿಲಾಗಿ ಹಾಲಾಡಿ ಶ್ರೀನಿವಾಸ ಶೆಟ್ಟರ ಅಭಿಮಾನಿಗಳು ಬೆಂಗಳೂರು ಮತ್ತು ಉಡುಪಿ-ಕುಂದಾಪುರದಲ್ಲಿ ಆರೆಸ್ಸೆಸ್ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟನ ಫೋಟೋಗೆ ಚಪ್ಪಲಿ ಹಾರ ಹಾಕಿ ಬೆಂಕಿ ಹಚ್ಚಿದ್ದು ಆರೆಸ್ಸೆಸ್ ನಾಯಕರನ್ನು ಕೆಂಡಾಮಂಡಲವಾಗಿಸಿದೆ.



ಹಾಲಾಡಿ ಶ್ರೀನಿವಾಸ ಶೆಟ್ಟಿ ಮತ್ತು ನಾಗರಾಜ ಶೆಟ್ಟಿ ಇವರಿಬ್ಬರು ಬಂಟ ಸಮುದಾಯದವರಾಗಿದ್ದಾರೆ. ಹಾಗೆಯೇ ಬರ್ತ್ ಡೇ ಪಾರ್ಟಿಯಲ್ಲಿದ್ದ ಹುಡುಗಿಯರೂ ಬಂಟ ಸಮುದಾಯದವರು ಎಂದು ಹೇಳಲಾಗುತ್ತಿದೆ. ಇಬ್ಬರು ಶೆಟ್ಟರು ಆರೆಸ್ಸೆಸ್ ಮತ್ತು ಬಿಜೆಪಿಗೆ ಮುಖಭಂಗ ಮಾಡಿದ್ದರಿಂದ ಬಂಟ ಸಮುದಾಯದ ಅಮಾಯಕ ಯುವತಿಯರ ಮೇಲೆ ದಾಳಿ ಮಾಡುವ ಮೂಲಕ ಆ ಸಮುದಾಯದ ಮೇಲೆ ಆರೆಸ್ಸೆಸ್ ಮತ್ತು ಬಿಜೆಪಿ ತನ್ನ ಸೇಡನ್ನು ತೀರಿಸಿಕೊಂಡಿದೆ ಎನ್ನಲಾಗುತ್ತಿದೆ. ಇದು ನಿಜವೇ ಆದರೆ ಆರೆಸ್ಸೆಸ್ ಮತ್ತು ಬಿಜೆಪಿ ತನ್ನ ಸೇಡಿಗೆ ಅಮಾಯಕ ಯುವತಿಯರನ್ನು ಬಲಿ ಕೊಟ್ಟಿದೆ ಎನ್ನಬೇಕಾಗುತ್ತದೆ.


ಕರ್ನಾಟಕದಲ್ಲಿ ಇವತ್ತು ಲಿಂಗಾಯತ ಮತ್ತು ಒಕ್ಕಲಿಗರ ನಡುವೆ ಮಾತ್ರ ದ್ವೇಷ ರಾಜಕಾರಣ ನಡೆಯುತ್ತಿಲ್ಲ, ಅದರ ಜೊತೆಗೆ ಕರಾವಳಿ ಪ್ರದೇಶದಲ್ಲಿ ಬಂಟ ಮತ್ತು ಬ್ರಾಹ್ಮಣರ ಮಧ್ಯೆಯೂ ದ್ವೇಷ ರಾಜಕಾರಣ ನಡೆಯುತ್ತಿದೆ.

- ರವಿ ಭಾಸ್ಕರ್ ಶೆಣಾವ,
ಮಂಗಳೂರು

ಪಕ್ಕಾ ಬಲಪಂಥೀಯ ಅತ್ಯಂತ ಭ್ರಷ್ಟ, ಲಂಪಟ, ಗಣಿಗಳ್ಳರ, ಭೂಗಳ್ಳರ ಪಕ್ಷ ಮತ್ತು ನಿಸ್ಸಹಾಯಕ ಹೆಣ್ಣು ಮಕ್ಕಳಿಗೆ ಬಡಿಯುವ ತಾಲೀಬಾನಿ ಸಂಸ್ಕೃತಿಯ, ಬಿಜೆಪಿ ಆಡಳಿತ ನೋಡಿದ್ದಾಯ್ತು, ಇನ್ನು ಬೆಮೆಲ್ ಕೃಷ್ಣಪ್ಪ ಸೀನ, ಮಂಜ, ಶಂಕ್ರ ಮುಂತಾದ ರಕ್ತದಾಹಿಗಳಿಂದ ತುಂಬಿರುವ ಜೆಡಿಎಸ್ ಪಕ್ಷವು ಭೂಗಳ್ಳರ, ನೆಲಮಂಗಲ ಮಾಫಿಯಾದ ಅಡ್ಡೆ ಅನಿಸಿಕೊಂಡಿದೆ.

ಇನ್ನು ಎಲ್ಲರಿಗಿಂತ ಮೊದಲು ಆಡಳಿತ ನಡೆಸಿದ್ದ ಕಾಂಗ್ರೆಸ್‌ಗೆ ಯಾವ ಪಂಥವೂ ಇಲ್ಲ, ಎಡಪಂಥವೂ ಅಲ್ಲ, ಬಲಪಂಥವೂ ಅಲ್ಲ, ಕರ್ನಾಟಕದಲ್ಲಿ ಮೊಟ್ಟ ಮೊದಲಿಗೆ ಭ್ರಷ್ಟಾಚಾರದ ಬೀಜ ಬಿತ್ತಿ ನೀರು-ಗೊಬ್ಬರ ಹಾಕಿದವರು ಈ ಕಾಂಗ್ರೆಸ್ಸಿಗರೇ. ಜನತಾದಳ ಪಕ್ಷವು ಪಂಚಾಯತಿ ರಾಜ್ಯದ ಮೂಲಕ ಈ ಭ್ರಷ್ಟಾಚಾರವನ್ನು ಹಳ್ಳಿಗಳ ಮಟ್ಟಕ್ಕೆ, ಬೇರಿನ ಅಡಿಗೆ ಇಳಿಸಿತು. ಬಿಜೆಪಿ ಅದನ್ನೇ ಆಕಾಶದೆತ್ತರಕ್ಕೆ ಏರಿಸಿತು. ಒಟ್ಟಾರೆ ನಾವು ಈ ಮೂರೂ ಬಲಪಂಥೀಯ/ನಡುಪಂಥೀಯ/ಸ್ವಹಿತ ಪಂಥೀಯ ಸ್ವಾರ್ಥಪರ ಪಕ್ಷಗಳ ಆಳ್ವಿಕೆ ಭರಪೂರ ಅನುಭವಿಸಿ ಆಯಿತು. ಕರ್ನಾಟಕವೇನೂ ಉದ್ಧಾರವಾಗಲಿಲ್ಲ, ಹಾಗಾಗಿ ಇನ್ನು 'ಎಡಪಂಥೀಯ' ವಿಚಾರಧಾರೆಗಳುಳ್ಳ ಪಕ್ಷವೊಂದಕ್ಕೆ ಅವಕಾಶ ಕೊಡುವುದು ಮತದಾರರ ಕರ್ತವ್ಯ. ಹಾಲಾಡಿ ಶ್ರೀನಿವಾಸ ಶೆಟ್ಟರಂತಹ ಪ್ರಾಮಾಣಿಕರು ಬಲ ಪಂಥೀಯ ಪಕ್ಷಗಳಿಂದ ರೋಸಿ ಹೋಗಿದ್ದಾರೆ. ಮೂಲತಃ ಹಾಲಾಡಿ ಯವರು ಸ್ವಲ್ಪ ಮಟ್ಟಿಗೆ 'ಎಡಕ್ಕೆ' ವಾಲಿರುವ ವಿಚಾರಧಾರೆಯುಳ್ಳವರು. ಅವರ ಜೀವನದ ಮೊಟ್ಟಮೊದಲ ವೋಟ್ ಸಹ ಕಮ್ಯುನಿಸ್ಟ್ ಪಕ್ಷಕ್ಕೆ ಕೊಟ್ಟಿದ್ದಂತೆ. ಹಾಗಾಗಿ ಈಗ ಹಾಲಾಡಿಯವರು ಆಸಕ್ತಿ ವಹಿಸಿ ಉತ್ತಮ ಎಡಪಕ್ಷವೊಂದಕ್ಕೆ ಕರಾವಳಿಯಲ್ಲಿ ಅಡಿಪಾಯ ಹಾಕಲಿ; ಬಲಪಂಥೀಯ ಹಿಂದೂತ್ವವಾದಿಗಳಿಗೆ ಕರಾವಳಿ ಮೊದಲ ಪ್ರಯೋಗಶಾಲೆಯಾದಂತೆ, ಎಡಪಂಥೀಯರಿಗೂ ಕರಾವಳಿ ಮೊದಲ ಪ್ರಯೋಗಶಾಲೆ ಆಗಲಿ. ಎಲ್ಲಾ ಬಲ ಪಕ್ಷಗಳಿಂದ ರೋಸಿ ಹೋಗಿರುವ ಕರಾವಳಿಯ ಮತದಾರರು ಎಡಪಕ್ಷದ ತೆಕ್ಕೆಗೆ ಬೀಳುವುದು ಖಂಡಿತ. ಆಗಲಾದರೂ ಸಂಘಪರಿ… ಮೂಗುದಾರ ಹಾಕುವುದು ಸಾಧ್ಯವಾಗಬಹುದು. … ದಿನದಿನಕ್ಕೆ ನೈತಿಕ ಪೊಲೀಸ್‌ಗಿರಿ ಹೆಚ್ಚುತ್ತಿದ್ದು ಕರಾವಳಿ… ಮರ್ಯಾದಸ್ಥರ ಜೀವನ ದುಸ್ತರವಾಗಿದೆ. ಕರಾವಳಿ… ಕೇಸರಿ ಪಡೆಗಳ ಅಟ್ಟಹಾಸಕ್ಕೆ ಕಡಿವಾಣ ಹಾಕು… ಆರ್ಥಿಕ ಹಾಗೂ ಸಾಂಖ್ಯಿಕವಾಗಿ ಪ್ರಬಲರಾಗಿರುವ … ಅಥವಾ ಬಿಲ್ಲವ ಜಾತಿಯವರಿಂದ ಮಾತ್ರ ಸಾಧ್ಯ!

-ಪ್ರವೀಣ್ ಎಸ್.ಶೆಟ್ಟಿ, ಮಂಗಳ…



ಮಂಗಳೂರಿನ ಪಡೀಲ್‌ನಲ್ಲಿರುವ ಹೋಮ್… ಮೇಲೆ ನಡೆದ ದಾಳಿಯನ್ನು ನಿರ್ಭೀತವಾಗಿ, ನೇರ… ದೃಶ್ಯ ಮಾಧ್ಯಮಕ್ಕೆ ವರದಿ ನೀಡಿರುವ ಏಕೈಕ ಕಾರಣ… 'ಕರಾವಳಿ ಅಲೆ' ಪತ್ರಿಕೆಯ ಮಾಜಿ ವರದಿಗಾರ, 'ಕ… ನ್ಯೂಸ್' ಚಾನೆಲ್‌ನ ಹಾಲಿ ವರದಿಗಾರ ನವೀನ್ … ಸೂರಿಂಜೆ ಅವರನ್ನು ಕುತಂತ್ರದಿಂದ ಮಂಗಳ… ಪೊಲೀಸ್ ಕಮೀಷನರ್ ಸೀಮಂತ್ ಕುಮಾರ್ … ಕೇಸೊಂದರಲ್ಲಿ ಸಿಲುಕಿಸಿ ತಪ್ಪಿತಸ್ಥರನ್ನು ರಕ್ಷಿಸುವ … ನಡೆಸಿದ್ದಾರೆ. ಇದು ಎಷ್ಟು ಮಾತ್ರಕ್ಕೂ ಸಹಿಸುವಂತಹ… ನವೀನ್ ಪೊಲೀಸ್ ಇನ್ಸ್‌ಪೆಕ್ಟರ್ ಅವರಿಗೆ ಫೋನ್… ಮಾಡಿದರೂ ಅದನ್ನು ಸ್ವೀಕರಿಸದ ಬೇಕೂಫ ಪೊ… ಬಗ್ಗೆ ಕ್ರಮ ಕೈಗೊಳ್ಳಲಾಗದ ಕೇಸರಿ ಕಮೀಷನರ್ … ಪರಚಿಕೊಳ್ಳುತ್ತಿದ್ದಾರೆ. ಇದು ಖಂಡನಾರ್ಹ ವಿಷಯವ… ಮಾಧ್ಯಮದ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಯತ್ನವ… ಅದೇನೇ ಇರಲಿ, ನವೀನ್ ಮಾತ್ರ ಕಮೀಷನರ… ಹೆದರದೆ "ಸತ್ಯಕ್ಕಾಗಿ ನಾನು ಜೈಲು ಸೇರಲೂ … ಎಂದಿರುವುದು ಅವರ ಕರ್ತವ್ಯ ಜವಾಬ್ದಾರಿಯನ್ನು ಮ… ಹೆಚ್ಚಿಸಿದೆ.

ಹ್ಯಾಟ್ಸ್ ಆಫ್ ಟುಯು ನವೀನ್.

- ಮೊಹಮ್ಮದ್ ಇರ್ಷಾದ್, ಮಂಗಳ…

ಬರ್ತ್ ಡೇ ಪಾರ್ಟಿ ಮಾಡಿ ಮೋಜು ಮಾ… ಹೆಣ್ಣುಮಕ್ಕಳಿಗೆ ಒದೆ ಕೊಡುವುದು ನ್ಯಾಯವೆಂದ… ಬಾರ್‌ನಲ್ಲಿ ಕುಡಿದು ಹೊರಗಡೆ ತೂರಾಡುವ ಗಂಡ… ಯಾರು ಒದೆ ಕೊಡಬೇಕು? ಗಂಡು ಕುಡಿದರೆ … ಹೆಣ್ಣು ಕೇಕ್ ತಿನ್ನುವುದು ತಪ್ಪು? - ಇದು … ನ್ಯಾಯ? ಹಿಂದೂ ಜಾಗರಣ ವೇದಿಕೆಯು … ಕುಡಿಯುವುದಿಲ್ಲವೇ? ಹೋವರ್ ಸ್ಟೇಗ…

ಬಿದ್ದವರಲ್ಲಾ... ಸ್ವಾಮಿಗಳಿಗೆ ಟೈಂ ಸರಿಯಿಲ್ಲ ಅಂತ ...ರೆ. ಹಿಂದೂ ಸಂಸ್ಕೃತಿ ರಕ್ಷಕರ ಕೈಗೆ ಸಿಗಲಿ. ನಾಲ್ಕು ... ಬಿದ್ದರೆ ಹಿಂದೂಸಂಸ್ಕೃತಿ, ಹಿಂದೂ ಧರ್ಮದ ...ವ ಆಗುತ್ತೆ!


...ಮ್ಮ ಸರ್ಕಾರಾನ ಇಂತಹದ್ದರಲ್ಲಿ ಮೆಚ್ಚಿಕೋಬೇಕು. ... ಘಟನೆಗಳು ಸಂಭವಿಸಿದಾಗಲೆಲ್ಲಾ 'ತಪ್ಪಿತಸ್ಥರ ವಿರುದ್ಧ ...ಕ್ಷಣ ಕ್ರಮ ತೆಗೆದುಕೊಳ್ಳುತ್ತೀವಿ' ಅನ್ನುತ್ತೆ. 'ಇಂತಹ ...ಪುನರಾವರ್ತನೆ ಆಗದಂತೆ ನಿಗಾವಹಿಸ್ತೀವಿ' ಅನ್ನುತ್ತೆ. ...ತಾನೆ ಇನ್ನೇನು ಮಾಡಲು ಸಾಧ್ಯ ಪಾಪ ರಾಜ್ಯದ ... ಸಂಘಪರಿವಾರದ ವಿರುದ್ಧ ಎಗರಿಬಿದ್ದಿರುವಾಗ. ...ಹೇಳುವುದು ಅನಿವಾರ್ಯವೇ ಆಗುತ್ತೆ. ಆಮೇಲೆ ...ಶಾಸ್ತ್ರ ಮಾಡಿ ಕೈತೊಳೆದುಕೊಳ್ಳುತ್ತೆ.

...ನಾವಣೆ ಸಮಯ. ಹೇಳಿಕೊಳ್ಳಲು ಯಾವುದೇ ... ಇಲ್ಲ. ಮತೀಯ ಗಲಭೆ ಪ್ರಚೋದಿಸಬೇಕಾದ್ದು ...ರ್ಯ ಅನ್ನುವ ಸರಳ ಸಂಗತಿ ಹತ್ತಾರು ವರ್ಷ ...ಯಕ್ಕೆ ಮಣ್ಣು ಹೊತ್ತ ಮೋಟಮ್ಮನವರಿಗೆ ತಿಳೀದಾ. ...ೀಸ್ ಕಾರ್ಯವನ್ನ ಸಂಘಪರಿವಾರಕ್ಕೆ ಔಟ್‌ಸೋರ್ಸ್ ...ದ್ದೀರಾ' ಅಂತಾ ಕೇಳ್ತಿದಾರಲ್ಲ, ನ್ಯಾಯವಾ ಅಂತೀನಿ. ... ಮೇಡಮ್ಮೋರೆ ನೀವು ಹೇಳ್ತಿರೋದು ಹಳೇ ಸುದ್ದಿ. ... ಮಾಡಿ ಎಷ್ಟೋ ವರ್ಷ ಆಗದೆ. 'ಹಾಗಾದರೆ ...ೀಸ್ ಇಲಾಖೆ ಯಾಕೆ ಬೇಕು? ತೆಗೆದು ಬಿಸಾಕಿ' ...ರಾ... ಹಾಗೇ ಮಾಡಬಹುದಿತ್ತು. ಆದರೂ ಪಾಪ ...ಗೂ ಸಂಸಾರ ಅಂತಾ ಇರುತ್ತೆ. ಅವರ ಹೊಟ್ಟೆ ... ಹೊಡೆಯೋದು ಅನ್ಯಾಯ ಅಲ್ಲವಾ...?

...ನ ತಲೆಗೊಂದು ಮಾತು ಹೇಳುವುದು ಕೇಳಿ ...ೂ ಜಾಗರಣ ವೇದಿಕೆ ಅಧ್ಯಕ್ಷರ ವಂಡೆ ...ಾಗಿದೆಯಂತೆ. ಯಾಕೆ ಅಂದ್ರೆ ವೇದಿಕೆ ಸದಸ್ಯರು ...ಲ್ಲಿ ಭಾಗವಹಿಸಿಯೇ ಇಲ್ಲವಂತೆ! 'ಯಾರಾದರೂ ...ೂ ಜಾಗರಣ ವೇದಿಕೆ ಬ್ಯಾನರ್ ಹಿಡಿದುಕೊಂಡು ...ದ್ದಾ ನೀವು ಹೀಗೆ ಹೇಳುತ್ತಿದ್ದೀರಲ್ಲ' ಎಂದು ಆಕ್ರೋಶ ...ಡಿಸುತ್ತಿದ್ದಾರೆ. ಅಲ್ಲಾ ಮಾರಾಯರೆ ಬ್ಯಾನರ್ ...ಕೊಂಡು ದೊಂಬಿ ಯಾರು ಮಾಡುತ್ತಾರೆ? ಅದಲ್ಲ ...ು. ಸಂಘಪರಿವಾರದ ಮೇಲೆ ಈ ರೀತಿ ಆರೋಪ ...ುವುದರಿಂದ ಬುದ್ಧಿಜೀವಿಗಳು, ಪ್ರಗತಿಪರರು ಎಂಬ ...ಲಾಡಿಗಳಿಗೆ 'ವಿಕೃತ ಆನಂದ' ದೊರೆಯಬಹುದು ...ದ್ದೀರಿ. ಇದರಲ್ಲಿ ಆನಂದಿಸುವುದಕ್ಕೆ ಏನಿದೆ ಅಂತೀನಿ. ... ನೀವೇ ತಯಾರಿಸಿದ ದಂಡು ದಿಗ್ವಿಜಯ ...ರುವಾಗ ಆದರ ಕ್ರೆಡಿಟ್ ನಿಮಗೆ ಸೇರಬೇಕಲ್ಲವಾ? ...ಷ್ಟಿ ಅಲ್ಲಗಳೆಯುವುದುಂಟಾ...!

ಕ್ಕೊ

ಮದನ್‌ಮಲ್ಲುಗೆ 'ನಿತ್ಯಾನಂದ' ಶಾಕ್



ಮದನ್‌ಮಲ್ಲು ನಿರ್ದೇಶನದ ಚಿತ್ರ 'ನಿತ್ಯಾನಂದ' ಈಗ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ವಿವಾದಾತ್ಮಕ ಅಧ್ಯಾಯವನ್ನು ಹುಟ್ಟುಹಾಕಿದೆ.


ಈ ಚಿತ್ರವನ್ನು ಆರಂಭಿಸಿದಾಗ ನಿತ್ಯಾನಂದ ಸ್ವಾಮೀಜಿ ಮತ್ತು ಆತನ ಅನುಯಾಯಿಗಳು ಈ ಸಿನಿಮಾದ ವಿರುದ್ಧ ಕೋರ್ಟ್ ಮೆಟ್ಟಲೇರಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಕೋರ್ಟ್ ಇತ್ತೀಚೆಗೆ ಒಂದು ಮಧ್ಯಂತರ ತೀರ್ಪು ನೀಡಿದೆ. ಆ ತೀರ್ಪಿನಲ್ಲಿ ಈ ಚಿತ್ರಕ್ಕೆ ಸೆನ್ಸಾರ್ ಸರ್ಟಿಫಿಕೇಟ್ ನೀಡುವ ಮೊದಲು ನಿತ್ಯಾನಂದ ಸ್ವಾಮಿಯ ಕೆಲವು ಅನುಯಾಯಿಗಳಿಗೆ ಚಿತ್ರವನ್ನು ವೀಕ್ಷಿಸಲು ಅವಕಾಶ ನೀಡಬೇಕೆಂದು ಆದೇಶಿಸಲಾಗಿತ್ತು.

ಕೋರ್ಟ್‌ನ ಆದೇಶದಂತೆ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಸೆನ್ಸಾರ್ ಮಂಡಳಿಯ ಸದಸ್ಯರಲ್ಲದೆ ಇತರರೂ ಈ ಚಿತ್ರವನ್ನು ವೀಕ್ಷಿಸಿದರು. ಚಿತ್ರ ವೀಕ್ಷಿಸಿದ ನಂತರ ನಿತ್ಯಾನಂದ ಸ್ವಾಮಿಯ ಕಡೆಯವರು ಸೆನ್ಸಾರ್ ಆಫೀಸರ್ ಅವರ ಬಳಿ ಚಿತ್ರದ ಬಗ್ಗೆ ತಮ್ಮ ಆಕ್ಷೇಪಗಳನ್ನು ಮೌಖಿಕವಾಗಿಯೂ, ಲಿಖಿತವಾಗಿಯೂ ನೀಡಿದರು. ಅದೇ ರೀತಿ ನಿರ್ಮಾಪಕ ಮದನ್‌ಮಲ್ಲು ಕಡೆಯುವರೂ ಕೂಡ ಸೆನ್ಸಾರ್ ಆಫೀಸರ್ ಮುಂದೆ ತಮ್ಮ ವಾದವನ್ನು ಮಂಡಿಸಿದರು.

ಎರಡೂ ಕಡೆಯುವರ ವಾದವನ್ನು ಆಲಿಸಿದನಂತರ ಸೆನ್ಸಾರ್ ಆಫೀಸರ್ ನಾಗರಾಜು ಮತ್ತು ಮಂಡಳಿಯ ಸದಸ್ಯರು ಸುದೀರ್ಘವಾದ ಚರ್ಚೆಯನ್ನು ನಡೆಸಿ ಈ ಚಿತ್ರದ ಬಗ್ಗೆ ಅಂತಿಮ ತೀರ್ಮಾನವನ್ನು ಕೈಗೊಂಡರು. ಈ ತೀರ್ಮಾನವನ್ನು ಈಗ ಸೆನ್ಸಾರ್ ಮಂಡಳಿಯ ಅಧ್ಯಕ್ಷರು ಕೋರ್ಟ್‌ಗೆ ನೀಡಿದ್ದಾರೆ. ನಮಗೆ ಸಿಕ್ಕ ಮಾಹಿತಿಯ ಪ್ರಕಾರ ಸುಮಾರು 22 ಪುಟಗಳಷ್ಟು ಸುದೀರ್ಘವಾದ ಆ ವರದಿಯಲ್ಲಿ ಸೆನ್ಸಾರ್ ಆಫೀಸರ್ ನಾಗರಾಜು "ಈ ಚಿತ್ರ ಸೆನ್ಸಾರ್ ಸರ್ಟಿಫಿಕೇಟ್ ಪಡೆಯಲು ಯೋಗ್ಯವಾದುದಲ್ಲ, ಇದನ್ನು ಈಗಿರುವ ಹಾಗೆಯೇ ಪ್ರದರ್ಶಿಸಲು ಅವಕಾಶ ಮಾಡಿಕೊಟ್ಟರೆ ನಿತ್ಯಾನಂದ ಸ್ವಾಮಿ ಮತ್ತು ಅವರ ಅನುಯಾಯಿಗಳಿಗೆ ಅವಮಾನ ಮಾಡಿದಂತಾಗುತ್ತದೆ" ಎಂಬ ಅರ್ಥ ಬರುವ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರಂತೆ.

ಸೆನ್ಸಾರ್ ಆಫೀಸರ್ ನೀಡಿರುವ ವರದಿಯನ್ನು ಓದಿದನಂತರ ಕೋರ್ಟ್ ತನ್ನ ಅಂತಿಮ ತೀರ್ಮಾನವನ್ನು ಪ್ರಕಟಿಸಲಿದೆ. ಒಂದು ವೇಳೆ ಈ ಚಿತ್ರ ಪ್ರದರ್ಶನಕ್ಕೆ ಯೋಗ್ಯವಾದುದಲ್ಲ, ಇದಕ್ಕೆ ಅನುಮತಿ ನೀಡಬಾರದು ಎಂದು ಕೋರ್ಟ್ ಆದೇಶ ನೀಡಿದರೆ ನಿರ್ಮಾಪಕ ಕಂ ನಿರ್ದೇಶಕ ಮದನ್ ಮಲ್ಲು ಅವರ 'ನಿತ್ಯಾನಂದ' ಸಿನಿಮಾ ಡಬ್ಬದಲ್ಲೇ ಕೊಳೆಯುವಂತಾಗುತ್ತದೆ. ಆಗ ಮದನ್‌ಮಲ್ಲುಗೆ ಉಳಿವ ದಾರಿ ಆ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವುದು.


ಅದೇನೇ ಇರಲಿ, ಈ ಚಿತ್ರ ನೋಡಿದ ಸೆನ್ಸಾರ್ ಮಂಡಳಿಯ ಹೆಚ್ಚಿನ ಸದಸ್ಯರ ಪ್ರಕಾರ "ಇಡೀ ಚಿತ್ರ ನಿತ್ಯಾನಂದ ಸ್ವಾಮಿಯ ಜೀವನದ ಸುತ್ತ ಹೆಣೆದಂತೆ ಕಾಣಿಸುತ್ತದೆಯೇ ವಿನಃ ಇದು ಎಲ್ಲೂ ಕಾಲ್ಪನಿಕ ಕಥಾವಸ್ತು ಎಂದು ಅನ್ನಿಸುವುದೇ ಇಲ್ಲ." ಈಗ ಬಿಜೆಪಿ ಪಕ್ಷದಲ್ಲಿ ಸಕ್ರಿಯವಾಗಿರುವ ಮದನ್‌ಮಲ್ಲು ಪಾಲಿಗೆ ಖಂಡಿತವಾಗಿಯೂ ಇದೊಂದು ದೊಡ್ಡ ಮುಖಭಂಗ.



ಈ ಚಿತ್ರ ಆರಂಭದಿಂದಲೂ ದಿನಕ್ಕೊಂದು ವಾದ-ವಿವಾದವನ್ನು ಹುಟ್ಟುಹಾಕುತ್ತಲೇ ಬಂದಿದೆ. ನಿತ್ಯಾನಂದ ಸ್ವಾಮಿಯ ಲೀಲೆಗಳ ಬಗ್ಗೆ ಕೋರ್ಟ್ ಕೂಡ ಇನ್ನೂ ಅಂತಿಮವಾದ ತೀರ್ಪು ನೀಡಿಲ್ಲದ ಕಾರಣ ಅವರನ್ನು ಆರೋಪಿಯಂತೆ ಚಿತ್ರೀಕರಿಸಿದ್ದೇ ಮಲ್ಲು ಪಾಲಿಗೆ ಈಗ ದೊಡ್ಡ ತೊಂದರೆಯಾಗಿದೆ.

ಇತ್ತೀಚೆಗೆ ಸಮಾಜದಲ್ಲಿ ಯಾವುದೇ ಘಟನೆ ನಡೆಯಲಿ ಅಥವಾ ವಿವಾದ ಸೃಷ್ಟಿಯಾಗಲಿ, ಕೂಡಲೇ ಅದನ್ನೇ ಸಿನಿಮಾ ಮಾಡುವ ಪ್ರವೃತ್ತಿ ಕನ್ನಡ ಚಿತ್ರರಂಗದಲ್ಲಿ ಹೆಚ್ಚಾಗುತ್ತಿದೆ. ಇಂತಹ ಪ್ರವೃತ್ತಿಗೆ 'ನಿತ್ಯಾನಂದ' ಚಿತ್ರದ ಸುತ್ತ ನಡೆದಿರುವ ವಿವಾದ ಒಂದು ಬ್ರೇಕ್ ಹಾಕಬಹುದೋ ಏನೋ.

...g me if I'm guilty."-Narendra Modi to Urdu weekly



ಕರ್ಮವೆಲ್ಲ ನಿಷ್ಫಲವಾದಂತೆ. ಎಲ್ಲಿ ನಾರಿಯರು ಕಂಬನಿಗರೆಯುವರೋ ಆ ಕುಲವೇ ನಾಶವಾದಂತೆ - ಇದು ಅವರಿಗೆ ಅರ್ಥವಾದರೆ ನಮ್ಮ ಹೆಣ್ಣು ಮಕ್ಕಳು ಸೇಫ್, ಇಲ್ಲವಾದರೆ ಮೇಲಿನಂತೆ ಆಗುತ್ತದೆ.

- ಇಸ್ಮತ್ ಫಜೀರ್

ರಾವಣ, ದುಶ್ಯಾಸನ, ಕಂಸ ಮತ್ತು ಶಕುನಿಗಳೇ ಹಿಂದೂ ಜಾಗರಣ ವೇದಿಕೆಯ ಸದಸ್ಯರಾ?

- ಎ.ಜಿ.ಸೂರ್ಯವಂಶಿ, ಎಸ್‌ಎಂಎಸ್ ಮೂಲಕ

...ಕೊಳ್ಳುವುದಿಲ್ಲವೇ? ಇಂತಹವರಿಗೆ ನಮ್ಮ ...ಾನದ ಮೇಲೆ ಗೌರವವಿಲ್ಲ. ಇವರ ಸಂಘಟನೆಗಳನ್ನು ...ೇ ಬಹಿಷ್ಕರಿಸಬೇಕು.

- ವಿಕಾಸ್ ಆರ್ ಮೌರ್ಯ, ಬೆಂಗಳೂರು

...ಹಾತ್ಮ ಗಾಂಧಿಯ ಬದಲಾಗಿ ನರೇಂದ್ರ ಮೋದಿ, ...ಾನದ ಬದಲಾಗಿ ಮನುಸ್ಮೃತಿ; ಕಾನೂನು ಮತ್ತು ...ವಸ್ಥೆಯ ಬದಲಾಗಿ ಅನೈತಿಕ ಪೊಲೀಸ್‌ಗಿರಿ, ...ನಿಯ ಬದಲಾಗಿ ಕಾರ್ಪೊರೇಟ್ ಬಾಬಾಗಳು, ...ೀಯತೆಯ ಬದಲಾಗಿ ಸೂಡೋ ದೇಶಪ್ರೇಮ, ...ರ್ದದ ಬದಲಾಗಿ ದ್ವೇಷ, ನೆಮ್ಮದಿಯ ಬದಲಾಗಿ ..., ಶಾಂತಿಯ ಬದಲಾಗಿ ಭಯೋತ್ಪಾದನೆ, ...ಯರಿಗೆ ಸಮಾನತೆಯ ಬದಲಾಗಿ ಕೀಳುದರ್ಜೆಯ ...ೀಡುವುದು - ಇವೆಲ್ಲ ಆರೆಸ್ಸೆಸ್ ಮತ್ತು ಅದರ ...ಂಗಸಂಸ್ಥೆಗಳ ನಿಜವಾದ ಅಜೆಂಡಾವಾಗಿದೆ. ಇಂತಹ ...ಳ ಅಮಾನವೀಯ ದಾಳಿಗಳನ್ನು ನೋಡುವಂತಹ ...್ಯ ಇವತ್ತು ನಮ್ಮದಾಗಿದೆ.

- ರವಿ ಕುಮಾರ್, ಹಾಸನ

...ದಾಸವನ್ನು ಬ್ಲೂ ಫಿಲಂ ನೋಡಿದವರಿಗೆ, ಸ್ನೇಹಿತನ ...ಯ ಮೈ ಮುಟ್ಟಿದವನಿಗೆ, ನರ್ಸ್ ಜೊತೆ ಕಾಮಕೇಳಿ ...ವನಿಗೆ, ವರದಕ್ಷಿಣೆ, ಮರ್ಯಾದೆ ಹತ್ಯೆ, ಅತ್ಯಾಚಾರ, ...ಾರ ಮಾಡುವವರಿಗೆ ಹಿಂದೂ ಜಾಗರಣ ವೇದಿಕೆ ...ಷ್ಟು ಹೊಡೆಯುತ್ತದೆ?

...ಶ್ಲಿಯ ಅಧ್ಯಾಪಕರು, ಎಸ್‌ಎಂಎಸ್ ಮೂಲಕ

...ಲ್ಲಿ ನಾರಿಯರನ್ನು ಪೂಜ್ಯ ದೃಷ್ಟಿಯಿಂದ ಕಾಣುವರೋ ...ೇವತೆಗಳು ಸುಪ್ರೀತರಾಗುವರು. ಎಲ್ಲಿ ನಾರಿಯರನ್ನು ...ದಿಂದ ಕಾಣುವರೋ ಅಲ್ಲಿ ಪುರುಷರು ಮಾಡುವ

ಮಂಗಳೂರಿನ ಪಡೀಲ್‌ನಲ್ಲಿರುವ 'ಮಾರ್ನಿಂಗ್ ಮಿಸ್ಟ್' ಹೋಂ ಸ್ಟೇಯಲ್ಲಿ ಬರ್ತ್‌ಡೇ ಪಾರ್ಟಿ ನಡೆಸುತ್ತಿದ್ದ ವಿದ್ಯಾರ್ಥಿನಿಯರ ಮೇಲೆ ಹಿಂದೂ ಜಾಗರಣ ವೇದಿಕೆಯ ಗೂಂಡಾಗಳು ನಡೆಸಿದ ದಾಳಿ ಖಂಡನಾರ್ಹ.

ಮೂರು ವರ್ಷಗಳ ಹಿಂದೆ ಶ್ರೀರಾಮಸೇನೆಯ ಗೂಂಡಾಗಳು ಪಬ್ ದಾಳಿ ನಡೆಸಿ ಭೀತಿಯನ್ನು ಸೃಷ್ಟಿಸಿದ್ದರು. ಇದೀಗ ಮಂಗಳೂರಿನಲ್ಲಿ ಮತ್ತೊಮ್ಮೆ ಸಂಘಪರಿವಾರದ ಗೂಂಡಾಗಳು ಯುವತಿಯರ ಮೇಲೆ ಕಿರಾತಕರಂತೆ ಹಲ್ಲೆ ನಡೆಸಿದ್ದಾರೆ. ಅವರನ್ನು ಬಂಧಿಸಲು ಬಂದ ಪೊಲೀಸರನ್ನು ಬಿಜೆಪಿ ಬೆಂಬಲಿಗರು ಯಾಮಾರಿಸಿದ್ದಾರೆ. ಇವೆಲ್ಲವೂ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬುದನ್ನು ಸೂಚಿಸುತ್ತದೆ. ಜಿಲ್ಲೆಯಲ್ಲಿ ಪದೇಪದೇ ಒಂಟಿ ಮಹಿಳೆಯರ ಮೇಲಿನ ದಾಳಿ, ಅತ್ಯಾಚಾರ ಯತ್ನ, ಕೊಲೆ ಇವೆಲ್ಲವೂ ಮಾಮೂಲು ಎಂಬಂತೆ ನಡೆಯುತ್ತಿದೆ.

ವಿದ್ಯಾರ್ಥಿನಿಯರ ಮೇಲೆ ನಡೆದ ದಾಳಿಯನ್ನು ಸಮರ್ಥಿಸಲು ಕೆಲವು ಸಂಘಟನೆಗಳು ಪ್ರಯತ್ನಿಸುತ್ತಿರುವುದು ಅತ್ಯಂತ ಆಘಾತಕಾರಿಯಾಗಿದೆ. ಜಿಲ್ಲೆಯಲ್ಲಿ ಮನೆಯ ಹೊರಗೆ ಮಾತ್ರವಲ್ಲ ಮನೆಯೊಳಗೂ ಮಹಿಳೆ ಸುರಕ್ಷಿತಳಲ್ಲ ಎಂಬ ಭಾವನೆ ಭಯಪಡುವಂತಹದ್ದಾಗಿದೆ. ಪರಿಸ್ಥಿತಿಯು ಹೀಗೆಯೇ ಮುಂದುವರಿದರೆ ಮುಂದೊಂದು ದಿನ ಜಿಲ್ಲೆಯ ಎಲ್ಲಾ ಮಹಿಳಾ ಸಂಘಟನೆಗಳು ಒಟ್ಟಾಗಿ ಬೀದಿಗಿಳಿದು ಹೋರಾಟ ನಡೆಸಬೇಕಾದೀತು.

ಯುವತಿಯರ ಮೇಲೆ ದೌರ್ಜನ್ಯ ನಡೆಸಿದ ಪುಂಡರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಿ, ಮಹಿಳೆಯರ ರಕ್ಷಣೆಯ ಖಾತರಿ ನೀಡುವ ಜವಾಬ್ದಾರಿ ಜಿಲ್ಲಾಡಳಿತ ಮತ್ತು ಪೊಲೀಸ್ ಕಮೀಷನರಿಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಮ್ಮ ಸಂಘಟನೆ ಆಗ್ರಹಿಸುತ್ತದೆ.

- ಸಮೀನಾ ಮಲಾರ್, ಜಿಲ್ಲಾಧ್ಯಕ್ಷರು,
ನ್ಯಾಷನಲ್ ವಿಮೆನ್ಸ್ ಫ್ರಂಟ್, ದ.ಕ. ಜಿಲ್ಲೆ

ಈ ತನಕ ಉಳಿದದ್ದೇ ಸದಯ್ಯನ ದೊಡ್ಡ ಭಾಗ್ಯ

ಜಯಲಲಿತಾಗೆ ಪನೀರ್ ಸೆಲ್ವಂ ಸಿಕ್ಕಂತೆ ಯಡ್ಡಿ ಮಹಾಶಯನಿಗೆ ನಂಬಿಕೆಯೋಗ್ಯ ಹಾಗು ಸಭ್ಯತೆಯ ಮುಖವಾಡದ ಸದಾನಂದ ಸಿಕ್ಕಿದ್ದರು. ಆದರೆ ಯಡಿಯೂರಪ್ಪನೇ ಹೇಳಿರುವಂತೆ ಪಂಚಾಯತಿ ಇಲೆಕ್ಷನ್ ಗೆಲ್ಲುವ ತಾಕತ್ತೂ (ಮುಖ್ಯಮಂತ್ರಿಯಾಗಿದ್ದುಕೊಂಡು ತಾನು ತೆರವು ಮಾಡಿದ ಕ್ಷೇತ್ರವನ್ನೇ ಗೆಲ್ಲಿಸಿಕೊಳ್ಳಲಾಗಲಿಲ್ಲ) ಸದಯ್ಯನಿಗೆ ಇರಲಿಲ್ಲ. ಇದನ್ನು ಮನಗಂಡೇ ಸದಯ್ಯ ತನಗೆ ಬಿಟ್ಟಿಯಾಗಿ ಸಿಕ್ಕಿದ್ದ ಮುಖ್ಯಮಂತ್ರಿ ಹುದ್ದೆಯನ್ನು ಬಿಟ್ಟುಕೊಟ್ಟರೆ ತಾನು ಮುಂದೆಂದೂ ಮುಖ್ಯಮಂತ್ರಿ ಆಗಲಾರೆ ಎಂದೇ ಆ ಕುರ್ಚಿಯನ್ನು ಸುಲಭದಲ್ಲಿ ಬಿಡಲು ಒಪ್ಪಲಿಲ್ಲ.

ತಮಾಷೆಯೆಂದರೆ, ಬಿಜೆಪಿ ಅಧಿಕಾರಕ್ಕೆ ಬಂದಿದ್ದೇ ಈ ಕುರ್ಚಿ ಬಿಟ್ಟುಕೊಡದ ಸಿಂಪತಿಯ ಆಧಾರದಲ್ಲಿ. ಕೋ-ಜಾ ಸರ್ಕಾರದ 20-20 ಒಪ್ಪಂದದಂತೆ ಕುಮಾರಸ್ವಾಮಿ ಅಧಿಕಾರ ಬಿಟ್ಟುಕೊಟ್ಟಿರಲಿಲ್ಲ. ಅದನ್ನೇ ಸದಯ್ಯನೂ ಸೇರಿದಂತೆ ಎಲ್ಲಾ ಚೆಡ್ಡಿಗಳು ಚುನಾವಣೆಯಲ್ಲಿ ಡಂಗುರ ಸಾರಿ ಅಧಿಕಾರಕ್ಕೇರಿದ್ದರು.

ಹೀಗೆ ಸಿಕ್ಕ ಅಧಿಕಾರವನ್ನು ಭದ್ರ ಮಾಡಿಕೊಳ್ಳಲು ಅಕ್ರಮ ಗಣಿಗಾರಿಕೆಯಿಂದ ಪಡೆದ ಹಣದಲ್ಲಿ ಆಪರೇಷನ್ ಕಮಲ ಶುರುವಿಟ್ಟುಕೊಂಡರು. ಆರಂಭದಿಂದಲೇ ಕಚ್ಚಾಟಕ್ಕೆ ಬಿದ್ದ ಚೆಡ್ಡಿಗಳು ತಿಂಗಳಿಗೊಮ್ಮೆ ಎಂಬಂತೆ ದೆಹಲಿಗೆ ದೌಡಾಯಿಸುತ್ತಿದ್ದರು. ಇದೆಲ್ಲದ ಮಧ್ಯೆ ರಾಜ್ಯದ ಅಭಿವೃದ್ಧಿಯನ್ನೇ ಚೆಡ್ಡಿಗಳು ಕಡೆಗಣಿಸಿದರು. ಭಿನ್ನಮತ ತಾರಕಕ್ಕೇರಿ ಇನ್ನೇನು ಸರಕಾರ ಬಿದ್ದೇ ಬಿಟ್ಟಿತು ಎನ್ನುವಾಗ ಅದು ಹೇಗೋ ತೇಪೆ ಹಚ್ಚಿ ಅಧಿಕಾರವನ್ನು ಉಳಿಸಿಕೊಳ್ಳುತ್ತಿದ್ದರು.

ಇಂತಹ ಹಲವಾರು ಭಿನ್ನಮತ ರಾದ್ಧಾಂತದಲ್ಲಿ ಸದಯ್ಯ ಮಾತ್ರ ಯಾವ ಬಣದೊಂದಿಗೂ ಗುರುತಿಸಿಕೊಳ್ಳದೇ ಇರುತ್ತಿದ್ದರು. ಜಾತಿ, ಹಣ, ವೈಯಕ್ತಿಕ ಪ್ರಭಾವಳಿ ಇಲ್ಲದ ಕಾರಣಕ್ಕೆ ಸದಯ್ಯ ರಾಜ್ಯಾಧ್ಯಕ್ಷನ ನೆಪದಲ್ಲಿ ತಾನೂ ದೆಹಲಿಗೆ ದೌಡಾಯಿಸಿ ವರಿಷ್ಠರೆದುರು ಹಲ್ಕಿರಿದು ತನ್ನ ಅಸ್ತಿತ್ವವನ್ನು ಅವರಿಗೆ ತೋರ್ಪಡಿಸಿಕೊಂಡು ಬರುತ್ತಿದ್ದರು. ಅಂತೂ ಇಬ್ಬರ (ಬಣಗಳ) ಜಗಳದಲ್ಲಿ ಮೂರನೆಯವನಿಗೆ ಲಾಭ ಆಯಿತು ಎಂಬ ತತ್ವದಂತೆ ಯಡ್ಡಿಯ ಕೃಪೆಯೊಂದಿಗೆ ಸದಯ್ಯನಿಗೆ ಸಿಎಂ ಕುರ್ಚಿ ಲಭಿಸಿತು.

ಮೂಲತಃ ವಕೀಲರಾದ ಸದಯ್ಯ ಮಾತಿನ ಮಲ್ಲ. ಮಾತಿನ ಮೂಲಕವೇ ಬೆಣ್ಣೆಯಿಂದ ಕೂದಲು ತೆಗೆಯಬಲ್ಲಂತಹ ನಾಜೂಕಯ್ಯ. ಸದಯ್ಯನ ಇಂತಹ ಚಾಲಾಕಿತನಕ್ಕೆ ಯಡ್ಡಿ ಮರುಳಾಗಿ ಜಾರಿ ಬಿದ್ದು ಮುಖ ಮೂತಿ ತರಚಿಕೊಂಡಿದ್ದು. ಯಡ್ಡಿ ಲಿಂಗಾಯತರನ್ನು ಮುಂದಿಟ್ಟುಕೊಂಡು ಸದಯ್ಯನ ವಿರುದ್ಧ ದಾಳಿಗಿಳಿದಾಗ ಒಕ್ಕಲಿಗರನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳಲು "ನಾನು ಸಿಎಂ ಆಗಿದ್ದು ಒಕ್ಕಲಿಗರಿಂದ" ಎಂಬ ಬಾಲಿಶ ಹೇಳಿಕೆಯನ್ನು ಬಹಿರಂಗವಾಗಿ ನೀಡುವಷ್ಟರಮಟ್ಟಿಕ್ಕೆ ಸದಯ್ಯ ಇಳಿದು ತನ್ನ ನೈಜಮುಖವನ್ನು ತೋರ್ಪಡಿಸಿದ್ದರು. ಮೊನ್ನೆ ಮೊನ್ನೆ ತಾನು ರಾಜೀನಾಮೆ ಕೊಡದೇ ವಿಧಿಯಿಲ್ಲ ಎಂಬಂತಾದಾಗ ಇದೇ ಸದಯ್ಯ ಪತ್ರಕರ್ತರ ಮುಂದೆ "ಉತ್ತರ ಕರ್ನಾಟಕದ ಜಾತೀಯತೆ ದಕ್ಷಿಣಕ್ಕೂ ಕಾಲಿಟ್ಟ ಪರಿಣಾಮ ನಾನು ಇವನ್ನೆಲ್ಲ ಅನುಭವಿಸುತ್ತಿದ್ದೇನೆ" ಎಂದು ಹೇಳಿಕೆ ನೀಡಿದರು.


ಆದರೆ ಸದಯ್ಯನೂ ಸೇರಿ ಚೆಡ್ಡಿಗಳೆಲ್ಲ ಮಾಡಿದ್ದು, ಉಂಡದ್ದು, ಆಡಿದ್ದು ಇದೇ ಜಾತಿರಾಜಕಾರಣ ಮತ್ತು ಕೋಮುವಾದವನ್ನಲ್ಲವೇ? ಹಾಗಿದ್ದೂ ರಾಜ್ಯದ ಉತ್ತರದವರನ್ನು ದೂರುವ ಯೋಗ್ಯತೆ ಮತ್ತು ನೈತಿಕತೆ ಇವರಿಗೆ ನಿಜಕ್ಕೂ ಇದೆಯೇ?

- ಶಶಿ ಪುತ್ತೂರು, ದ.ಕ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday

ಕೊನೆಗೂ ಗೆದ್ದ ಉಪ್ಪಿ



'ಗಾಡ್‌ಫಾದರ್' ಚಿತ್ರ ಬಿಡುಗಡೆಯ ಮುನ್ನ ಭಾರೀ ಕುತೂಹಲ ಮತ್ತು ವಿವಾದವನ್ನು ಏಕಕಾಲದಲ್ಲಿ ಸೃಷ್ಟಿಸಿತ್ತು. ಅದರಲ್ಲೂ ಕೆ.ಆರ್.ರೆಹಮಾನ್ ಇದರ ಸಂಗೀತ ನಿರ್ದೇಶನ ಮಾಡಿದ್ದು ಭಾರೀ ಸುದ್ದಿಯಾಗಿತ್ತು. ಆದರೆ ಚಿತ್ರ ನೋಡುವಾಗ ರೆಹಮಾನ್‌ನ ಮಾಂತ್ರಿಕತೆ ಎಲ್ಲೂ ಕಾಣಿಸುವುದೇ ಇಲ್ಲ. ಹೀಗಾಗಿ ರೆಹಮಾನ್ ಅವರ ಕನ್ನಡದ ಎಂಟ್ರಿ ತುಂಬಾ ಸಪ್ಪೆಯಾಗಿದೆ ಎಂದು ಹೇಳಬಹುದು.

ಇನ್ನು ನಾಯಕ ಉಪೇಂದ್ರ ಇತ್ತೀಚೆಗೆ ಗೆಲುವಿನ ರುಚಿ ಕಂಡವರೇ ಅಲ್ಲ. ಅವರ ಪ್ರತಿಯೊಂದು ಚಿತ್ರವೂ ಬಿಡುಗಡೆಯ ಮುನ್ನ ಸುದ್ದಿ ಮಾಡಿದರೂ ತೆರೆಕಂಡ ನಂತರ ಬಾಕ್ಸ್‌ಆಫೀಸ್‌ನಲ್ಲಿ ಮುಗ್ಗರಿಸಿದ್ದೇ ಹೆಚ್ಚು. ಅದಕ್ಕೆ ಇತ್ತೀಚಿನ ಉದಾಹರಣೆಯೆಂದರೆ 'ಕಠಾರಿವೀರ ಸುರಸುಂದರಾಂಗಿ' ಎಂಬ ತ್ರೀಡಿ ಚಿತ್ರ. ಈ ಚಿತ್ರದ ತ್ರೀಡಿ ಎಫೆಕ್ಟ್ ಆಗಲಿ ಅಥವಾ ಭವ್ಯವಾದ ಸೆಟ್‌ಗಳಾಗಲೀ ಕನ್ನಡಿಗರ ಮನಸ್ಸನ್ನು ಗೆಲ್ಲಲಿಲ್ಲ. ಹೀಗಾಗಿ ತಾಂತ್ರಿಕತೆ ಮತ್ತು ನಿರ್ಮಾಣದ ಶ್ರೀಮಂತಿಕೆಯ ಬೆಂಬಲದಿಂದ ಗೆಲುವನ್ನು ಕಾಣಬಹುದು ಎಂಬ ಉಪ್ಪಿಯ ಕನಸು ಭಗ್ನವಾಗಿತ್ತು.

ಆದರೆ 'ಗಾಡ್‌ಫಾದರ್' ಚಿತ್ರದಲ್ಲಿ ಉಪ್ಪಿಯ ನಟನೆ ನಿಜಕ್ಕೂ ಆತನ ಟೀಕಾಕಾರರೂ ಮೆಚ್ಚುವಷ್ಟು ಅದ್ಭುತವಾಗಿ ಮೂಡಿಬಂದಿದೆ. ಮುಖ್ಯವಾಗಿ, ಆತನ ಭರತನಾಟ್ಯ ಶೈಲಿ, ಆ ಪಾತ್ರದ ಬಾಡಿ ಲಾಂಗ್ವೇಜ್ ನಿಜಕ್ಕೂ ಆತ ಉತ್ತಮ ನಟ ಎಂಬುದನ್ನು ತೋರಿಸುತ್ತದೆ. ಇಂತಹ ಪ್ರಯೋಗಾತ್ಮಕ ಮತ್ತು ರಿಸ್ಕೀ ಪಾತ್ರವನ್ನು ಕೈಗೆತ್ತಿಕೊಂಡ ಉಪ್ಪಿಯನ್ನು ಅಭಿನಂದಿಸಲೇಬೇಕು.

ಈ ಚಿತ್ರದ ನಾಯಕಿಯಾಗಿರುವ ಜಯಮಾಲಾ ಅವರ ಪುತ್ರಿ ಸೌಂದರ್ಯ ಹೇಗೆ ತನ್ನ ಪಾತ್ರವನ್ನು ನಿರ್ವಹಿಸುತ್ತಾಳೆ ಎಂಬ ಕುತೂಹಲ ಉದ್ಯಮದ ಅನೇಕ ನಿರ್ಮಾಪಕ-ನಿರ್ದೇಶಕರಲ್ಲಿತ್ತು. ಒಂದು ವೇಳೆ ಆಕೆ ಚೆನ್ನಾಗಿ ನಟಿಸಿದರೆ ತಮ್ಮ ಮುಂದಿನ ಚಿತ್ರಗಳಿಗೆ ಆಕೆಯನ್ನು ಬುಕ್ ಮಾಡಬಹುದಲ್ಲ ಎಂದು ಹಲವು ನಿರ್ದೇಶಕರು ಕಾದುಕುಳಿತಿದ್ದರು. ಚಿತ್ರದಲ್ಲಿ ಸೌಂದರ್ಯಳ ಪಾತ್ರ ಅಷ್ಟೊಂದು ವಿಸ್ತಾರವಾಗಿಲ್ಲದಿದ್ದರೂ ತನಗೆ ಸಿಕ್ಕ ಪಾತ್ರವನ್ನು ಆಕೆ ಚೊಕ್ಕದಾಗಿ ನಿರ್ವಹಿಸಿದ್ದಾಳೆ ಎಂದು ಹೇಳಬಹುದು. ಸೌಂದರ್ಯ ಕನಿಷ್ಠವೆಂದರೂ ಒಂದೆರಡು ಕೇಜಿ ಮೈತೂಕವನ್ನು ಇಳಿಸಿಕೊಂಡರೆ ಕನ್ನಡ ಚಿತ್ರರಂಗದ ಪಾಲಿಗೆ ಒಂದು ಆಸ್ತಿಯಾಗಬಹುದು.

ಒಲಂಪಿಕ್ಸ್ ಮತ್ತು ಕ್ರಿಕೆಟ್ ನಡುವೆಯೂ 'ಗಾಡ್‌ಫಾದರ್' ಬಾಕ್ಸ್‌ಆಫೀಸ್‌ನಲ್ಲಿ ಚೆನ್ನಾಗಿಯೇ ನಡೆಯುತ್ತಿದೆ.

ರಾಧಿಕಾಳ ಮೊದಲ ಚಿತ್ರ ಈಗ ಬರುತ್ತಿ

ಸುಮಾರು ಆರು ವರ್ಷಗಳ ಹಿಂದೆ ಪ್ರಾರಂಭವಾದ '18ನೇ ಕ್ರಾಸ್ ನಮ್ಮ ಅಡ್ಡೆ' ಎಂಬ ಚಿತ್ರ ಈಗ ಬಿಡುಗಡೆಯಾಗುತ್ತಿದೆ. ಈ ಚಿತ್ರದ ವಿಶೇಷತೆಯೆಂದರೆ ಇದು ರಾಧಿಕಾ ಪಂಡಿತ್ ನಟಿಸಿದ ಮೊದಲ ಸಿನಿಮಾ.

ಈಗ ಶಿವರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಸೇರಿದಂತೆ ದೊಡ್ಡ ದೊಡ್ಡ ನಟರ ಜೊತೆಗೂ ನಟಿಸಿ, ಸುಮಾರು 15 ಕ್ಕೂ ಹೆಚ್ಚು ಚಿತ್ರಗಳಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿರುವ ರಾಧಿಕಾ ಪಂಡಿತ್ ಕಳೆದ ಆರು ವರ್ಷಗಳಲ್ಲಿ ಮೂರು ಬಾರಿ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ಗೆದ್ದಿದ್ದಾಳೆ. ಜೊತೆಗೆ ರಾಜ್ಯ ಸರ್ಕಾರದಿಂದ ಅತ್ಯುತ್ತಮ ನಾಯಕಿ ನಟಿ ಎಂಬ ಪ್ರಶಸ್ತಿಯನ್ನೂ ರಾಧಿಕಾ ಪಡೆದಿದ್ದಾರೆ.

ಇಷ್ಟೆಲ್ಲಾ ಸಾಧನೆ ಮಾಡಿದ ನಂತರ ಆಕೆಯ ಮೊದಲ ಚಿತ್ರ ಈಗ ಬಿಡುಗಡೆ ಆಗುತ್ತಿರುವುದಕ್ಕೆ ಗಾಂಧಿನಗರದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈಗ ರಾಧಿಕಾಗೆ ತಾರಾ ಮೌಲ್ಯ ಸಿಕ್ಕಿರುವುದರಿಂದ '18ನೇ ಕ್ರಾಸ್ ನಮ್ಮ ಅಡ್ಡೆ' ಚಿತ್ರಕ್ಕೆ ಒಳ್ಳೆಯ ಓಪನಿಂಗ್ ಸಿಗಬಹುದು, ಆದರೆ ಆಕೆಯ ನಾಮಬಲದಲ್ಲೇ ಚಿತ್ರ ಬಾಕ್ಸ್ ಆಫೀಸಿನಲ್ಲಿ ಗೆಲ್ಲುತ್ತದೆ ಎಂದು ಹೇಳುವುದು ಕಷ್ಟ.

ಇದೆಲ್ಲದರ ಮಧ್ಯೆ "ನಾನು ನಟಿಸಿದ ಮೊದಲ ಚಿತ್ರ ಬಿಡುಗಡೆಯಾಗುತ್ತಿರುವುದರಿಂದ ನನಗೆ ಅತ್ಯಂತ ಸಂತೋಷವಾಗುತ್ತಿದೆ" ಎಂದು ರಾಧಿಕಾ ನಮ್ರವಾಗಿ ನುಡಿಯುತ್ತಿದ್ದಾಳೆ. ಅಂದಹಾಗೆ, ಈಕೆಯ ಮೊದಲ ಚಿತ್ರದಲ್ಲಿ ಈಕೆಯ ಜೊತೆ ನಾಯಕನಾಗಿ ನಟಿಸಿರುವವರು ದೀಪಕ್.





'ಭಾಗೀರಥಿ'ಯನ್ನು ಗೆಲ್ಲಿಸಿದ 'ಭಗೀರಥ'




ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಭಾಗೀರಥಿ' ಚಿತ್ರವನ್ನು ಅದರ ನಿರ್ಮಾಪಕ ಬಿ.ಕೆ.ಶ್ರೀನಿವಾಸ್ ತಮ್ಮ ಭಗೀರಥ ಪ್ರಯತ್ನದಿಂದ 50 ದಿನ ಓಡಿಸಿದ್ದಾರೆ. ಅಷ್ಟೇ ಅಲ್ಲ, "ಈ ಚಿತ್ರ ಖಂಡಿತವಾಗಿಯೂ 100 ದಿನಗಳ ಸಂಭ್ರಮವನ್ನು ಕಾಣುತ್ತದೆ" ಎಂಬ ಭರವಸೆಯನ್ನು ಶ್ರೀನಿವಾಸ್ ಹೊಂದಿದ್ದಾರೆ. ಅದೇನೇ ಇರಲಿ, 'ಭಾಗೀರಥಿ' ಸದಭಿರುಚಿಯ ಕಲಾತ್ಮಕ ಚಿತ್ರ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಜನಪದ ಕಥಾವಸ್ತುವಿನ ಈ ಚಿತ್ರವನ್ನು ಬರೀ ಬುದ್ಧಿಜೀವಿಗಳು ಮಾತ್ರವಲ್ಲ, ಅನೇಕ ಹಳ್ಳಿಗಳ ಜನ ಕೂಡ ನೋಡುತ್ತಿದ್ದಾರಂತೆ. "ಇಂತಹ ಚಿತ್ರ ಜನಕ್ಕೆ ತಲುಪಬೇಕಾದರೆ ಸರ್ಕಾರದ ಮತ್ತು ಉದ್ಯಮದ ಸಹಾಯಹಸ್ತ ತೀರಾ ಅಗತ್ಯ" ಎನ್ನುತ್ತಾರೆ ಶ್ರೀನಿವಾಸ್.

ಹೀಗೊಬ್ಬ ಸಿನಿಮಾ ಕ್ಯಾಪ್ಟನ್

ಮೊನ್ನೆ ಟೌನ್‌ಹಾಲ್‌ನಲ್ಲಿ 'ಗೀತಾ ಬ್ಯಾಂಗಲ್ ಸ್ಟೋರ್' ಎಂಬ ಹೊಸ ಚಿತ್ರ ಸೆಟ್ಟೇರಿತು. ಈ ಚಿತ್ರದ ಶೀರ್ಷಿಕೆ ವಿನೂತನವಾಗಿದೆಯಲ್ಲವೇ? ಅಷ್ಟೇ ಅಲ್ಲ ಚಿತ್ರದ ಶೀರ್ಷಿಕೆಯ ಕೆಳಗೆ 'ಇಲ್ಲಿ ಕನಸುಗಳನ್ನು ಮಾರಲಾಗುತ್ತದೆ' ಎಂದು ಬರೆದಿರುವುದು ಆಕರ್ಷಣೀಯವಾಗಿದೆ. ಈ ಚಿತ್ರದ ನಿರ್ದೇಶಕ ಮಂಜುಮಿತ್ರ ಅತ್ಯಂತ ಸುದೀರ್ಘ ಸಮಯ ತೆಗೆದುಕೊಂಡು ಈ ಚಿತ್ರದ ಕಥಾವಸ್ತುವನ್ನು ಹೆಣೆದಿದ್ದಾರಂತೆ.

ಈ ಚಿತ್ರದ ಮುಹೂರ್ತದ ದಿನ ಟೌನ್‌ಹಾಲ್‌ನಲ್ಲಿ ಕನ್ನಡ ಚಿತ್ರರಂಗದ ಮೊದಲ ನಿರ್ದೇಶಕ ವೈ.ವಿ.ರಾವ್ ಅವರಿಂದ ಹಿಡಿದು ಮೊನ್ನೆಮೊನ್ನೆ ಬಂದ ಎಲ್ಲ ನಿರ್ದೇಶಕರ ಫೋಟೋಗಳನ್ನು ಮಂಜುಮಿತ್ರ ಪ್ರದರ್ಶನದ ವ್ಯವಸ್ಥೆ ಮಾಡಿಸಿದ್ದು ವಿಶೇಷವಾಗಿತ್ತು. 'ನಿರ್ದೇಶಕನೇ ಚಿತ್ರದ ಕ್ಯಾಪ್ಟನ್' ಎಂದು ಸಾರುವ ಜನ ನಮ್ಮಲ್ಲಿ ಅದೆಷ್ಟೋ ಸಂಖ್ಯೆಯಲ್ಲಿದ್ದಾರೆ. ಆದರೆ ಈ ತರಹ ಎಲ್ಲಾ ನಿರ್ದೇಶಕರ ಫೋಟೋಗಳನ್ನು ತಮ್ಮ ಚಿತ್ರಕ್ಕೆ ಸಂಬಂಧವಿಲ್ಲದಿದ್ದರೂ ಪ್ರದರ್ಶನ ಮಾಡಿ ಅವರಿಗೊಂದು ಸಲಾಂ ಹೇಳಿದ ನಿರ್ದೇಶಕ ಮಂಜುಮಿತ್ರ ಅವರಿಗೆ ಮತ್ತು ಅವರ ಈ ಕಲ್ಪನೆಗೆ ನಮ್ಮದೊಂದು ಸಲಾಂ.

'ಗಾಡ್‌ಫಾದರ್'ಗೆ ದಾರಿಬಿಟ್ಟ 'ಶಿವ



ವರಮಹಾಲಕ್ಷ್ಮಿ ಹಬ್ಬದಂದು ಬಿಡುಗಡೆಯಾಗುತ್ತದೆ ಎಂದು ಭಾರೀ ಸುದ್ದಿ ಮಾಡಿದ್ದ ಶಿವರಾಜ್‌ಕುಮಾರ್ ಅಭಿನಯದ 101ನೇ ಚಿತ್ರ 'ಶಿವ' ಅಂದು ಬಿಡುಗಡೆಯಾಗದಿರುವುದಕ್ಕೆ ನಿರ್ಮಾಪಕ ಶ್ರೀಕಾಂತ್ ಅವರ ಉದಾರ ಮನೋಭಾವವೇ ಕಾರಣ. 'ಗಾಡ್‌ಫಾದರ್' ಚಿತ್ರದ ನಿರ್ಮಾಪಕ ಕೆ.ಮಂಜು ಅವರು ಮನವಿ ಮಾಡಿದ ಮೇರೆಗೆ 'ಶಿವ' ಚಿತ್ರದ ನಿರ್ಮಾಪಕ ಶ್ರೀಕಾಂತ್ ತಮ್ಮ ಚಿತ್ರದ ಬಿಡುಗಡೆಯನ್ನು ಮುಂದೂಡಿದ್ದರು. ಒಂದೇ ದಿ... ದೊಡ್ಡ ದೊಡ್ಡ ಚಿತ್ರಗಳು ಬಿಡುಗಡೆಯಾದರೆ ಎರಡೂ ... ನಿರ್ಮಾಪಕರಿಗೆ ನಷ್ಟವಾಗುತ್ತದೆ ಎಂಬ ಕಾರಣಕ್ಕಾಗಿ ಮತ್ತು ... ತುಂಬಾ ದಿನಗಳಿಂದ ತಮ್ಮ ಚಿತ್ರವನ್ನು ಬಿಡುಗಡೆ ... ಕ್ಯೂನಲ್ಲಿದ್ದುದರಿಂದ ಶ್ರೀಕಾಂತ್ ಮಂಜು ಅವರ ಚಿತ್ರಕ್ಕೆ ದಾರಿ ಮಾಡಿ...

ಆದರೆ ಈಗ ಗಾಂಧಿನಗರದಿಂದ ತೇಲಿಬಂದಿರುವ ಸುದ್ದಿಯ ಪ್ರಕಾ... ಚಿತ್ರದ ಬಿಡುಗಡೆ ಇನ್ನೂ ಎರಡು ವಾರ ಮುಂದೂಡಲ್ಪಟ್ಟಿದೆಯಂತೆ ... ಆಗಸ್ಟ್ 25ರ ಆಜುಬಾಜಿನಲ್ಲಿ 'ಶಿವ' ತೆರೆಕಾಣಲಿದೆ. ಶ್ರೀಕಾಂತ್ ... ಪ್ರಚಾರಕ್ಕೆ ಎಂತಹ ಪ್ಲ್ಯಾನ್ ಮಾಡಿಕೊಂಡಿದ್ದಾರೆಂಬುದು ಯಾರಿಗೂ ... ಏಕೆಂದರೆ ಏಕಾಏಕಿ ಎರಡು ವಾರ ಚಿತ್ರದ ಬಿಡುಗಡೆಯನ್ನು ... ಹಾಕಬೇಕಾದರೆ ಅದರ ಹಿಂದೆ ಏನಾದರೂ ಮರ್ಮ ಇದ್ದೇ ಇರು... ಬಗ್ಗೆ ಕೇಳಿದರೆ ಶ್ರೀಕಾಂತ್ ಸುಮ್ಮನೆ ನಗುತ್ತಾರೆಯೇ ವಿನಃ ಏನೇ ... ಕೊಡಲು ಸಿದ್ಧರಿಲ್ಲ. ಹೀಗಾಗಿ ಶಿವರಾಜ್‌ಕುಮಾರ್ ಅಭಿ... 'ಶಿವ'ನನ್ನು ನೋಡಲು ಇನ್ನೂ ಮೂರು ವಾರ ಕಾಯಲೇಬೇ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, B...